ಸಂಪುಟ: 05 ಸಂಚಿಕೆ: 02 ಪುಟಗಳು: 08 ಭಾನುವಾರ 16 ಮಾರ್ಚ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5
ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಕರ್ನಾಟಕದ 7 ಜಿಲ್ಲೆಗಳಲ್ಲಿ ಮಕ್ಕಳಲ್ಲಿ ಅಪೌಷ್ಟಿಕತೆ! ರಾಯಚೂರಿನಲ್ಲೇ ಅಧಿಕ ಪ್ರಮಾಣ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ 7 ಜಿಲ್ಲೆಗಳ ಮಕ್ಕಳಲ್ಲಿ ಸಾಧಾರಣಾ ಮತ್ತು ತೀವ್ರ ಅಪೌಷ್ಟಿಕತೆ ಕಂಡು ಬಂದಿದೆ. ಈ ಪೈಕಿ ರಾಯಚೂರು ಹಾಗೂ ಕಲಬುರಗಿ ಜಿಲ್ಲೆಯಲ್ಲಿ ಅಪೌಷ್ಟಿಕತೆಯ ಪ್ರಮಾಣ ಹೆಚ್ಚಿದೆ. ರಾಯಚೂರು ಜಿಲ್ಲೆಯಲ್ಲಿ ಸಾಧಾರಣಾ ಅಪೌಷ್ಟಿಕತೆ 11818 ರಷ್ಟು ಇದ್ದರೆ, ತೀವ್ರ ಅಪೌಷ್ಟಿಕತೆ 2317 ರಷ್ಟಿದೆ.

ಮಕ್ಕಳಲ್ಲಿ ಅಪೌಷ್ಟಿಕತೆ ಗಂಭೀರ ಸಮಸ್ಯೆಯಾಗಿದ್ದು, ಸಾಮಾಜಿಕ, ಆರ್ಥಿಕ ಹಾಗೂ ಆರೋಗ್ಯ ಮತ್ತು ಪೌಷ್ಟಿಕಾಂಶದ ಸಂಬಂಧಿತ ಸಮಸ್ಯೆಗಳು ಇದಕ್ಕೆ ಕಾರಣವಾಗಿದೆ. ಮಕ್ಕಳಲ್ಲಿ ಅಪೌಷ್ಟಿಕತೆ ನಿವಾರಣೆ ಮಾಡಲು ಮಾತೃಪೂರ್ಣ ಯೋಜನೆ ಜಾರಿಯಲ್ಲಿದೆ. ಅಲ್ಲದೆ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ನೀಡಲಾಗುತ್ತಿದೆ. ಹೀಗಿದ್ದರೂ ಇದರ ನಿಯಂತ್ರಣ ಸಾಧ್ಯವಾಗಿಲ್ಲ.

ನಿವಾರಣೆಗೆ ಕ್ರಮಗಳೇನು?

- ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮದಡಿ ತೀವ್ರ ಅಪೌಷ್ಟಿಕ ಮಕ್ಕಳಿಗೆ ಘಟಕ ವೆಚ್ಚ ರೂ.12/-ರಂತೆ 800 ಕ್ಯಾಲೋರಿ, 20-25 ಗ್ರಾಂ ಪ್ರೋಟೀನ್ ಯುಕ್ತ ಪೌಷ್ಟಿಕ ಆಹಾರವನ್ನು ಒದಗಿಸಲಾಗುತ್ತಿದೆ.
- ರಾಜ್ಯ ಸರ್ಕಾರದ ಸೃಷ್ಟಿ ಯೋಜನೆಯಡಿ 06 ತಿಂಗಳಿಂದ 3 ವರ್ಷದ ತೀವ್ರ ಮತ್ತು ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ. ಮೊಟ್ಟೆ ಸೇವಿಸದ ಮಕ್ಕಳಿಗೆ ವಾರದಲ್ಲಿ 6 ದಿನ ಹಾಲನ್ನು ನೀಡಲಾಗುತ್ತಿದೆ.
- 3 ವರ್ಷದಿಂದ 6 ವರ್ಷದ ತೀವ್ರ ಮತ್ತು ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ. ಮೊಟ್ಟೆ ಸೇವಿಸದ ಮಕ್ಕಳಿಗೆ ವಾರದಲ್ಲಿ 6 ದಿನ ಹಾಲನ್ನು ನೀಡಲಾಗುತ್ತಿದೆ.
- ರಾಜ್ಯ ಸರ್ಕಾರದ ಕ್ಷೀರಭಾಗ್ಯ ಯೋಜನೆಯಡಿ 6 ತಿಂಗಳಿಂದ 6 ವರ್ಷದ ತೀವ್ರ ಮತ್ತು ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 03 ದಿನ ದಿನಕ್ಕೆ 20 ಗ್ರಾಂನಂತೆ ಕೆನೆಭರಿತ ಹಾಲನ್ನು ಹೆಚ್ಚುವರಿಯಾಗಿ ಮನೆಗೆ ವಿತರಿಸಲಾಗುತ್ತಿದೆ.
- ತೀವ್ರ ಅಪೌಷ್ಟಿಕ ಮಕ್ಕಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪೌಷ್ಟಿಕ ಪುನರ್ವಸತಿ ಕೇಂದ್ರ (NRC)ಗಳಿಗೆ ದಾಖಲಿಸಿ ಚಿಕಿತ್ಸೆ ಹಾಗೂ ಪುನರ್ವಸತಿ ಕಲ್ಪಿಸಲಾಗುತ್ತಿದೆ.
- ಇದಲ್ಲದೇ CMAM Protocol(Community Based Management of Acute Malnutrition) ಕಡಿತಣತಭಿತಟ ಅಭಿವೃದ್ಧಿಪಡಿಸಲಾಗಿದ್ದು, ಇದು ಸಮುದಾಯ ಆಧಾರಿತ ಅಪೌಷಿಕ ಮಕ್ಕಳ ನಿರ್ವಹಣೆಗಾಗಿ ರೂಪಿಸಲಾಗಿದೆ.
- ಆರೋಗ್ಯ ಮತ್ತು ಪೌಷ್ಟಿಕ ಶಿಬಿರಗಳನ್ನು ಏರ್ಪಡಿಸಿ ಅಧಿಕ ಪೌಷ್ಟಿಕತೆಯುಳ್ಳ ಆಹಾರಗಳನ್ನು ತಯಾರಿಸುವ ಕುರಿತು ಮತ್ತು ಮಕ್ಕಳಿಗೆ ಪೌಷ್ಟಿಕತೆಯುಳ್ಳ ಆಹಾರವನ್ನು ನೀಡಲು ಅರಿವು ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಹಾಗೂ ಪೋಷಣ್ ಮಾಸಾಚರಣೆ ಕಾರ್ಯಕ್ರಮದ ಮೂಲಕ ಸಹ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ವಿಶೇಷ ಪೌಷ್ಟಿಕ ಆಹಾರದ ಕುರಿತು ಅರಿವು ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

ಯಾವ ಜಿಲ್ಲೆಯಲ್ಲಿ ಎಷ್ಟು ಪ್ರಮಾಣ?

ಬಳ್ಳಾರಿ			
ಸಾಧಾರಣಾ ಅಪೌಷ್ಟಿಕ ಮಕ್ಕಳು	4077	ತೀವ್ರ ಅಪೌಷ್ಟಿಕ	871
ಬೀದರ್			
ಸಾಧಾರಣಾ ಅಪೌಷ್ಟಿಕ ಮಕ್ಕಳು	6129	ತೀವ್ರ ಅಪೌಷ್ಟಿಕ	867
ಕಲಬುರ್ಗಿ			
ಸಾಧಾರಣಾ ಅಪೌಷ್ಟಿಕ ಮಕ್ಕಳು	10944	ತೀವ್ರ ಅಪೌಷ್ಟಿಕ	2732
ಕೊಪ್ಪಳ			
ಸಾಧಾರಣಾ ಅಪೌಷ್ಟಿಕ ಮಕ್ಕಳು	3934	ತೀವ್ರ ಅಪೌಷ್ಟಿಕ	360
ವಿಜಯ ನಗರ			
ಸಾಧಾರಣಾ ಅಪೌಷ್ಟಿಕ ಮಕ್ಕಳು	5353	ತೀವ್ರ ಅಪೌಷ್ಟಿಕ	1201
ಯಾದಗಿರಿ			
ಸಾಧಾರಣಾ ಅಪೌಷ್ಟಿಕ ಮಕ್ಕಳು	5033	ತೀವ್ರ ಅಪೌಷ್ಟಿಕ	608
ರಾಯಚೂರು			
ಸಾಧಾರಣಾ ಅಪೌಷ್ಟಿಕ ಮಕ್ಕಳು	11818	ತೀವ್ರ ಅಪೌಷ್ಟಿಕ	2317

ವಿನ್ಯಾಸಗಾರರು ಬೇಕಾಗಿದ್ದಾರೆ

ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ.

ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9448225696
ಉದಯ ವಾಹಿನಿ
#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com

ಕೈವಾರ ತಾತಯ್ಯ ಧಾರ್ಮಿಕ ಕಾರ್ಯಕ್ರಮದಲ್ಲಿ ಚಿಲ್ಲರೆ ರಾಜಕೀಯ

• ಉದಯವಾಹಿನಿ, ಬೆಂಗಳೂರು

ಅದೊಂದು ಧಾರ್ಮಿಕ ಕಾರ್ಯಕ್ರಮ, ಶ್ರೀ ಯೋಗಿನಾರೇಯಣ ಯತೀಂದ್ರ (ಕೈವಾರ ತಾತಯ್ಯ) ಜಯಂತಿ ಅಂಗವಾಗಿ ನಡೆದ ಸಮಾರಂಭದಲ್ಲಿ ಮೇಳೈಸಿದ್ದು ರಾಜಕೀಯ ಮೇಲಾಟ. ಅಬ್ಬರದ ಭಾಷಣ, ಕಾರ್ಯಕ್ರಮ ನಿಮ್ಮಂದಲ್ಲಾ ಎನ್ನುವ ಆಕ್ರೋಶದ ಮಾತು. ಪ್ರದೀಪ್ ಈಶ್ವರ್, ನೀವು ಇಲ್ಲಿ ಸಮುದಾಯವನ್ನು ಒಡೆಯಲು ಬಂದಿದ್ದೀರಾ? ಇದು ಬಿಜೆಪಿ ಕಾರ್ಯಕ್ರಮನಾ? ಇದು ಸಿದ್ದರಾಮಯ್ಯನವರ ಕಾರ್ಯಕ್ರಮ, ನಿಮ್ಮಪ್ಪನ ಕಾರ್ಯಕ್ರಮ ಅಲ್ಲ ಎಂದು ಕೂಗಾಡಿದರು. ಆಗ, ಬೆಂಗಳೂರು ಸೆಂಟ್ರಲ್ ಲೋಕಸಭಾ ಸದಸ್ಯ ಪಿ.ಸಿ.ಮೋಹನ್ ಎದ್ದು ನಿಂತು, ಇದು ಸಿದ್ದರಾಮಯ್ಯನವರ ಕಾರ್ಯಕ್ರಮವಾದರೆ, ನಾನು ಇಲ್ಲಿ ಇರಬೇಕಾ ಎಂದು ಪ್ರಶ್ನಿಸಿದರು. ಕೈವಾರ ತಾತಯ್ಯ ಕಾರ್ಯಕ್ರಮವನ್ನು ಜಾರಿಗೆ ತಂದವರು ಬಸವರಾಜ ಬೊಮ್ಮಾಯಿ ಎನ್ನುವುದು ನೆನಪಿರಲಿ. ಬಲಿಜ ಸಮುದಾಯಕ್ಕೆ ಬೇಕಾಗಿದ್ದನ್ನು ಮಾಡಿದ್ದು ಬಿಜೆಪಿ ಎಂದು ಹೇಳಿದಾಗ, ಪ್ರದೀಪ್ ಈಶ್ವರ ಕಾರ್ಯಕ್ರಮದಿಂದ ಎದ್ದು ಹೊರ ನಡೆದರು. ಇದಾದ ನಂತರ, ನಡೆದ ವಿದ್ಯಮಾನಕ್ಕೆ ಪಿ.ಸಿ.ಮೋಹನ್, ಸಮುದಾಯದ ಕ್ಷಮೆಯನ್ನು ಯಾಚಿಸಿದರು.

ಕಲ್ಯಾಣ ಕರ್ನಾಟಕ ಜನರಿಗೆ ದಿನೇಶ್ ಗುಂಡೂರಾವ್ ಹಿಂಗ್ಯಾಕ್ ಹೇಳ್ಯಾರ್ರಿ..

• ಉದಯವಾಹಿನಿ, ರಾಯಚೂರು

ರಾಯಚೂರಿನ ಮಾನ್ವಿಯಲ್ಲಿ ಮಾತನಾಡಿದ ದಿನೇಶ್ ಗುಂಡುರಾವ್, ಈ ಬಾರಿಯ ಬೇಸಿಗೆಯ ತಾಪಮಾನವನ್ನು ಎದುರಿಸಲು ರಾಜ್ಯದ ಜನ ಮತ್ತು ಆರೋಗ್ಯ ಇಲಾಖೆ ಸಜ್ಜಾಗಬೇಕಿದೆ.. ಎಂದು ಸೂಚ್ಯವಾಗಿ ಹೇಳಿದರು. ರಾಜ್ಯದಲ್ಲಿ ಅದರಲ್ಲೂ ಉತ್ತರ ಮತ್ತು ಕಲ್ಯಾಣ ಕರ್ನಾಟಕ ಭಾಗದಲ್ಲಿ ಬಿಸಿಲಿನ ತಾಪಮಾನ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಜನ ಈ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ದೇಹವನ್ನು ತಂಪಾಗಿಟ್ಟುಕೊಳ್ಳುವ ಪ್ರಕ್ರಿಯೆಗಳನ್ನು ಆರಂಭಿಸಬೇಕು. ಬಿಸಿಲು ಸಮಯದಲ್ಲಿ ಮನೆಯಿಂದ ಹೊರಹೋಗದಿರುವುದನ್ನು ರೂಢಿಸಿಕೊಳ್ಳಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸಲಹೆ ನೀಡಿದರು. ಬಿಸಿಲಿನ ಪ್ರಕೋಪದಿಂದ ತಪ್ಪಿಸಿಕೊಳ್ಳಲು, ಮಧ್ಯಾಹ್ನ 12ರಿಂದ 3ರವರೆಗೆ ಮನೆಯಿಂದ ಹೊರ ಹೋಗುವುದನ್ನು ಸಾಧ್ಯವಾದಷ್ಟು ಮಟ್ಟಿಗೆ ತಪ್ಪಿಸಿ. ವರ್ಕ್ ಫ್ರಮ್ ಹೋಮ್ ಆಯ್ಕೆ ಉತ್ತಮ. 3 ಗಂಟೆಗಳ ಕಾಲ ಮನೆಯಲ್ಲೇ ಇರುವುದರಿಂದ ಬಿಸಿಲಿನ ಕಾರಣಕ್ಕೆ ಎದುರಾಗುವ ಆರೋಗ್ಯಕರ ಸಮಸ್ಯೆಗಳಿಂದ ದೂರ ಇರಬಹುದು.. ಎಂದು ದಿನೇಶ್ ಗುಂಡೂರಾವ್ ಸೂಚಿಸಿದರು. ಬಿಸಿಲು ಹೆಚ್ಚಾಗುತ್ತಿರುವುದರಿಂದ ಸರ್ಕಾರಿ ಕಚೇರಿಗಳ ಕೆಲಸದ ಸಮಯ ಬದಲಾವಣೆಯ ಬಗ್ಗೆ ಸರ್ಕಾರ ಮಟ್ಟದಲ್ಲಿ ತೀರ್ಮಾನವಾಗಬೇಕಿದೆ. ಆದರೆ ಸರ್ಕಾರಿ ಅಧಿಕಾರಿಗಳು ಫೀಲ್ಡ್ ವಿಸಿಟ್, ಕ್ಷೇತ್ರ ವೀಕ್ಷಣೆ ಮುಂತಾದ ದೈನಂದಿನ ಜವಾಬ್ದಾರಿಗಳನ್ನು ಬೆಳಗಿನ ಜಾವ ಅಥವಾ ಸಾಯಂಕಾಲದ ಸಮಯದಲ್ಲಿ ಕೈಗೊಳ್ಳಬೇಕು. ಸರ್ಕಾರ ಸಮಯ ಬದಲಾವಣೆ ತೀರ್ಮಾನ ಮಾಡಿದರೆ ಅದನ್ನು ನಾನು ಸ್ವಾಗತಿಸುತ್ತೇನೆ ಎಂದು ದಿನೇಶ್ ಗುಂಡೂರಾವ್ ನುಡಿದರು.

■ ಶೀಘ್ರವೇ ಸುನಿತಾ, ವಿಲ್ಮೋರ್ ಭೂಮಿಗೆ; ಇವರ ಬದಲಿಗೆ ಬಾಹ್ಯಾಕಾಶದಲ್ಲಿ ಉಳಿಯಲಿದೆ ಹೊಸ ಸಿಬ್ಬಂದಿ ■ ಸುನಿತಾ ವಿಲಿಯಮ್ಸ್ 9 ತಿಂಗಳ ತ್ರಿಶಂಕು ಸ್ಥಿತಿಗೆ ಕಡೆಗೂ ಮುಕ್ತಿ! ■ ಭೂಮಿಗೆ ಬಂದಾದ ನಂತರ ದೈಹಿಕ ಸಮಸ್ಯೆಗಳ ಕಾಟ! ■ ಸುನೀತಾ ವಿಲಿಯಮ್ಸ್, ಬುಚ್ ವಿಲ್ಮೋರ್ ಮರಳಿ ಕರೆತರಲು ಸ್ಪೇಸ್‌ಎಕ್ಸ್, ನಾಸಾ ಕಾರ್ಯಾಚರಣೆ

ಫಾಲ್ಕನ್ ರಾಕೆಟ್ ಉಡಾವಣೆ ನಾಸಾ ಕಾರ್ಯಾಚರಣೆ

• ಉದಯವಾಹಿನಿ, ದೆಹಲಿ

ಕಳೆದ 9 ತಿಂಗಳಿನಿಂದ ಬಾಹ್ಯಾಕಾಶದಲ್ಲಿ ಸಿಕ್ಕಿಕೊಂಡಿರುವ ಗಗನಯಾತ್ರಿಗಳಾದ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರನ್ನು ಭೂಮಿಗೆ ಕರೆತರುವ ಪ್ರಯತ್ನ ನಡೆದಿದೆ. ಈ ಹಿನ್ನೆಲೆಯಲ್ಲಿ ಉಪಗ್ರಹ ಉಡಾವಣೆ ಮಾಡಿದೆ.

ಅಂತರರಾಷ್ಟ್ರೀಯ ಬಾಹ್ಯಾಕಾಶದಲ್ಲಿ ಭಾರೀ ಸದ್ದು ಮಾಡಿದ್ದ ಭಾರತೀಯ ಮೂಲದ ಅಮೆರಿಕದ ಗಗನಯಾತ್ರಿಗಳಾದ ಸುನೀತಾ ವಿಲಿಯಮ್ಸ್ ಮತ್ತು ಅವರ ಸಹವರ್ತಿ ಬುಚ್ ವಿಲ್ಮೋರ್ ಅವರನ್ನು ಭೂಮಿಗೆ ಕರೆದುಕೊಂಡು ಬರಲು ನಾಸಾ ಮತ್ತು ಸ್ಪೇಸ್‌ಎಕ್ಸ್ ಬಹುನಿರೀಕ್ಷಿತ ಸಿಬ್ಬಂದಿಯೊಂದಿಗೆ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಪ್ರಾರಂಭಿಸಿದೆ. ಕ್ರೂ ಡ್ರ್ಯಾಗನ್ ಕ್ಯಾಪ್ಸುಲ್ ನ್ನು ಈ ಕಾರ್ಯಾಚರಣೆಯಲ್ಲಿ ಉಪಯೋಗಿಸಲಾಗಿದೆ. ಬೋಯಿಂಗ್‌ನ ಸ್ಟಾರ್‌ಲೈನರ್ ಸಮಸ್ಯೆಗಳಿಂದಾಗಿ ಒಂಬತ್ತು ತಿಂಗಳಿನಿಂದ ಬಾಹ್ಯಾಕಾಶದಲ್ಲಿ ಸಿಲುಕಿಕೊಂಡಿದ್ದ ಗಗನಯಾತ್ರಿಗಳಾದ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಅವರನ್ನು ಮರಳಿ ಕರೆತರಲು ನಾಸಾ ಮತ್ತು ಸ್ಪೇಸ್‌ಎಕ್ಸ್ ಶುಕ್ರವಾರ ಸಂಜೆ 7:03 ಕ್ಕೆ EDT (ಶನಿವಾರ ಬೆಳಿಗ್ಗೆ 4:30 ಕ್ಕೆ IST) ಫ್ಲೋರಿಡಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಕ್ರೂ-10 ಮಿಷನ್ ಅನ್ನು ಪ್ರಾರಂಭಿಸಿದೆ. ಕ್ರೂ-10 ಕಾರ್ಯಾಚರಣೆಯಲ್ಲಿ ಫಾಲ್ಕನ್ 9 ರಾಕೆಟ್ ಡ್ರ್ಯಾಗನ್ ಬಾಹ್ಯಾಕಾಶ ನೌಕೆಯನ್ನು ಹೊತ್ತೊಯ್ದಿತು.ಈ ಕಾರ್ಯಾಚರಣೆಯು ನಾಲ್ಕು ಸಿಬ್ಬಂದಿಯನ್ನು ISSಗೆ ಕಳುಹಿಸಿತು.

1 ಸ್ಪೇಸ್‌ಎಕ್ಸ್ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಹೊಸ ಸಿಬ್ಬಂದಿ ಕಳುಹಿಸಿಕೊಡುವ ಉಪಗ್ರಹ ಉಡಾವಣೆ

2 ಕಳೆದ 6 ತಿಂಗಳಿನಿಂದ ಸಿಲುಕಿರುವ ಇಬ್ಬರು ಗಗನಯಾತ್ರಿಗಳು

3 ಕ್ರೂ-೧೦ ಮಿಷನ್‌ನಲ್ಲಿ ಡ್ರ್ಯಾಗನ್ ಬಾಹ್ಯಾಕಾಶ ನೌಕೆಯನ್ನು ಹೊತ್ತ ಫಾಲ್ಕನ್ 9 ರಾಕೆಟ್

ನಾಸಾ ಗಗನಯಾತ್ರಿಗಳಾದ ಆನ್ ಮೆಕ್‌ಕ್ಲೇನ್ ಮತ್ತು ನಿಕೋಲ್ ಅಯರ್ಸ್, JAXA(ಜಪಾನ್ ಏರೋಸ್ಪೇಸ್ ಎಕ್ಸ್‌ಪ್ಲೋರೇಶನ್ ಏಜೆನ್ಸಿ) ಗಗನಯಾತ್ರಿ ಟಕುಯಾ ಒನಿಶಿ ಮತ್ತು ರೋಸ್ಕೋಸ್ಮೋಸ್ ಗಗನಯಾತ್ರಿ ಕಿರಿಲ್ ಪೆಸ್ಕೋವ್ ಅವರನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕಳುಹಿಸಲಾಯಿತು.

ಸ್ಪೇಸ್‌ಎಕ್ಸ್‌ನ ಮಾನವ ಬಾಹ್ಯಾಕಾಶ ಸಾರಿಗೆ ವ್ಯವಸ್ಥೆಯಡಿಯಲ್ಲಿ ಕ್ರೂ-10 10ನೇ ಸಿಬ್ಬಂದಿ ಸಂಪೂರ್ಣ ಕಾರ್ಯಾಚರಣೆಯಾಗಿದೆ ಮತ್ತು ಡೆಮೊ-2 ಪರೀಕ್ಷಾ ಹಾರಾಟ ಸೇರಿದಂತೆ ನಾಸಾದ ವಾಣಿಜ್ಯ ಸಿಬ್ಬಂದಿ ಕಾರ್ಯಚರಣೆ ಮೂಲಕ ISS ನಿಲ್ದಾಣಕ್ಕೆ ಸಿಬ್ಬಂದಿಯೊಂದಿಗೆ 11ನೇ ಹಾರಾಟ ವಾಗಿದೆ. ಕಳೆದ ವರ್ಷ ಜೂನ್‌ನಲ್ಲಿ ಐಎಸ್‌ಎಸ್ ತಲುಪಿದ ನಂತರ ಸುನೀತಾ ವಿಲಿಯಮ್ಸ್ ಮತ್ತು ಬುಚ್ ವಿಲ್ಮೋರ್ ಒಂಬತ್ತು ತಿಂಗಳ ಕಾಲ ಅಲ್ಲಿಯೇ ಸಿಲುಕಿಕೊಂಡಿದ್ದಾರೆ. ಅವರು ಸುಮಾರು ಒಂದು ವಾರ ಅಲ್ಲಿಯೇ ಇರಬೇಕಿತ್ತು. ಉಡಾವಣೆಗೂ ಮುನ್ನ, ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಅವರು ನಾಸಾದ ಸ್ಪೇಸ್‌ಎಕ್ಸ್ ಕ್ರೂ -10 ಗೆ ಬೆಂಬಲ ವ್ಯಕ್ತಪಡಿಸಿ ವೀಡಿಯೊ ಸಂದೇಶವನ್ನು ಹಂಚಿಕೊಂಡಿದ್ದಾರೆ ಎಂದು ಫಾಕ್ಸ್ ನ್ಯೂಸ್ ವರದಿ ಮಾಡಿದೆ. Xನಲ್ಲಿ ಪೋಸ್ಟ್ ಮಾಡಿದ ವೀಡಿಯೊದಲ್ಲಿ, ಹೆಗ್ಸೆತ್, ''ನಾವು ನಿಮಗಾಗಿ ಪ್ರಾರ್ಥಿಸುತ್ತಿದ್ದೇವೆ ಎಂದು ಹೇಳಲು ನಾನು ಸ್ವಲ್ಪ ಸಮಯ ತೆಗೆದುಕೊಳ್ಳುತ್ತೇನೆ. ''ನಾವು ನಿಮಗೆ ದೇವರ ಆಶೀರ್ವಾದವನ್ನು ಬಯಸುತ್ತೇವೆ ಮತ್ತು ನಿಮ್ಮೆಲ್ಲರನ್ನೂ ಶೀಘ್ರದಲ್ಲೇ ಭೂಮಿಗೆ ಸ್ವಾಗತಿಸಲು ನಾವು ಎದುರು ನೋಡುತ್ತಿದ್ದೇವೆ'' ಎಂದು ಅವರು ಹೇಳಿದರು. ಇನ್ನು ಈ ಬಗ್ಗೆ ಟ್ರಂಪ್ ಕೂಡ ಎಲೋನ್ ಮಸ್ಕ್ ಅವರ ಜತೆಗೆ ಮಾತುಕತೆ ನಡೆಸಿ, ಗಗನಯಾತ್ರಿಗಳನ್ನು ಮತ್ತೆ ಭೂಮಿಗೆ ಕರೆದುಕೊಂಡು ಬರುವ ಕೆಲಸವನ್ನು ಮಾಡಿ ಎಂದು ಹೇಳಿದ್ದಾರೆ. ಇದಕ್ಕೆ ಮಸ್ಕ್ ಕೂಡ ಪ್ರತಿಕ್ರಿಯೆ ನೀಡಿದ್ದಾರೆ. ನಿವೃತ್ತ ಯುಎಸ್ ನೌಕಾಪಡೆಯ ಕ್ಯಾಪ್ಟನ್ ಬುಚ್ ವಿಲ್ಮೋರ್ ಮತ್ತು ನಿವೃತ್ತ ಯುಎಸ್ ನೌಕಾಪಡೆಯ ಕ್ಯಾಪ್ಟನ್ ಸುನಿ ವಿಲಿಯಮ್ಸ್ ಎಂದು ಹೇಳಲಾಗಿದೆ.

ಮರಳಿ ಕರೆತರುವ ಕಾರ್ಯಾಚರಣೆ

ನಾಸಾ ಗಗನಯಾತ್ರಿಗಳಾದ ಅನ್ನೆ ಮೆಕ್ ಲೈನ್ ಮತ್ತು ನಿಕೋಲ್ ಅಯರ್ಸ್, ಜಾಕ್ಸಾ (ಜಪಾನ್ ಏರೋಸ್ಪೇಸ್ ಎಕ್ಸ್ ಪ್ಲೋರೇಷನ್ ಏಜೆನ್ಸಿ) ಗಗನಯಾತ್ರಿ ಟಕುಯಾ ಒನಿಶಿ ಮತ್ತು ರೋಸ್ ಕೋಸ್ಮೋಸ್ ಗಗನಯಾತ್ರಿ ಕಿರಿಲ್ ಪೆಸ್ಕೊವ್ ಫ್ಲೋರಿಡಾದ ನಾಸಾ ಕೆನಡಿಯಲ್ಲಿರುವ ಗಗನಯಾತ್ರಿ ಕ್ರೂ ಕ್ವಾರ್ಟರ್ಸ್‌ನಲ್ಲಿ ಉಳಿಯಲಿದ್ದಾರೆ. ಕ್ರೂ -10 ಇದು ಸ್ಪೇಸ್‌ಎಕ್ಸ್‌ನ ಮಾನವ ಬಾಹ್ಯಾಕಾಶ ಸಾರಿಗೆ ವ್ಯವಸ್ಥೆಯ 10 ನೇ ಮಾನವ ಸಿಬ್ಬಂದಿಯನ್ನು ಮರಳಿ ಕರೆತರುವ ಕಾರ್ಯಾಚರಣೆಯಾಗಿದೆ ಮತ್ತು ಡೆಮೊ -2 ಪರೀಕ್ಷಾ ಹಾರಾಟ ಸೇರಿದಂತೆ ಮಾನವ ಸಿಬ್ಬಂದಿಯೊಂದಿಗೆ 11 ನೇ ಹಾರಾಟವಾಗಿದೆ. ಈ ಉಪಗ್ರಹದಲ್ಲಿವೆ 74 ಪೇಲೋಡ್: ಈ ಹಿಂದೆ ಕ್ರೂ -7, ಸಿಆರ್‌ಎಸ್ -29, ಪೇಸ್, ಟ್ರಾನ್ಸ್ ಪೋರ್ಟರ್ -10, ಅರ್ಥ್ ಕೇರ್, ಎನ್‌ಆರ್‌ಒಎಲ್ -186 ಮತ್ತು ಆರು ಸ್ಟಾರ್ ಲಿಂಕ್ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದ ಈ ಮಿಷನ್ ಅನ್ನು ಬೆಂಬಲಿಸುವ ಮೊದಲ ಹಂತದ ಬೂಸ್ಟರ್‌ಗೆ ಇದು 13 ನೇ ಹಾರಾಟವಾಗಿದೆ. ಹಂತ ಬೇರ್ಪಡಿಸಿದ ನಂತರ, ಫಾಲ್ಕನ್ 9 ವ್ಯಾಂಡೆನ್ ಬರ್ಗ್ ಬಾಹ್ಯಾಕಾಶ ಪಡೆ ನೆಲೆಯಲ್ಲಿ ಲ್ಯಾಂಡಿಂಗ್ ವಲಯ 4 (ಎಲ್‌ಜೆ -4) ರಲ್ಲಿ ಇಳಿಯಲಿದೆ. ಟ್ರಾನ್ಸ್ ಪೋರ್ಟರ್ -13 ಇದೊಂದು ಮೀಸಲಾದ ಸಣ್ಣ ಸ್ಯಾಟ್ ರೈಡ್ ಶೇರ್ ಮಿಷನ್ ಆಗಿದೆ. ಈ ಉಪಗ್ರಹದಲ್ಲಿ 74 ಪೇಲೋಡ್ ಗಳಿವೆ.

ಭೂಮಿಗೆ ಬಂದಾಗ ಕಾಡಲಿದೆ ಬೇಬಿ ಫುಟ್!

ಸುನೀತಾ ಅವರನ್ನು ಭೂಮಿಗೆ ವಾಪ

ಜಮೀರ್ ಖಾನ್-ಮಲ್ಲಿಕಾರ್ಜುನ್ ಖರ್ಗೆ-ಸೈಯ್ಯದ್ ಅಲಿ ಅಲ್ ಹುಸೇನಿ

• ಉದಯವಾಹಿನಿ, ಬೆಂಗಳೂರು

ವಕ್ಫ್ ಸಚಿವನಾಗಿದ್ದರೂ ಜಮೀರ್ ಅಹ್ಮದ್ ಖಾನ್‌ಗೆ ವಕ್ಫ್ ಬೋರ್ಡ್ ಅಧ್ಯಕ್ಷರ ಆಯ್ಕೆ ವಿಚಾರದಲ್ಲಿ ಹಿನ್ನೆಡೆಯಾಗಿದ್ದು ರಾಜ್ಯಸಭಾ ಸದಸ್ಯ ನಾಸೀರ್ ಹುಸೇನ್ ಆಪ್ತ ಸೈಯ್ಯದ್ ಅಲಿ ಅಲ್ ಹುಸೇನಿ ಅವರನ್ನು ಅವಿರೋಧವಾಗಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಲಾಗಿದೆ. ವಕ್ಫ್ ಬೋರ್ಡ್ ಅಧ್ಯಕ್ಷರ ಆಯ್ಕೆ ವಿಚಾರದಲ್ಲಿ ಕಾಂಗ್ರೇಸ್ ನಲ್ಲಿ ಎರಡು ಬಣಗಳ ನಡುವೆ ತಿಕ್ಕಾಟ ನಡೆದಿತ್ತು. ಚಿತ್ರದುರ್ಗದ ಅನ್ವರ್ ಪಾಷಾಗೆ ಅಧ್ಯಕ್ಷ ಸ್ಥಾನ ನೀಡುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಜಮೀರ್ ಖಾನ್ ಪಟ್ಟು ಹಿಡಿದಿದ್ದರು. ಆದರೆ ಈ ಒತ್ತಡಕ್ಕೆ ಮಲ್ಲಿಕಾರ್ಜುನ ಖರ್ಗೆ ಅವರು ಒಪ್ಪಲಿಲ್ಲ. ಹೀಗಾಗಿ ಅಸಮಾಧಾನದಿಂದ ಜಮೀರ್ ಹೊರನಡೆದಿದ್ದರು. ಎರಡೂವರೆ ವರ್ಷಗಳ ಅಧಿಕಾರ ಹಂಚಿಕೆ ಸೂತ್ರದಂತೆ ಮೊದಲಿಗೆ ಕಲಬುರಗಿಯ ಹಝ್ರತ್ ಖ್ವಾಜಾ ಬಂದಾ ನವಾಝ್ ದರ್ಗಾದ ಸಜ್ಜಾದ ನಶೀನ್ ಸೈಯದ್ ಮುಹಮ್ಮದ್ ಅಲಿ ಹುಸೈನಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇನ್ನು ಎರಡೂವರೆ ವರ್ಷಗಳ ನಂತರ ಅಧ್ಯಕ್ಷರು ಬದಲಾಗಬಹುದು.

ವಿದ್ಯಾರಣ್ಯಪುರದ ಅಲಸೂರಮ್ಮ ರಾಯರ ಮಠದಲ್ಲಿ ಟಿ ಟಿ ಡಿ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು,

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ವಿದ್ಯಾರಣ್ಯಪುರದ ಅಲಸೂರಮ್ಮ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಮಾರ್ಚ್ 18 ರಿಂದ 21ರ ವರೆಗೆ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ಅವುಗಳ ವಿವರಗಳು ಈ ರೀತಿ ಇವೆ : ಭಜನಾ ಕಾರ್ಯಕ್ರಮ: (ಪ್ರತಿ ದಿನ ಸಂಜೆ 6 ರಿಂದ 7) ಮಾರ್ಚ್ 18-ವಿದ್ಯಾರಣ್ಯಪುರದ ಶ್ರೀ ವಿಜಯ ವಿಠ್ಠಲ ಭಜನಾ ಮಂಡಳಿ, ಮಾರ್ಚ್ 19-ಜಕ್ಕೂರಿನ ಶ್ರೀ ವಿಜಯ ವಿಠ್ಠಲ ಭಜನಾ ಮಂಡಳಿ, ಮಾರ್ಚ್ 20-ವಿದ್ಯಾರಣ್ಯಪುರದ ಶ್ರೀ ಸುಶಮೀಂದ್ರ ಭಜನಾ ಮಂಡಳಿ. ಪ್ರವಚನ ಕಾರ್ಯಕ್ರಮ: ಮಾರ್ಚ್ 18 ರಿಂದ 20 (ಪ್ರತಿದಿನ ಸಂಜೆ 7 ರಿಂದ 8).

ಪ್ರವಚನಕಾರರು: ಶ್ರೀ ಚಂದ್ರಶೇಖರಾಚಾರ್ಯ, ವಿಷಯ : ಮಹಾಭಾರತದ ಮಹಾನ್ ಸ್ತ್ರೀಯರು ಹರಿನಾಮ ಸಂಕೀರ್ತನೆ : ಮಾರ್ಚ್ 21, ಶುಕ್ರವಾರ ಸಂಜೆ 6-30ಕ್ಕೆ. ಕು|| ಪ್ರಣೀತಾ ಮಣ್ಣೂರ್ ಮತ್ತು ಸಂಗಡಿಗರಿಂದ ಹರಿನಾಮ ಸಂಕೀರ್ತನೆ. ಕಾರ್ಯಕ್ರಮ ನಡೆಯುವ ಸ್ಥಳ : ಅಲಸೂರಮ್ಮ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಮುಖ್ಯರಸ್ತೆ, ಬಿಇಎಲ್ ಲೇಔಟ್, 3ನೇ ಬ್ಲಾಕ್, ವಿದ್ಯಾರಣ್ಯಪುರ, ಬೆಂಗಳೂರು-560097 ಈ ಮೇಲಿನ ಎಲ್ಲಾ ಕಾರ್ಯಕ್ರಮಗಳಲ್ಲೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಟಿಟಿಡಿ ಹೆಚ್.ಡಿ.ಪಿ.ಪಿ. ಸಂಚಾಲಕರಾದ ಡಾ|| ಪಿ. ಭುಜಂಗರಾವ್ ವಿನಂತಿಸಿದ್ದಾರೆ.

ಶಕ್ತಿ ಯೋಜನೆಯಿಂದ ಇಲಾಖೆ ಅಭಿವೃದ್ಧಿ ಕಷ್ಟ ಖಾತೆ ಬದಲಾವಣೆಗೆ ರಾಮಲಿಂಗಾರೆಡ್ಡಿ ಒತ್ತಡ?

• ಉದಯವಾಹಿನಿ, ಬೆಂಗಳೂರು

ಸಾರಿಗೆ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ತಮ್ಮ ಖಾತೆ ಬದಲಾವಣೆಗೆ ಸಿಎಂ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ ಎನ್ನಲಾಗಿದೆ. ರಾಜ್ಯ ಸರ್ಕಾರದ ಬಜೆಟ್ ಮಂಡನೆ ಬೆನ್ನಲ್ಲೇ ಖಾತೆ ಬದಲಾವಣೆ ಒತ್ತಡ ಕೇಳಿಬಂದಿದೆ ಎನ್ನಲಾಗುತ್ತಿದೆ. ಶಕ್ತಿ ಯೋಜನೆ ಹೊಡೆತದಲ್ಲಿ ಇಲಾಖೆಯ ಅಭಿವೃದ್ಧಿ ಕಷ್ಟವಾಗಿದೆ. ಬಜೆಟ್ ನಿರೀಕ್ಷೆಯೂ ಹುಸಿಯಾಗಿದೆ. ಬೇರೆ ಯಾವುದಾದರೂ ಖಾತೆ ಕೊಟ್ಟರೆ ಒಕೆ. ಈ ಖಾತೆಯಿಂದ ಬಿಡುಗಡೆಗೆ ಮನವಿ ಮಾಡಿದ್ದಾರೆಂಬ ಮಾತು ಕೇಳಿಬಂದಿದೆ. ಬಜೆಟ್‌ನಲ್ಲಿ ನಿರೀಕ್ಷಿತ ಅನುದಾನ ಇಲ್ಲದಿರುವುದು ಹಾಗೂ ಶಕ್ತಿ ಯೋಜನೆಯ ಆರ್ಥಿಕ ಹೊಡೆತ ಇಲಾಖೆ ಬಗ್ಗೆ ಬೇಸರಕ್ಕೆ ಕಾರಣವಾಗಿದೆ. ಆದ್ದರಿಂದ ಸಿಎಂ ಬಳಿ ಮನವಿ ಮೂಲಕ ರಾಮಲಿಂಗಾರೆಡ್ಡಿ ಖಾತೆ ಬದಲಾವಣೆ ಬಯಸಿದ್ದಾರೆಂದು ತಿಳಿದುಬಂದಿದೆ. 5 ವರ್ಷಗಳಲ್ಲಿ ರಾಜ್ಯ ಸಾರಿಗೆ ಸಂಸ್ಥೆಯ ಆಡಿಯಲ್ಲಿರುವ ನಾಲ್ಕು ಸಾರಿಗೆ ನಿಗಮಗಳಿಗೆ 5,200 ಕೋಟಿ ನಷ್ಟ ಆಗಿದೆ ಎಂದು ಈಚೆಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿಕೆ ನೀಡಿದ್ದರು.

ಬೆಂಗಳೂರಲ್ಲಿ ಕಸದ ಸಮಸ್ಯೆ ಉಲ್ಬಣ, ಸಾಂಕ್ರಾಮಿಕ ರೋಗ ಭೀತಿ

ಹೀಗಾಗಿ ಕಣ್ಣೂರು ಜನರೊಂದಿಗೆ ಸಭೆ ನಡೆಸುವಂತೆ ಡಿಸಿಎಂ ಡಿಕೆಶಿ ಅವರು ಜಿಲ್ಲಾ ಪಂಚಾಯತ್ ಸಿಇಒಗೆ ಸೂಚನೆ

• ಉದಯವಾಹಿನಿ, ಬೆಂಗಳೂರು,

ನಗರದ ಕಸ ವಿಲೇವಾರಿ ಸಮಸ್ಯೆ ಸದ್ಯಕ್ಕೆ ಬಗೆಹರಿಯುವ ಸಾಧ್ಯತೆಗಳಿಲ್ಲ. ಹೀಗಾಗಿ ರಸ್ತೆಗಳಲ್ಲೇ ಕಸ ತುಂಬಿರುವ ವಾಹನಗಳು ನಿಂತಿರುವುದರಿಂದ ಸಾಂಕ್ರಾಮಿಕ ರೋಗಗಳು ಉಲ್ಬಣಗೊಳ್ಳುವ ಲಕ್ಷಣಗಳು ಗೋಚರಿಸುತ್ತಿವೆ.

ಯಾವುದೇ ಕಾರಣಕ್ಕೂ ಬೆಂಗಳೂರಿನ ಕಸ ವಿಲೇವಾರಿ ಮಾಡಲು ಅವಕಾಶ ನೀಡುವುದಿಲ್ಲ ಎಂದು ಕಣ್ಣೂರು ಜನ ಪಟ್ಟು ಹಿಡಿದು ಕುಳಿತಿರುವುದರಿಂದ ಸಮಸ್ಯೆ ಉಲ್ಬಣಗೊಳ್ಳುತ್ತಿದೆ. ಹೀಗಾಗಿ ಕಣ್ಣೂರು ಜನರೊಂದಿಗೆ ಸಭೆ ನಡೆಸುವಂತೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಜಿಲ್ಲಾ ಪಂಚಾಯತ್ ಸಿಇಒಗೆ ಸೂಚನೆ ನೀಡಿರುವುದರಿಂದ ಮಾ.19 ರಂದು ಸಿಇಒ ಅಲ್ಲಿನ ಜನರ ಮನವೊಲಿಸುವ ಕಾರ್ಯ ಮಾಡಲಿದ್ದಾರೆ. ಅಲ್ಲಿಯವರೆಗೆ ಕಣ್ಣೂರು ಕಸ ವಿಲೇವಾರಿ ಘಟಕದ ಬಳಿ ಸಾಲುಗಟ್ಟಿ ನಿಂತಿರುವ ಕಸದ ಲಾರಿಗಳಲ್ಲಿರುವ ತ್ಯಾಜ್ಯ ವಿಲೇವಾರಿ ಮಾಡಲು ಅವಕಾಶ ನೀಡಲಾಗುತ್ತಿಲ್ಲ.

ಕ್ವಾರಿ ಸಮೀಪವಿದ್ದ ಕೆಲವೇ ಕೆಲವು ಲಾರಿಗಳ ಕಸವನ್ನು ಮಾತ್ರ ವಿಲೇವಾರಿ ಮಾಡಲು ಅವಕಾಶ ನೀಡಿರುವ ಗ್ರಾಮಸ್ಥರು ಉಳಿದ ಲಾರಿಗಳ ಕಸ ವಿಲೇವಾರಿ ಮಾಡದಿರುವಂತೆ ನೋಡಿ

ಉದಯವಾಹಿನಿ ಚಿತ್ರ

ಕೊಳ್ಳುತ್ತಿದ್ದಾರೆ. ಈ ಕುರಿತಂತೆ ಮಾ.19 ರಂದು ನಡೆಯಲಿರುವ ಸಭೆಯಲ್ಲಿ ಕಸ ವಿಲೇವಾರಿ ಸಮಸ್ಯೆ ಬಗೆಹರಿಯುವ ಸಾಧ್ಯತೆಗಳಿವೆ ಎನ್ನಲಾಗಿದೆ.

ತ್ಯಾಜ್ಯ ವಿಲೇವಾರಿ ಮಾಡಲು ಅವಕಾಶ

ಒಂದು ವೇಳೆ ಕಣ್ಣೂರು ಗ್ರಾಮಸ್ಥರು ಸರ್ಕಾರದ ಮನವಿಗೆ ಸ್ಪಂಧಿಸಿ ಮಾ.19 ರ ನಂತರ ಕಸ ವಿಲೇವಾರಿಗೆ ಅವಕಾಶ ನೀಡಿದರೂ ಅಲ್ಲಿನ ಕ್ವಾರಿಯಲ್ಲಿ ಇನ್ನು ಒಂದು ತಿಂಗಳು ಮಾತ್ರ ಕಸ ಹಾಕಬಹುದು ನಂತರ ಮತ್ತೆ ಕಸ ವಿಲೇವಾರಿ ಸಮಸ್ಯೆ ಎದುರಾಗಲಿದೆ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ತ್ಯಾಜ್ಯದೊಂದಿಗೆ ಪ್ರಾಣಿತ್ಯಾಜ್ಯ, ವೈದ್ಯಕೀಯ ತ್ಯಾಜ್ಯ ಹಾಗೂ ಕಾರ್ಖಾನೆಗಳ ವಿಷಪೂರಿತವನ್ನು ಒಟ್ಟಿಗೆ ಅವೈಜ್ಞಾನಿಕವಾಗಿ ಸುರಿಯಲಾಗುತ್ತಿದೆ. ತ್ಯಾಜ್ಯದೊಂದಿಗೆ ಶವ ಸಹ ಪತ್ತೆಯಾಗಿದೆ. ಇತ್ತೀಚಿನ ದಿನಗಳ ಲಿಚಿಟ್ ಉತ್ಪಾದನೆ ಹೆಚ್ಚಾಗಿ, ಸುತ್ತಮುತ್ತಲಿನ ಕೆರೆ, ಬಾವಿ, ಕಾಲುವೆ ಹಾಗೂ ಕೊಳವೆ ಬಾವಿ ಸೇರುತ್ತಿದೆ. ಇದರಿಂದ ಅಂತರ್ಜಲ ಸಹ ಕಲುಷಿತವಾಗಿ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಸುತ್ತಮುತ್ತಲಿನ ಕೆರೆಗಳಲ್ಲಿರುವ ಮೀನುಗಳು ಸಾವನ್ನಪ್ಪಿವೆ. ಇದರಿಂದಾಗಿ ಕೆಟ್ಟ ಗಾಳಿ ಬೀಸುತ್ತಿದೆ. ವೃದ್ಧರು ಮತ್ತು ಮಕ್ಕಳು ಚರ್ಮ ಹಾಗೂ ಉಸಿರಾಟದ ಸಮಸ್ಯೆ ಎದುರಿಸುವಂತಾಗಿದೆ. ಈ ಕುರಿತು ಸಂಘ ಸಂಸ್ಥೆಗಳು, ಜನಸಾಮಾನ್ಯರು ಕಣ್ಣೂರು ಗ್ರಾಮ ಪಂಚಾಯಿತಿಗೆ ದೂರು ನೀಡುತ್ತಿದ್ದಾರೆ.ಈ ಬಗ್ಗೆ ಬಿಎಸ್‌ಡಬ್ಲ್ಯೂಎಂಎಲ್ ಮುಖ್ಯ ಎಂಜಿನಿಯರ್ ಹಾಗೂ ಮುಖ್ಯ ವ್ಯವಸ್ಥಾಪಕರಿಗೆ ದೂರವಾಣಿ ಮೂಲಕ ದೂರು ನೀಡಿದರೂ ಸ್ಪಂದಿಸಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಮತ್ತೊಂದು ಘಟಕಕ್ಕಾಗಿ ಶೋಧ; ಕಣ್ಣೂರು ಕ್ವಾರಿ ತುಂಬಿದ ಮೇಲೆ ನಗರದ ಕಸ ಸಾಗಿಸುವುದಾದರೂ ಎಲ್ಲಿಗೆ ಎಂಬ ಆತಂಕದಲ್ಲಿರುವ ಬಿಬಿಎಂಪಿ ಅಧಿಕಾರಿಗಳು ಹೊಸ ಘಟಕಕ್ಕಾಗಿ ಶೋಧ ಮುಂದುವರೆಸಿದ್ದಾರೆ. ಈಗಾಗಲೇ ಮಹದೇವಪುರ ಸಮೀಪ ಹೊಸ ಕಸ ವಿಲೇವಾರಿ ಘಟಕ ಸ್ಥಾಪಿಸುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ.

ಒಂದು ವೇಳೆ ಅಲ್ಲೂ ಸಮಸ್ಯೆ ಎದುರಾದರೆ ಬೆಂಗಳೂರಿನ ಕಸ ವಿಲೇವಾರಿ ಸಮಸ್ಯೆ ಮತ್ತಷ್ಟು ಉಲ್ಬಣಗೊಳ್ಳುವುದರಲ್ಲಿ ಯಾವುದೇ ಸಂದೇಹವಿಲ್ಲ.

ಕಣ್ಣೂರು ಜನರ ಪಟ್ಟು ಯಾಕೆ?

ಕಳೆದ 9 ವರ್ಷಗಳಿಂದ ಬೆಂಗಳೂರಿನ ಪೂರ್ವ ತಾಲ್ಲೂಕಿನ ವ್ಯಾಪ್ತಿಗೆ ಬರುವ ಕಣ್ಣೂರು ಮತ್ತು ಮಿಟ್ಟಗಾನಹಳ್ಳಿಯ ಸರ್ಕಾರಿ ಗೋಮಾಳದ ಜಾಗದಲ್ಲಿ ಬೆಂಗಳೂರಿನಲ್ಲಿ ಉತ್ಪಾದನೆಯಾಗುವ ಕಸವನ್ನು ಸುರಿಯಲಾಗುತ್ತಿದೆ. ವೈಜ್ಞಾನಿಕವಾಗಿ ಕಸ ಸುರಿಯಬೇಕೆಂಬ ನಿಯಮವಿದ್ದರೂ ಅವೈಜ್ಞಾನಿಕವಾಗಿ ವಿಲೇವಾರಿ ಮಾಡುತ್ತಿದ್ದಾರೆ.

ಕೊಲೆ ಮಾಡಿ ಆತ್ಮಹತ್ಯೆ ಎಂದು ಬಿಂಬಿಸಿದ್ದ ದಂಪತಿ ಬಂಧನ

• ಉದಯವಾಹಿನಿ, ಬೆಂಗಳೂರು,

ಹೊಸೂರಿನ ಕೃಷ್ಣಗಿರಿ ಜಿಲ್ಲೆಯ 24 ವರ್ಷದ ಯುವಕನನ್ನು ಕೊಂದು ಆತ್ಮಹತ್ಯೆ ಎಂದು ಬಿಂಬಿಸಲು ಚಿಕ್ಕಬಣಾವರ, ನೆಲಮಂಗಲ ರೈಲು ನಿಲ್ದಾಣಗಳ ನಡುವಿನ ರೈಲ್ವೆಹಳಿಗಳ ಮೇಲೆ ಶವವನ್ನು ಎಸೆದಿದ್ದ ದಂಪತಿ, ಅವರ ಸ್ನೇಹಿತನನ್ನು ನಗರ ರೈಲ್ವೆ ಉಪವಿಭಾಗದ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳನ್ನು ಹೂವಿನ ವ್ಯಾಪಾರಿ ವಿ ಸತ್ಯವಾಣಿ ಅಲಿಯಾಸ್ ಸತ್ಯ (27), ಆಕೆಯ ಪತಿ ಕೃಷ್ಣಗಿರಿಯ ಕಟ್ಟಡ ಕಾರ್ಮಿಕ ಎಸ್ ವರದರಾಜ್ (23) ಮತ್ತು ಅವರ ಸ್ನೇಹಿತ ದಾಸನಪುರದ ಸಿ ಶ್ರೀನಿವಾಸ್ (25) ಎಂದು ಗುರುತಿಸಲಾಗಿದೆ.

ಫೆಬ್ರವರಿ 19 ರಂದು ಆಲೂರುಪಾಳ್ಯದ ಬಳಿ ರೈಲ್ವೆಹಳಿಗಳ ಮೇಲೆ ಆರ್ ಲೋಗನಾಥನ್ (24) ಮೃತ ದೇಹ ಪತ್ತೆಯಾಗಿತ್ತು. ರೈಲು ಡಿಕ್ಕಿ ಹೊಡೆದು ಶವ ಛಿದ್ರವಾಗಿತ್ತು.

ಬೆಂಗಳೂರು ಗ್ರಾಮಾಂತರ ರೈಲ್ವೆ

ಉದಯವಾಹಿನಿ ಚಿತ್ರ

ಪೊಲೀಸರು ಈ ಸಂಬಂಧ ಪ್ರಕರಣ ದಾಖಲಿಸಿದ್ದರು. ಪ್ರಕರಣದ ತನಿಖೆಗಾಗಿ ಆರು ತಂಡಗಳನ್ನು ರಚಿಸಲಾಗಿತ್ತು.

ಅಪರಾಧದ ಸ್ಥಳವನ್ನು ಎಚ್ಚರಿಕೆಯಿಂದ ಪರಿಶೀಲಿಸಿದ ನಂತರ, ಬಲಿಪಶುವಿನ ತಲೆ ಮತ್ತು ಗಂಟಲಿನ ಮೇಲೆ ಗಾಯಗಳಾಗಿರುವುದರಿಂದ ಇದು ಕೊಲೆ ಪ್ರಕರಣ ಎಂದು ಅಧಿಕಾರಿಗಳಿಗೆ ತಿಳಿದುಬಂದಿತು. ಆತ ತಮಿಳುನಾಡಿನವನೆಂದು ಶಂಕಿಸಿದ ತಂಡ, ಶೂಲಗಿರಿ ಪೊಲೀಸ್ ಠಾಣೆಯಲ್ಲಿ ನಾಪತ್ತೆಯಾಗಿರುವ ದೂರು ದಾಖಲಿಸಿದ್ದರಿಂದ ಹೊಸೂರು ಮತ್ತು ನೆರೆಯ ಪೊಲೀಸರೊಂದಿಗೆ ವಿಚಾರಿಸಿ ಆತನ ಗುರುತು ಪತ್ತೆಯಾಯಿತು.

ಹೊಸೂರು ಬಸ್ ನಿಲ್ದಾಣದಲ್ಲಿನ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ, ಸಂತ್ರಸ್ತ ಒಬ್ಬ ಮಹಿಳೆಯೊಂದಿಗೆ ಹೋಗುತ್ತಿರುವುದನ್ನು ಪೊಲೀಸರು ನೋಡಿದರು.

ಇದರ ಆಧಾರದ ಮೇಲೆ, ಪೊಲೀಸರು ಆರೋಪಿಯನ್ನು ಬಂಧಿಸಿದರು. ಸತ್ಯವಾಣಿ ನಾಲ್ಕು ವರ್ಷಗಳಿಂದ ಲೋಗನಾಥನ್ ಜೊತೆ ಲಿವ್-ಇನ್ ಸಂಬಂಧದಲ್ಲಿದ್ದಳು. ವರದರಾಜ್ ಅವರನ್ನು ವಿವಾಹವಾಗಿದ್ದಳು. ಈ ವಿಷಯ ತಿಳಿದ ನಂತರ, ಕೊಲೆಯಾದ ವ್ಯಕ್ತಿ ತನ್ನ ಗಂಡನನ್ನು ಬಿಟ್ಟು ತನ್ನೊಂದಿಗೆ ಇರುವಂತೆ ಒತ್ತಾಯಿಸಲು ಪ್ರಾರಂಭಿಸಿದ್ದ. ಇದರಿಂದ ಕೋಪಗೊಂಡ ಮಹಿಳೆ ಕೊಲೆಗೆ ಸಂಚು ರೂಪಿಸಿದಳು.

ವೃದ್ಧ ಅತ್ತೆ- ಮಾವನ ಮೇಲೆ ಪ್ರಸಿದ್ದ ಸರ್ಕಾರಿ ಆಸ್ಪತ್ರೆ ವೈದ್ಯೆಯಿಂದ ಹಲ್ಲೆ

• ಉದಯವಾಹಿನಿ, ಬೆಂಗಳೂರು,

ಅತ್ತೆ ಹಾಗೂ ಮಾವನ ಮೇಲೆ ಹಲ್ಲೆ ನಡೆಸಿದ ಆರೋಪದಡಿ ಸರ್ಕಾರಿ ಆಸ್ಪತ್ರೆಯ ವೈದ್ಯೆ ಪ್ರಿಯದರ್ಶಿನಿ ವಿರುದ್ಧ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವೈದ್ಯೆ ಹಲ್ಲೆ ನಡೆಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಇ.ಎಸ್.ಐ ಆಸ್ಪತ್ರೆಯ ದಂತ ವೈದ್ಯ ನವೀನ್ ಕುಮಾರ್ ಮತ್ತು ವಿಕ್ಟೋರಿಯಾ ಆಸ್ಪತ್ರೆ ವೈದ್ಯೆ ಪ್ರಿಯದರ್ಶಿನಿ 2007ರಲ್ಲಿ ವಿವಾಹ ಆಗಿದ್ದರು. ದಂಪತಿ ಮಧ್ಯೆ ವೈಮನಸ್ಸು ಉಂಟಾಗಿ ವಿಚ್ಛೇದನ ಪಡೆಯಲು ಮುಂದಾಗಿದ್ದರು. ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ ಎಂದು ಮೂಲಗಳು ತಿಳಿಸಿವೆ. ಸೋಮವಾರ ರಾತ್ರಿ 8.30 ರಿಂದ ರಾತ್ರಿ 9 ಗಂಟೆಯ ನಡುವೆ ಈ ಘಟನೆ ನಡೆದಿದ್ದು, ಮಂಗಳವಾರ ಬೆಳಗಿನ ಜಾವ ದೂರು ದಾಖಲಿಸಲಾಗಿದೆ. ಅತ್ತೆ ಮಾವನಿಗೆ ಪ್ರಿಯದರ್ಶಿನಿ ಕಿರುಕುಳ ನೀಡುತ್ತಿರುವ ಆರೋಪವಿದೆ. ಹೀಗಾಗಿ, ಪೋಷಕರೊಂದಿಗೆ ನವೀನ್ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಪ್ರಿಯದರ್ಶಿನಿ ಮಕ್ಕಳ ಜೊತೆ ವಾಸವಾಗಿದ್ದಾರೆ. ವೈದ್ಯರು ವೃದ್ಧ ದಂಪತಿಗಳ ಮೇಲೆ ಹಲ್ಲೆ ನಡೆಸುತ್ತಿರುವ ವಿಡಿಯೋ ವೈರಲ್ ಆಗಿದೆ. ವೀಡಿಯೊದಲ್ಲಿ,



ವೈದ್ಯೆ ಪ್ರಿಯದರ್ಶಿನಿತನ್ನ ಗಂಡನ ವೃದ್ಧ ಪೋಷಕರ ಮೇಲೆ ಕೂಗುತ್ತಾ ಅವರೊಂದಿಗೆ ಜಗಳವಾಡುತ್ತಿರುವುದನ್ನು ಕಾಣಬಹುದು. ಅವರು ಅತ್ತೆಯ ಮಂಗಳಸೂತ್ರವನ್ನು ಎಳೆಯುವುದನ್ನು ಮತ್ತು ಮತ್ತೊಬ್ಬ ಮಹಿಳೆ ಮಾವನನ್ನು ಒದೆಯುವುದನ್ನು ಸಹ ಕಾಣಬಹುದಾಗಿದೆ. ಗದ್ದಲದ ಸಮಯದಲ್ಲಿ ಮಕ್ಕಳು ಅಳುವುದನ್ನು ಕೇಳಬಹುದಾಗಿದೆ. ದೂರುದಾರರು ಮಧ್ಯಪ್ರವೇಶಿಸಲು ಪ್ರಯತ್ನಿಸಿದಾಗ, ವೈದ್ಯೆ ಪ್ರಿಯದರ್ಶಿನಿ ಅವರ ತಲೆ ಮತ್ತು ಬೆನ್ನಿಗೆ ಹೊಡೆದಿದ್ದಾರೆ ಎಂದು ಆರೋಪಿಸಲಾಗಿದೆ. ನರಸಿಂಹಯ್ಯ ಹೃದಯ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿದ್ದಾರೆ ಮತ್ತು ಅವರ ಪತ್ನಿ ಕೂಡ ಗಂಭೀರ ಕಾಯಿಲೆಯಿಂದ ಬಳಲುತ್ತಿದ್ದಾರೆ ಎಂದು ವರದಿಯಾಗಿದೆ. ವೈದ್ಯೆ ಪ್ರಿಯದರ್ಶಿನಿ ಅವರ ವೃದ್ಧ ಮಾವಂದಿರ ಮೇಲೆ ಹಲ್ಲೆ ನಡೆಸಿದ್ದಕ್ಕಾಗಿ ಪೊಲೀಸ್ ದೂರು ದಾಖಲಿಸಲಾಗಿದೆ ಎಂದು ಹೆಚ್ಚುವರಿ ಪೊಲೀಸ್ ಆಯುಕ್ತ (ಪಶ್ಚಿಮ) ವಿಕಾಶ್ ಕುಮಾರ್ ವಿಕಾಶ್ ತಿಳಿಸಿದ್ದಾರೆ.

ಕಾಂಗ್ರೇಸ್‌ನಲ್ಲಿ ವಕ್ಫ್ ಅಧ್ಯಕ್ಷ ಸ್ಥಾನಕ್ಕೆ ಜಟಾಪಟಿ: ಅಧ್ಯಕ್ಷರಾಗಿ ಸೈಯದ್ ಹುಸೈನಿ ಆಯ್ಕೆ

• ಉದಯವಾಹಿನಿ, ಬೆಂಗಳೂರು,

ರಾಜ್ಯ ವಕ್ಫ್ ಬೋರ್ಡ್ ನೂತನ ಅಧ್ಯಕ್ಷರ ವಿಚಾರದಲ್ಲಿ ಕಾಂಗ್ರೇಸ್‌ನಲ್ಲಿ ಜಟಾಪಟಿ ನಡೆದು ಕೊನೆಗೆ ಕಲಬುರಗಿಯ ಹಝ್ರತ್ ಖ್ವಾಜಾ ಬಂದಾ ನವಾಝ್ ದರ್ಗಾದ ಸಜ್ಜಾದ ನಶೀನ್ ಸೈಯದ್ ಮುಹಮ್ಮದ್ ಅಲಿ ಹುಸೈನಿ ಅವರು ಆಯ್ಕೆಯಾಗಿದ್ದಾರೆ.

ಮುಹಮ್ಮದ್ ಅಲಿ ಹುಸೈನಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಹಾಗೂ ರಾಜ್ಯ ಸಭಾ ಸದಸ್ಯ ನಾಸೀರ್ ಹುಸೇನ್ ಅವರ ಬೆಂಬಲಿಗರಾಗಿದ್ದಾರೆ. ಶನಿವಾರ ನಗರದ ಕನ್ನಿಂಗ್ ಹ್ಯಾಮ್ ರಸ್ತೆಯಲ್ಲಿರುವ ರಾಜ್ಯ ವಕ್ಫ್ ಬೋರ್ಡ್ ಕಚೇರಿಯಲ್ಲಿ ನಡೆದ

ಉದಯವಾಹಿನಿ ಚಿತ್ರ

ಚುನಾವಣೆಯಲ್ಲಿ ಸೈಯದ್ ಮುಹಮ್ಮದ್ ಅಲಿ ಹುಸೈನಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ಚುನಾವಣೆಗೆ ಮೊದಲು ಚಿತ್ರದುರ್ಗದ ಅನ್ವರ್ ಪಾಷಾ ಪರವಾಗಿ ವಕ್ಫ್ ಸಚಿವ ಜಮೀರ್ ಅಹಮ್ಮದ್ ಲಾಬಿ ಮಾಡಿದ್ದರು. ಎರಡೂವರೆ ವರ್ಷಗಳ ಕಾಲ ಅಧಿಕ

ಮಂಡೀಪೇಟೆ ಗರುಡಗಂಬ ಬೀದಿ ಕಾಮನ ಹಬ್ಬ

• ಉದಯವಾಹಿನಿ, ಚನ್ನಪಟ್ಟಣ

ನಗರದ ಇತಿಹಾಸ ಪ್ರಸಿದ್ಧ ಮಂಡೀಪೇಟೆ ಗರುಡಗಂಬ ಬೀದಿ ಕಾಮನ ಹಬ್ಬದ ಉತ್ಸವ ಸಮಿತಿಯಿಂದ ನಡೆದ ಹೋಳಿ ಹಬ್ಬದಲ್ಲಿ ಬಾಲಕರು, ಯುವಕರು, ಮಧ್ಯವಯಸ್ಕರು, ವಯಸ್ಕರು ವಯಸ್ಸಿನ ತಾರತಮ್ಯವಿಲ್ಲದೆ ಬಣ್ಣದೋಕುಳಿಯಾಡಿದರು.

ಉತ್ಸವ ಸಮಿತಿ ವತಿಯಿಂದ ರತಿ ಮನ್ಮಥರನ್ನು ಪ್ರತಿಷ್ಠಾಪನೆ ಮಾಡಿ ದಿನಕ್ಕೊಂದು ವಿಶೇಷ ಅಲಂಕಾರ ಮಾಡಿ, ಪ್ರತಿದಿನ ಸಂಜೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುತ್ತಾ ಹನ್ನೆರಡು ದಿನಗಳ ಕಾಲ ವಿಜೃಂಭಣೆಯಿಂದ ನಡೆದ ಕಾಮನ ಹಬ್ಬದ ಅಂತಿಮ ದಿನವಾದ ಶುಕ್ರವಾರ ನಗರದಲ್ಲೆಡೆ ರತಿಮನ್ಮಥರನ್ನು ಮೆರವಣಿಗೆ ಮಾಡಿ ನಂತರ ಕಾಮದಹನ ಮಾಡಲಾಯಿತು.

ಕಾಮದಹನ ಅಂಗವಾಗಿ ಕೃತಕ ಆನೆ ಅಂಬಾರಿ ನಿರ್ಮಿಸಿ ಅಂಬಾರಿ ಮೇಲೆ ಮಹಾರಾಜ ಪಾತ್ರಧಾರಿಯನ್ನು ಕೂರಿಸಿ ಮೆರವಣಿಗೆ ಮಾಡಲಾಯಿತು. ಮೆರವಣಿಗೆ ವೇಳೆ ಎತ್ತಿನಗಾಡಿ, ಟ್ರ್ಯಾಕ್ಟರ್, ಟೆಂಪೊಗಳಲ್ಲಿ ರಾಮ ಲಕ್ಷ್ಮಣ ಸೀತೆ, ಕೃಷ್ಣ, ಆಂಜನೇಯ ಸೇರಿದಂತೆ ವಿಶೇಷ ವೇಷಧಾರಿಗಳ ಮೆರವಣಿಗೆ ನಡೆಯಿತು.

ಉದಯವಾಹಿನಿ ಚಿತ್ರ

ಮಂಡೀಪೇಟೆ ಲಕ್ಷ್ಮಿನಾರಾಯಣ ದೇವಸ್ಥಾನ ಬಳಿಯಿಂದ ನಗರದ ಎಂ.ಜಿ.ರಸ್ತೆ ಸೇರಿದಂತೆ ವಿವಿಧೆಡೆ ಬೆಳಗ್ಗೆಯಿಂದ ಸಂಜೆವರೆಗೆ ರತಿಮನ್ಮಥರ ವಿಜೃಂಭಣೆಯ ಬೆಳ್ಳಿ-ಪಲ್ಲಕ್ಕಿ ಉತ್ಸವ ಮೆರವಣಿಗೆ ನಡೆಯಿತು. ಈ ವೇಳೆ ಮಂಡೀಪೇಟೆ ಹಾಗೂ ಅಕ್ಕಪಕ್ಕದ ನಿವಾಸಿಗಳು ಬಣ್ಣದೋಕುಳಿಯಲ್ಲಿ ಮಿಂದೆದ್ದು ಸಂಭ್ರಮಿಸಿದರು. ಮೆರವಣಿಗೆ ವೇಳೆ ಪರಸ್ಪರ ಬಣ್ಣ ಹಚ್ಚುವ ಜತೆಗೆ ನರ್ತನವೂ ನಡೆಯಿತು.

ಸರ್ಕಾರಿ ಶಾಲೆ ಸಬಲೀಕರಣ ಅಗತ್ಯ

• ಉದಯವಾಹಿನಿ, ರಾಮನಗರ

ಸರ್ಕಾರಿ ಶಾಲೆಗಳಲ್ಲಿ ಮಾತ್ರ ಎಲ್ಲಾರಿಗೂ ಉಚಿತವಾಗಿ ಸಮಾನ ಶಿಕ್ಷಣ ಸಿಗುತ್ತದೆ. ಅಂತಹ ಸರ್ಕಾರಿ ಶಾಲೆಗಳಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಿ ಅವುಗಳನ್ನು ಸಬಲೀಕರಣಗೊಳಿಸಬೇಕು. ಶಿಕ್ಷಣದ ವ್ಯಾಪಾರೀಕರಣವಾಗಿರುವ ಸಂದರ್ಭದಲ್ಲಿ ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಎಲ್ಲಾರ ಮೇಲಿದೆ ಎಂದು ಉಪ ಲೋಕಾಯುಕ್ತ ನ್ಯಾ. ಬಿ. ವೀರಪ್ಪ ಹೇಳಿದರು.

ತಾಲ್ಲೂಕಿನ ಮಾದಾಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ನಡೆದ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸರ್ಕಾರಿ ಶಾಲೆಗಳಲ್ಲಿ ಓದಿದವರು ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ್ದಾರೆ. ಸರ್ಕಾರಿ ಶಾಲೆಗಳಿಗೆ ಪೋಷಕರು ತಮ್ಮ ಮಕ್ಕಳನ್ನು ಕಳಿಸುವುದಕ್ಕೆ ಹಿಂದೇಟು ಹಾಕಬಾರದು ಎಂದರು.

ಉದಯವಾಹಿನಿ ಚಿತ್ರ

ಸರ್ಕಾರಿ ಶಾಲೆಗಳ ಅಭಿವೃದ್ಧಿಯಲ್ಲಿ ಗ್ರಾಮಸ್ಥರ ಪಾತ್ರ ಮಹತ್ತರವಾದುದು. ಶಾಲೆಯಲ್ಲಿ ಓದಿ ಉನ್ನತ ಸ್ಥಾನಮಾನಕ್ಕೇರಿದವರು ತಮ್ಮೂರಿನ ಶಾಲೆಗೆ ಕೈಲಾದ ನೆರವು ನೀಡಿ ಸಬಲೀಕರಣ ಮಾಡಬೇಕು

-ಟಿ. ನಾರಾಯಣಸ್ವಾಮಿ, ಸದಸ್ಯ

ಲೋಕಾಯುಕ್ತ ಎಸ್‌ಪಿ ಸ್ನೇಹ ಪಿ.ವಿ, ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ವಿ.ಸಿ. ಬಸವರಾಜೇಗೌಡ, ಕ್ಷೇತ್ರ ಶಿಕ್ಷಣಾಧಿಕಾರಿ ಪಿ. ಸೋಮಲಿಂಗಯ್ಯ, ಮಾಯಗಾನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಗೀತಾ ಪರಮಶಿವಯ್ಯ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ವಕೀಲ ರಘುಪತಿ ಎಂ.ಜೆ, ಇದ್ದರು.

ಲೆಕ್ಕದಲ್ಲಿ ಹಾದಿತಪ್ಪಿದ ಚಿಕ್ಕಬಳ್ಳಾಪುರ ನಗರಸಭೆ

ಚರ್ಚೆಗೆ ಬಾರದ ಲೆಕ್ಕಪರಿಶೋಧನಾ ವರದಿಗಳು; 2022-23ನೇ ಸಾಲಿನ ವರದಿಯಲ್ಲಿ ಅಧ್ವಾನಗಳು ಬಯಲು

• ಉದಯವಾಹಿನಿ, ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರ ನಗರಸಭೆಯ 2022-23ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ನಗರಸಭೆಗೆ ಸಂಬಂಧಿಸಿದಂತೆ ಗಂಭೀರವಾದ ನ್ಯೂನತೆಗಳು ಎದ್ದು ಕಾಣುತ್ತಿವೆ. ಗಂಭೀರ ನ್ಯೂನತೆಗಳು, ಆಕ್ಷೇಪಣೆ ಮತ್ತು ವಸೂಲಾತಿಗೆ ಸೂಚಿಸಲಾದ ಕಂಡಿಕೆಳ ಬಗ್ಗೆ ರಾಜ್ಯ ಲೆಕ್ಕಪರಿಶೋಧನಾ, ಲೆಕ್ಕಪತ್ರ ಇಲಾಖೆ ಹಿರಿಯ ಉಪನಿರ್ದೇಶಕರು ತಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಲೆಕ್ಕಪರಿಶೋಧನಾ ವರದಿಯು ನಗರಸಭೆಯಲ್ಲಿನ ಹಣಕಾಸು ಅವ್ಯವಸ್ಥೆಯನ್ನು ಎದ್ದು ತೋರಿಸುತ್ತಿದೆ. ಲೆಕ್ಕದಲ್ಲಿ ಚಿಕ್ಕಬಳ್ಳಾಪುರ ನಗರಸಭೆಯ ಹಾದಿತಪ್ಪಿರುವುದು ಎದ್ದು ತೋರುತ್ತಿದೆ. ಟೆಂಡರ್‌ಗಳ ಅವಧಿ ಮುಗಿದಿದ್ದರೂ ಈ ಹಿಂದಿನ ಟೆಂಡರ್‌ದಾರರನ್ನೇ ಮುಂದುವರಿಸುವುದು, ಚಿಕ್ಕಬಳ್ಳಾಪುರ ನಗರಸಭೆಯಲ್ಲಿ ಆರ್ಥಿಕ ಸ್ಥಿರತೆ ಇಲ್ಲದಿರುವುದು ಮೇಲ್ನೋಟಕ್ಕೆ ಭಾಸವಾಗುತ್ತಿದೆ.

ಈ ಅಧ್ವಾನಗಳ ಕಾರಣದಿಂದಲೇ ನಗರಸಭೆಯ ಲೆಕ್ಕಪರಿಶೋಧನಾ ವರದಿಗಳನ್ನು ಸಾಮಾನ್ಯ ಸಭೆಗಳನ್ನು ಮಂಡಿಸುವುದಿಲ್ಲ ಎಂದು ನಗರಸಭೆ ಸದಸ್ಯರೇ ಆರೋಪಿಸುವರು. ಇದರಿಂದ ನಗರಸಭೆಯಲ್ಲಿ ಪಾರದರ್ಶಕತೆ ಕಣ್ಮರೆ ಆಗಿದೆ ಎಂದು ದೂರುತ್ತಿದ್ದಾರೆ.

ಆರೋಗ್ಯ ಉಪ ಕರ ವಸೂಲಿ ಮೊತ್ತ ಸರ್ಕಾರಕ್ಕೆ ಪಾವತಿಸದಿರುವುದು, ಹೊಸ ಬಡಾವಣೆ ವಿನ್ಯಾಸ ನಕ್ಷೆ ಅನುಮೋದನೆ ಆಸ್ತಿ ಹಕ್ಕು ದಾಖಲಿಸುವ ಸಂಬಂಧ ಮೇಲ್ವಿಚಾರಣಾ ಶುಲ್ಕ ಮತ್ತು ಇಟಿಪಿ ಕಡಿಮೆ ಕಟಾಯಿಸಿರುವುದು, ಶಾಸನ ಬದ್ಧ ತೆರಿಗೆಗಳ ಸರ್ಕಾರಕ್ಕೆ ಜಮಾ ಮಾಡುವುದು ಬಾಕಿ ಇರುವುದು, 15ನೇ ಹಣಕಾಸು ಯೋಜನೆ 2021-22ನೇ ಸಾಲಿನ ಐಇಸಿ ಚಟುವಟಕೆ ಕಾರ್ಯಕ್ರಮಗಳಿಗೆ (ಗೋಡೆ ಬರಹ) ಬಿಲ್ ಪಾವತಿ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸದಿರುವ ಹೀಗೆ ವಿವಿಧ ವಿಚಾರಗಳನ್ನು ಲೆಕ್ಕಪರಿಶೋಧನಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. ವರದಿಯಲ್ಲಿ ಒಟ್ಟು 2,31,46,189 ಆಕ್ಷೇಪಣೆ ಮೊತ್ತವಿದೆ.

ಉದಯವಾಹಿನಿ ಚಿತ್ರ

ಫ್ಲೆಕ್ಸ್, ಬ್ಯಾನರ್-ಮಾಹಿತಿ ಇಲ್ಲ

ಇದರಲ್ಲಿ 1,03,015 ವಸೂಲಾದ ಮೊತ್ತವಿದೆ. ನಾಲ್ಕು ಮಂದಿ ಲೆಕ್ಕಪರಿಶೋಧಕರು 109 ದಿನಗಳ ಕಾಲ ಪರಿಶೋಧನೆ ನಡೆಸಿದ್ದು 75 ಪುಟಗಳ ವರದಿ ನೀಡಿದ್ದಾರೆ.

ಖಾತಾ ವರ್ಗಾವಣೆಯಲ್ಲಿ ಅಕ್ರಮ: ನಗರಸಭೆಯು ಆಸ್ತಿ ತೆರಿಗೆ ವಹಿಯನ್ನು ಲೆಕ್ಕಪರಿಶೋಧನೆ ವೇಳೆ ಹಾಜರುಪಡಿಸಿಲ್ಲ. ಇದು ಅಕ್ರಮಗಳ ವಾಸನೆಗೆ ಕಾರಣವಾಗಿದೆ.

ಲೆಕ್ಕ ಪರಿಶೋಧನೆ ನಡೆದಿರಲಿಲ್ಲ

ಖಾತಾ ವರ್ಗಾವಣೆಯಲ್ಲಿ ಮೇಲ್ನೋಟಕ್ಕೆ ಬಹಳಷ್ಟು ಅವ್ಯವಹಾರ, ಅಕ್ರಮಗಳು ಆಗುವ ಸಂಭವವಿರುತ್ತದೆ. ಈ ಬಗ್ಗೆ ಸಕ್ಷಮ ಪ್ರಾಧಿಕಾರದವಾದ ಪೌರಾಡಳಿತ ನಿರ್ದೇಶನಾಲಯ ಕೂಲಂಕಷವಾಗಿ ಪರಿಶೀಲಿಸಿ ಸಂಬಂಧಪಟ್ಟ ಸಿಬ್ಬಂದಿ, ಕಂದಾಯ ಅಧಿಕಾರಿಗಳು, ಪೌರಾಯುಕ್ತರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಹೀಗೆ ಚಿಕ್ಕಬಳ್ಳಾಪುರ ನಗರಸಭೆಯಲ್ಲಿನ ಹಲವು ಅಕ್ರಮಗಳು, ಅಧ್ವಾನಗಳನ್ನು ಆಡಿಟ್ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಪಾರದರ್ಶಕತೆ ಕಣ್ಮರೆ ಈ ಮೂರು ವರ್ಷಗಳಲ್ಲಿ ಲೆಕ್ಕಪರಿಶೋಧನ ವರದಿಗಳನ್ನು ಸಾಮಾನ್ಯ ಸಭೆಯಲ್ಲಿ ಒಮ್ಮೆಯೂ ಚರ್ಚೆಗೆ ಒಳಡಿಸಿಲ್ಲ. ನಗರಸಭೆ ಸಾಮಾನ್ಯ ಸಭೆಗಳಲ್ಲಿ ವರದಿಯ ಬಗ್ಗೆ ಚರ್ಚೆ ನಡೆಸಿ ಅನುಮೋದನೆ ಪಡೆಯಬೇಕು. ವಸೂಲಾತಿ ಆಕ್ಷೇಪಣೆಗಳ ಬಗ್ಗೆ ಚರ್ಚೆ ನಡೆಸಬೇಕು. ಆದರೆ ಇದ್ಯಾವುದೂ ನಡೆದಿಲ್ಲ ಎಂದು ನಗರಸಭೆ ಸದಸ್ಯೆ ನೇತ್ರಾವತಿ ಆರೋಪಿಸಿದರು.

ಖಾತಾ ವರ್ಗಾವಣೆ ಸಮಯದಲ್ಲಿ ಹಾಜರುಪಡಿಸಿರುವ ಕಡತಗಳಲ್ಲಿ ವರ್ಗಾವಣೆ, ಬದಲಾವಣೆ ಶುಲ್ಕದ ರಸೀದಿ ಸಂಖ್ಯೆ, ದಿನಾಂಕದ ವಿವರಗಳನ್ನು ನಮೂದಿಸಿಲ್ಲ. ಶುಲ್ಕ ಎಷ್ಟು ವಸೂಲಿ ಮಾಡಲಾಗಿದೆ ಎನ್ನುವ ವಿವರವಾದ ಮಾಹಿತಿಯೂ ಲಭ್ಯವಿಲ್ಲ. 2022-23ನೇ ಸಾಲಿನ ಕೆಲವು ಕಡಗಳನ್ನು ಪರಿಶೀಲನೆ ವೇಳೆ ನಗರಸಭೆ ಅಧಿಕಾರಿಗಳು ಹಾಜರುಪಡಿಸಿದ್ದಾರೆ.

ಇ-ತಂತ್ರಾಂಶ ಅಭಿವೃದ್ಧಿಪಡಿಸಿದ್ದರೂ ತಂತ್ರಾಂಶದಲ್ಲಿ ಆಳವ ಡಿಸಿ ಖಾತಾ ವರ್ಗಾವಣೆ ಮಾಡದೇ ಇರುವುದು ಕಂಡು ಬರುತ್ತದೆ. ಮುಟೇಶನ್ ದಾಖಲಿಸಿದ ಯಾವುದೇ ವಿವರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿಲ್ಲ. ಇದು ನಿಯಮಬಾಹಿರವಾಗಿದೆ. ಹೊಸ ಬಡಾವಣೆಗಳ ನಿವೇಶನಗಳ ಖಾತಾ ನಕಲು, ಈ ಹಿಂದೆ ಅಭಿವೃದ್ಧಿಗೊಂಡ, ಗ್ರಾಮ ಠಾಣಾಗಳಲ್ಲಿ ಖಾತಾ ವರ್ಗಾವಣೆಗೊಂಡ ಆಸ್ತಿ ಗಳು ಎಷ್ಟು ಎಂಬುದನ್ನು ಸ್ಪಷ್ಟವಾಗಿ ತಿಳಿಯಲು ಸಾಧ್ಯವಾಗಿಲ್ಲ. ಈ ಬಗ್ಗೆ ಪೌರಾಡಳಿತ ನಿರ್ದೇಶನಾಲಯಕ್ಕೆ ದೂರ ನೀಡಿದ್ದೆವು. ಅನಂತರ ನಾಲ್ಕು ವರ್ಷದ ಲೆಕ್ಕಪರಿಶೋಧನೆಯನ್ನು ಒಮ್ಮೆ ಮಾಡಿದರು ಎಂದರು. ಪ್ರತಿ ವರ್ಷವೂ ಲೆಕ್ಕ ಪರಿಶೋಧನೆ ನಡೆಸಬೇಕು. ಆದರೆ ನಾಲ್ಕು ವರ್ಷಗಳಿಗೆ ಒಮ್ಮೆ ಪರಿಶೋಧನೆ ನಡೆದ ನಿದರ್ಶನವಿದೆ. ವರದಿಗಳನ್ನು ಗೋಪ್ಯವಾಗಿ ಇರಿಸಲಾಗಿದೆ. ಇದರಿಂದ ಪಾರದರ್ಶಕತೆ ಕಣ್ಮರೆಯಾಗಿದೆ ಎಂದು ಹೇಳಿದರು.

ರಸ್ತೆ ಅಭಿವೃದ್ಧಿಗೆ ಅಡ್ಡಿ ಆರೋಪ: ಪ್ರತಿಭಟನೆ

• ಉದಯವಾಹಿನಿ, ಕೊಡಿಗೇನಹಳ್ಳಿ

ನೂರಾರು ವರ್ಷಗಳಿಂದ ಸಂಚರಿಸುತ್ತಿದ್ದ ರಸ್ತೆ ಅಭಿವೃದ್ಧಿಪಡಿಸಲು ಜಮೀನು ಮಾಲೀಕರು ಬಿಡುತ್ತಿಲ್ಲ. ಹಾಗಾಗಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಮಧ್ಯೆ ಪ್ರವೇಶಿಸಿ ದಾರಿ ಬಿಡಿಸಿ ಕೊಡಿ' ಎಂದು ಒತ್ತಾಯಿಸಿ ಶುಕ್ರವಾರ ಗುಂಡಗಲ್ಲು ಹೊಸಹಳ್ಳಿ ಗ್ರಾಮಸ್ಥರು ಕೆಲಕಾಲ ಪ್ರತಿಭಟಿಸಿದರು.

ಹೋಬಳಿಯ ಗುಂಡಗಲ್ಲು ಹೊಸಹಳ್ಳಿ ಗ್ರಾಮದಿಂದ ತೆರಿಯೂರು ಗ್ರಾಮಕ್ಕೆ ತೆರಳುವ ರಸ್ತೆ ನೂರಾರು ವರ್ಷಗಳಿಂದ ಈ ಭಾಗದ ಜನರ ಸಂಚಾರದ ಕೇಂದ್ರ ಮಾರ್ಗವಾಗಿತ್ತು. ಆದರೆ ಈಗ ರಸ್ತೆಯಲ್ಲಿನ ಬೇಲಿ ಗಿಡಗಳನ್ನು ಕಿತ್ತು ರಸ್ತೆ ಅಭಿವೃದ್ಧಿಪಡಿಸಲು ಮುಂದಾದ ಸಂದರ್ಭದಲ್ಲಿ ಇಬ್ಬರು ಜಮೀನು ಮಾಲೀಕರು ಈ ರಸ್ತೆ ಜಾಗ ನಮಗೆ ಸೇರಿದ್ದು ಎಂದು ಅಡ್ಡಿಪಡಿಸುತ್ತಿದ್ದಾರೆ. ಗುತ್ತಿಗೆದಾರನ ಮೇಲಿನ ಕೋಪದಿಂದ ರಸ್ತೆಗೆ ಅಡ್ಡಿಪಡಿಸಿದರೆ ಹೇಗೆ ಓಡಾಡಬೇಕು ಎಂದು ಪ್ರಶ್ನಿಸಿದರು.

ಈಗಾಗಲೇ ಗ್ರಾಮಕ್ಕೆ ಸರಿಯಾದ ದಾರಿ ಇಲ್ಲ ಎಂದು ಗ್ರಾಮದಲ್ಲಿನ ಯುವಕರಿಗೆ ಹೆಣ್ಣು ಕೊಡುತ್ತಿಲ್ಲ. ಅಂತಹ ಸಂದರ್ಭದಲ್ಲಿ ಈ ರಸ್ತೆ ಕೂಡ ಅಭಿವೃದ್ಧಿಪಡಿಸದಿದ್ದರೆ ಗ್ರಾಮದ ಜನರು ಹಲವು

ಸಮಸ್ಯೆಗಳನ್ನು ಎದುರಿಸಬೇಕಾಗಿದೆ ಎಂದರು.

ಸ್ಥಳಕ್ಕೆ ಬಂದ ಎಎಸ್‌ಐ ನಾಗಭೂಷಣ್ ಹಾಗೂ ಕಾನ್‌ಸ್ಟೆಬಲ್ ನರಸಿಂಹಮೂರ್ತಿ ಜಮೀನು ಮಾಲೀಕರೊಂದಿಗೆ ಮೊಬೈಲ್‌ನಲ್ಲಿ ಮಾತನಾಡಿ ಭಾನುವಾರ ಇದರ ವಿಚಾರವಾಗಿ ಮಾತನಾಡಲು ಪೊಲೀಸ್ ಠಾಣೆ ಬಳಿ ಬರುವಂತೆ ಸೂಚಿಸಿದರು.

ಜಮೀನು ಮಾಲೀಕ ನಾಗಭೂಷಣ್ ಪ್ರತಿಕ್ರಿಯಿಸಿ ಇಲ್ಲಿನ ಗ್ರಾಮಸ್ಥರು ಬೇಕಾದರೆ ಆ ರಸ್ತೆ ಮೂಲಕ ಅಥವಾ ನಮ್ಮ ಜಮೀನಿನ ಮಧ್ಯೆ ಭಾಗದಲ್ಲಿಯೇ ಓಡಾಡಲಿ ನಾವು ಯಾವುದೇ ರೀತಿಯಲ್ಲಿ ಅಡ್ಡಿಪಡಿಸುವುದಿಲ್ಲ. ಆದರೆ ನಮ್ಮ ಜಾಗದಲ್ಲಿ ಗುತ್ತಿಗೆದಾರರೊಬ್ಬರು ನರೇಗಾ ಯೋಜನೆಯಡಿ ಕಾಮಗಾರಿ ಮಾಡುವುದಕ್ಕೆ ವಿರೋಧವಿದೆ. ಕಾಮಗಾರಿ ಮಾಡಲು ಯಾವುದೇ ಕಾರಣಕ್ಕೂ ಬಿಡುವುದಿಲ್ಲ' ಎಂದರು.

ಮಹಿಳಾ ಸಬಲೀಕರಣ, ರೈತರ ಏಳಿಗೆ ಎಸ್‌ವಿವೈಎಂ ಪಣ

• ಉದಯವಾಹಿನಿ, ಸರಗೂರು

ಮಹಿಳೆಯರ ಆರ್ಥಿಕ ಸಬಲೀಕರಣ, ಮುಖ್ಯ ವಾಹಿನಿಗೆ ತರಲು, ರೈತರ ಶ್ರೇಯೋಭಿವೃದ್ಧಿಗೆ ಪ್ರಮುಖವಾಗಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಪಣ ತೊಟ್ಟಿದೆ ಎಂದು ಪಶುಪಾಲನಾ ಇಲಾಖೆಯ ಉಪ ನಿರ್ದೇಶಕ ಡಾ.ನಾಗರಾಜು ತಿಳಿಸಿದರು. ಪಟ್ಟಣದ ಜಯಚಾಮರಾಜೇಂದ್ರ ಕ್ರೀಡಾಂಗಣದಲ್ಲಿ ಶನಿವಾರ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣ ಕಾರ್ಯಕ್ರಮ ವಿಭಾಗ, ಸುತ್ತೂರಿನ ಕೃಷಿ ವಿಜ್ಞಾನ ಕೇಂದ್ರ, ಮೈಸೂರಿನ ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆ, ಮೈಸೂರು ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿರುವ ಮೂರು ದಿನಗಳ ಹೈನುಗಾರಿಕೆ ಮತ್ತು ಕೃಷಿ ಮೇಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸರ್ಕಾರ ಹೈನುಗಾರಿಕೆಯನ್ನು ಉತ್ತೇಜಿಸುವ ಸಲುವಾಗಿ ಕಾಲುಬಾಯಿ ರೋಗ ತಡೆಗಟ್ಟಲು ಲಸಿಕೆ, ಜಾನುವಾರುಗಳಿಗೆ ವಿಮೆ ಯೋಜನೆ, ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ಸೇರಿದಂತೆ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದು ಇವುಗಳ ಸದುಪಯೋಗ ಪಡೆದುಕೊಳ್ಳುವಂತೆ' ರೈತರಿಗೆ ಮಾಹಿತಿ ನೀಡಿದರು.

ಉದಯವಾಹಿನಿ ಚಿತ್ರ

ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಸಾಮಾಜಿಕ, ಆರ್ಥಿಕ ಸಬಲೀಕರಣ ಕಾರ್ಯಕ್ರಮ ವಿಭಾಗ ನಿರ್ದೇಶಕ ಡಾ.ಡೆನ್ನಿಸ್ ಚೌಹಾಣ್ ಮಾತನಾಡಿ, ಈಗ ಹಸು ಸಾಕಾಣಿಕೆ ಮಾಡುತ್ತಿದ್ದಾರೆ ಎಂದರೆ ಅವರನ್ನು ಕೀಳಾಗಿ ಕಾಣುವ ಪರಿಸ್ಥಿತಿ ಉದ್ಭವವಾಗಿದೆ. ಆದರೆ, ಹೈನುಗಾರಿಕೆಯು ಇಂದಿನ ದಿನಗಳಲ್ಲಿ ಹೆಚ್ಚಿನ ಲಾಭದಾಯಕ ಉದ್ಯಮಗಳಲ್ಲಿ ಒಂದಾಗಿದೆ ಎಂದು ಹೇಳಿದರು. ನಮ್ಮ ಸಂಸ್ಥೆಯ ತಾಲ್ಲೂಕು ಸೇರಿದಂತೆ ರಾಜ್ಯದ ವಿವಿಧೆಡೆ 9 ತರಬೇತಿ ಕೇಂದ್ರವನ್ನು ತೆರೆಯಲಾಗಿದ್ದು ಇದುವರೆಗೂ ಸುಮಾರು 7 ಸಾವಿರ ರೈತರಿಗೆ ಹೈನುಗಾರಿಕೆಯ ತರಬೇತಿ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣ ಕಾರ್ಯಕ್ರಮ ವಿಭಾಗ ನಿರ್ದೇಶಕ ಡಾ.ಡೆನ್ನಿಸ್ ಚೌಹಾಣ್ ಮಾತನಾಡಿ, ಈಗ ಹಸು ಸಾಕಾಣಿಕೆ ಮಾಡುತ್ತಿದ್ದಾರೆ ಎಂದರೆ ಅವರನ್ನು ಕೀಳಾಗಿ ಕಾಣುವ ಪರಿಸ್ಥಿತಿ ಉದ್ಭವವಾಗಿದೆ. ಆದರೆ, ಹೈನುಗಾರಿಕೆಯು ಇಂದಿನ ದಿನಗಳಲ್ಲಿ ಹೆಚ್ಚಿನ ಲಾಭದಾಯಕ ಉದ್ಯಮಗಳಲ್ಲಿ ಒಂದಾಗಿದೆ ಎಂದರು.

ರೈತರಿಗೆ ಹೈನುಗಾರಿಕೆಯ ತರಬೇತಿ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ನಮ್ಮ ಸಂಸ್ಥೆಯ ತಾಲ್ಲೂಕು ಸೇರಿದಂತೆ ರಾಜ್ಯದ ವಿವಿಧೆಡೆ 9 ತರಬೇತಿ ಕೇಂದ್ರವನ್ನು ತೆರೆಯಲಾಗಿದ್ದು ಇದುವರೆಗೂ ಸುಮಾರು 7 ಸಾವಿರ ರೈತರಿಗೆ ಹೈನುಗಾರಿಕೆಯ ತರಬೇತಿ ನೀಡಲಾಗಿದೆ' ಎಂದು ಮಾಹಿತಿ ನೀಡಿದರು. ವಿವೇಕಾನಂದ ಆಸ್ಪತ್ರೆ ಕೀಲು ಮತ್ತು ಮೂಳೆ ತಜ್ಞ ಡಾ.ಎಂ.ಆರ್. ಸೀತಾರಾಮ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಮಸೀದಿ ಬೀಗ ತೆರೆಯಲು ಅಭಿಪ್ರಾಯ ಸಂಗ್ರಹ

• ಉದಯವಾಹಿನಿ, ಮೈಸೂರು

ಹಲವು ವರ್ಷಗಳಿಂದ ವಿವಾದಿತ ಜಾಗ ಎನಿಸಿಕೊಂಡಿರುವ ಕ್ಯಾತಮಾರನಹಳ್ಳಿಯಲ್ಲಿ ಮುಚಿರುವ ಮಸೀದಿ ಬೀಗ ತೆರೆಯುವ ಸಂಬಂಧ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಿಂದೂ, ಮುಸ್ಲಿಂ ಮುಖಂಡರ ಮಹತ್ವದ ಸಭೆ ನಡೆಸಿ ಅಭಿಪ್ರಾಯ ಸಂಗ್ರಹಿಸಲಾಯಿತು.

ಹನ್ನೆರಡು ವಾರಗಳೊಳಗೆ ಸಮಸ್ಯೆ ಇತ್ಯರ್ಥಕ್ಕೆ ಕ್ರಮಕೈಗೊಳ್ಳುವುದಕ್ಕೆ ಹೈಕೋರ್ಟ್ ನಿರ್ದೇಶನ ನೀಡಿರುವ ಪರಿಣಾಮ

ಅಂತರಾಳದಿಂದ... EDITORIAL

ಅಪಾಯದಲ್ಲಿ ಉನ್ನತ ಶಿಕ್ಷಣ

ವಿಶ್ವವಿದ್ಯಾನಿಲಯ ಅನುದಾನ ಆಯೋಗ (ಯುಜಿಸಿ)ವು ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಿಗೆ ನೇಮಕಾತಿ, ಕನಿಷ್ಠ ಅರ್ಹತೆ ಮತ್ತು ಭಡ್ತಿ ಕುರಿತ ಕರಡು ಮಾರ್ಗಸೂತ್ರಗಳು, ಕರಡು ನಿಯಮಾವಳಿ, 2025ನ್ನು ರೂಪಿಸಿದೆ. ಈ ಕರಡು ನಿಯಮಾವಳಿಗಳು ತುರ್ತಾಗಿ ಜಾರಿಗೊಳ್ಳಬೇಕಾದವುಗಳು ಎಂಬಂತೆ ಬಿಂಬಿಸಿ, ತಕ್ಷಣ ಅನುಮೋದಿಸುವಂತೆ ಅದು ರಾಜ್ಯಗಳ ಮೇಲೆ ಒತ್ತಡ ಹೇರುತ್ತಿದೆ. ಕರಡು ನಿಯಮಾವಳಿಗಳು ಬೇಗ ಅಂಗೀಕಾರಗೊಳ್ಳುವಂತೆ ಮಾಡಲು ಅದು ಅಂತಿಮ ಗಡುವನ್ನು ನಿಗದಿಪಡಿಸಿದೆ ಮತ್ತು ಚರ್ಚೆಗಳಿಗೆ ಅಲ್ಪ ಸಮಯಾವಕಾಶವನ್ನಷ್ಟೇ ಒದಗಿಸಿದೆ. ಯಾವುದೇ ನೀತಿಯನ್ನು ಜಾರಿಗೆ ತರಲು ಅವಸರಿಸುವುದೆಂದರೆ ಅದು ಹೇರಿಕೆಯೇ ಆಗಿದೆ. ಗುಪ್ತ ಕಾರ್ಯಸೂಚಿಗಳಿದ್ದಾಗ ಮಾತ್ರ ಆ ನೀತಿಯನ್ನು ಅವಸರವಸರವಾಗಿ ಜಾರಿಗೊಳಿಸಲು ಯತ್ನಿಸಲಾಗುತ್ತದೆ. ಹಾಗಾಗಿ, ಸಾರ್ವಜನಿಕರ ಹಣದಿಂದ ನಡೆಯುತ್ತಿರುವ ಶಿಕ್ಷಣ ವ್ಯವಸ್ಥೆ ಶೈಕ್ಷಣಿಕ ಸ್ವಾಯತ್ತೆ ಮತ್ತು ಸಿಬ್ಬಂದಿ ಕಲ್ಯಾಣದ ಮೇಲೆ ಈ ಮಾರ್ಗಸೂತ್ರಗಳು ಬೀರುವ ಪರಿಣಾಮ ಮತ್ತು ಅವುಗಳ ಒಟ್ಟಾರೆ ಸೈದ್ಧಾಂತಿಕ ಅಗತ್ಯವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವುದು ಅಗತ್ಯವಾಗಿದೆ. ನೂತನ ಶಿಕ್ಷಣ ನೀತಿ (ಎನ್‌ಇಪಿ) 2020 ನಾಲ್ಕು ವರ್ಷಗಳ ಪದವಿಯನ್ನು ಜಾರಿಗೆ ತಂದಿದೆ. ಇದರ ಮೊದಲ ಬ್ಯಾಚ್‌ನ ವಿದ್ಯಾರ್ಥಿಗಳು 2026ರಲ್ಲಷ್ಟೇ ಪದವಿ ಪಡೆಯಲಿದ್ದಾರೆ. ಈ ಪದವಿಯ ಅನುಷ್ಠಾನಕ್ಕೆ ಸಂಬಂಧಿಸಿದ ವಿಷಯಗಳು ಮತ್ತು ವಿದ್ಯಾರ್ಥಿಗಳ ಕಲಿಕಾ ಫಲಿತಾಂಶವನ್ನು ಗಣನೆಗೆ ತೆಗೆದುಕೊಳ್ಳದೆ, ಉನ್ನತ ಶಿಕ್ಷಣ ಸಂಶೋಧನಾ ನಿಯಮಾವಳಿಗಳನ್ನು ರೂಪಿಸಿರುವುದು ಶೈಕ್ಷಣಿಕವಾಗಿ ಅನುಚಿತವಾಗಿದೆ. ಇದು ಈ ವ್ಯವಸ್ಥೆಯ ಇಬ್ಬರು ಮಹತ್ವದ ಭಾಗೀದಾರರಾಗಿರುವ ಶಿಕ್ಷಕರು ವಿದ್ಯಾರ್ಥಿಗಳ ಕಳವಳಗಳಿಗೂ ಕಾರಣವಾಗಿದೆ. ಈ ಕರಡು ನಿಯಮಾವಳಿಗಳ ಜೊತೆಗೆ ಹಿಂದಿನಂತೆ ಯುಜಿಸಿ ವೇತನ ಪರಿಷ್ಕರಣೆ ಪ್ರಕ್ರಿಯೆ ಪ್ರಸ್ತಾವ ಯಾಕಿಲ್ಲ ಎಂದು ಶಿಕ್ಷಕರು ಕೇಳುತ್ತಿದ್ದಾರೆ. ರಾಜ್ಯ ಸರಕಾರಗಳು ಮತ್ತು ಶೋಧ ಸಮಿತಿಗಳ ಅಧಿಕಾರವನ್ನು ತಳ್ಳಿಹಾಕಿ ತನಗೆ ಬೇಕಾದವರನ್ನು ನೇಮಿಸಬಹುದಾದ ಹಕ್ಕನ್ನು ರಾಜ್ಯಪಾಲರಿಗೆ ನೀಡುತ್ತದೆ. ಇದನ್ನು ಪ್ರತಿಪಕ್ಷಗಳ ಆಡಳಿತದ ದಕ್ಷಿಣದ ರಾಜ್ಯಗಳು ವ್ಯಾಪಕವಾಗಿ ವಿರೋಧಿಸಿವೆ. ಈ ನಿಯಮಾವಳಿಗಳು, ವಿಶ್ವವಿದ್ಯಾನಿಲಯ ಆಡಳಿತವನ್ನು ನಿಯಂತ್ರಣಕ್ಕೆ ತೆಗೆದುಕೊಂಡು ಸೈದ್ಧಾಂತಿಕ ಪ್ರಾಬಲ್ಯವನ್ನು ವಿಶ್ವವಿದ್ಯಾನಿಲಯಗಳ ಮೇಲೆ ಹೇರಲು ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಮಾಡುತ್ತಿರುವ ಸ್ಪಷ್ಟ ಪ್ರಯತ್ನವಾಗಿದೆ ಎಂಬುದಾಗಿ ಈ ರಾಜ್ಯಗಳು ಭಾವಿಸಿವೆ. ಅದೂ ಅಲ್ಲದೆ, ಈ ಕರಡು ನಿಯಮಾವಳಿಗಳಲ್ಲಿ ಪ್ರಸ್ತಾಪಿಸಲಾಗಿರುವ ಅಧಿಕಾರ ಕೇಂದ್ರೀಕರಣದ ಬಗ್ಗೆ ಎನ್‌ಡಿಎ ಮಿತ್ರಪಕ್ಷಗಳೂ ಕಳವಳ ವ್ಯಕ್ತಪಡಿಸಿವೆ. ಪ್ರಸಕ್ತ ಮಾರ್ಗಸೂತ್ರಗಳು ಬೋಧಕ ಸಿಬ್ಬಂದಿಯ ಕೆಲಸದ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುವ ಮಹತ್ವದ ಬದಲಾವಣೆಗಳನ್ನು ಹೊಂದಿವೆ ಮತ್ತು ಶಿಕ್ಷಣ ತಜ್ಞರನ್ನು ಅನಿಶ್ಚಿತ ಶೋಷಣಾತ್ಮಕ ವ್ಯವಸ್ಥೆಗೆ ದೂಡುತ್ತವೆ. ಖಾಯಂ ಹಾಗೂ ಹಿರಿಯ ಬೋಧಕ ಹುದ್ದೆಗಳು ಕಡಿಮೆ ಇರುವಂತೆ ನೋಡಿಕೊಳ್ಳುತ್ತದೆ ಮತ್ತು ಕಿರಿಯ ಉಪನ್ಯಾಸಕರನ್ನು ಗುತ್ತಿಗೆ ಉದ್ಯೋಗಕ್ಕೆ ದೂಡುತ್ತದೆ. ವಿಶ್ವವಿದ್ಯಾನಿಲಯ ಕ್ಯಾಂಪಸ್‌ನಲ್ಲಿ ಕಡ್ಡಾಯವಾಗಿ ಎಂಟು ಗಂಟೆಗಳ ಕಾಲ ಇರಬೇಕೆನ್ನುವ ನೀತಿಯು ಬೋಧಕ ಸಿಬ್ಬಂದಿಯನ್ನು ಕಾರ್ಖಾನೆ ನೌಕರರಂತೆ ಪರಿಗಣಿಸುತ್ತದೆ. ಈ ಮೂಲಕ ಅದು ಸಂಶೋಧನೆ, ಮಾರ್ಗದರ್ಶನ ಮತ್ತು ಬೌದ್ಧಿಕ ಶ್ರಮ ಮುಂತಾದ ವಾಸ್ತವಗಳನ್ನು ಕಡೆಗಣಿಸುತ್ತದೆ. ಎಲ್ಲಕ್ಕಿಂತಲೂ ಹೆಚ್ಚಾಗಿ, ಈಗ ಶೈಕ್ಷಣಿಕ ಬೆಳವಣಿಗೆಗೆ ಅಗತ್ಯವಾದ ಅಧ್ಯಯನ ರಜೆಯನ್ನು ಅಸಿಸ್ಟೆಂಟ್ ಪ್ರೊಫೆಸರ್‌ಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ಉಪನ್ಯಾಸ ವೃತ್ತಿ ನಡೆಸುತ್ತಿರುವವರಿಗೆ ಸಂಶೋಧನೆ ನಡೆಸುವ ಅವಕಾಶಗಳನ್ನು ನಿರಾಕರಿಸಲಾಗಿದೆ. ನೂತನ ಮಾರ್ಗಸೂತ್ರಗಳ 3.2 ವಿಧಿಯಲ್ಲಿ ನಿರ್ದಿಷ್ಟ ವಿಷಯದಲ್ಲಿ ಓರ್ವ ಬೋಧಕ ಸಿಬ್ಬಂದಿಗೆ ಬೇಕಾಗಿರುವ ಅರ್ಹತೆಯನ್ನು ತಗ್ಗಿಸಲು ಅವಕಾಶ ನೀಡಲಾಗಿದೆ. ಇಲ್ಲಿ ಆರಂಭಿಕ ಹಂತದ ಬೋಧಕ ಹುದ್ದೆಗಳಿಗೆ ಬೇಕಾಗಿರುವ ಅರ್ಹತೆ ಮಾನದಂಡಗಳನ್ನು ಬದಲಾಯಿಸಲಾಗಿದೆ. ತಮ್ಮ ಹಿಂದಿನ ಶೈಕ್ಷಣಿಕ ಹಂತಗಳಲ್ಲಿ ನಿರ್ದಿಷ್ಟ ವಿಷಯಗಳಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗಳಿಗೆ ಬೇಕಾಗುವ ಅರ್ಹತೆಯನ್ನು ಹೊಂದಿರದ, ಆದರೆ ಬಳಿಕ ಅದೇ ವಿಷಯಗಳಲ್ಲಿ ಎನ್‌ಇಟಿ/ಪಿಎಚ್‌ಡಿ ಪಡೆದಿರುವ ಅಭ್ಯರ್ಥಿಗಳಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಈ ಬದಲಾವಣೆಯನ್ನು ತರಲಾಗಿದೆ. ಅದೂ ಅಲ್ಲದೆ, ಕರಡು ಮಾರ್ಗಸೂಚಿಯ 3.8 ವಿಧಿಯು ಬೋಧಕ ಸಿಬ್ಬಂದಿಯ ಮೌಲ್ಯಮಾಪನವನ್ನು ಕಾರ್ಪೊರೇಟ್ ಮಾದರಿಗೆ ಬದಲಾಯಿಸಿದೆ. ಬೋಧಕ ಸಿಬ್ಬಂದಿಯು ಸಮಾಲೋಚನೆ, ಡಿಜಿಟಲ್ ಕಂಟೆಂಟ್ ಸೃಷ್ಟಿ ಅಥವಾ ಸ್ಟಾರ್ಟ್‌ಅಪ್ ಅಭಿವೃದ್ಧಿಯಲ್ಲಿ ತೊಡಗಿಕೊಳ್ಳಬೇಕು ಎನ್ನುವ ನೀತಿಯು ಆದಾಯ ಉತ್ಪತ್ತಿಗೆ ಹೆಚ್ಚಿನ ಗಮನ ನೀಡುತ್ತದೆ. ಇದರಿಂದಾಗಿ ತರಗತಿಗಳಿಗೆ ನೀಡಬೇಕಾಗಿರುವ ಬೋಧಕ ಸಿಬ್ಬಂದಿಯ ಗಮನವು ಬೇರೆಡೆಗೆ ಹರಿಯುತ್ತದೆ. ಈ ಕ್ರಮವು ಮಾನವಿಕ ವಿಷಯಗಳು ಮತ್ತು ಸಾಮಾಜಿಕ ವಿಜ್ಞಾನದ ಸ್ಕಾಲರ್‌ಗಳಿಗೆ ಮಾರಕವಾಗಿದೆ. ಯಾಕೆಂದರೆ ಅವರ ಸಂಶೋಧನೆಯನ್ನು ಕಾರ್ಪೊರೇಟ್ ಸಂಶೋಧನೆ ಅಥವಾ ತಾಂತ್ರಿಕ ನಾವೀನ್ಯತೆ ಮೂಲಕ ಸುಲಭವಾಗಿ ನಗದೀಕರಿಸಲಾಗುವುದಿಲ್ಲ. ಇದು ಭಾರೀ ಪ್ರಮಾಣದಲ್ಲಿ ಪ್ರೊಫೆಸರ್‌ಗಳ ಲ್ಯಾಟರಲ್ ಎಂಟ್ರಿ ಅಥವಾ ಹಿಂಬಾಗಿಲ ಪ್ರವೇಶಕ್ಕೆ ಅವಕಾಶ ಮಾಡಿಕೊಡುತ್ತದೆ. ಇದರೊಂದಿಗೆ ಉದ್ಯೋಗ ಮೀಸಲಾತಿ ಮೂಲಕ ಖಾತರಿಪಡಿಸಲಾಗುವ ಸಾಮಾಜಿಕ ನ್ಯಾಯಕ್ಕೂ ತಿಲಾಂಜಲಿ ಇಟ್ಟಂತಾಗುತ್ತದೆ. ಮೊದಲ ಬಾರಿಗೆ, ಶೈಕ್ಷಣಿಕ ಕ್ಷೇತ್ರಕ್ಕೆ ಹೊರತಾದವರು, ಅಂದರೆ ಅಧಿಕಾರಶಾಹಿ, ಕಾರ್ಪೊರೇಟ್ ಉದ್ಯಮ, ಸೇನಾ ಪಡೆಗಳು ಮುಂತಾದ ಕ್ಷೇತ್ರಗಳ ಜನರು ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳಾಗಬಹುದಾಗಿದೆ. ಮಾರ್ಗಸೂಚಿಯ 10.1 ವಿಧಿ ಇದಕ್ಕೆ ಅವಕಾಶ ನೀಡುತ್ತದೆ. ಯುಜಿಸಿ ಮಾರ್ಗಸೂಚಿಯ ಅತ್ಯಂತ ಅನಾಹುತಕಾರಿ ಅಂಶವೆಂದರೆ, ಅದು ಭಿನ್ನಾಭಿಪ್ರಾಯವನ್ನು ಅಪರಾಧ ಎಂಬುದಾಗಿ ಪರಿಗಣಿಸುತ್ತದೆ ಮತ್ತು ಸೈದ್ಧಾಂತಿಕ ಏಕತೆಯನ್ನು ಜಾರಿಗೊಳಿಸುತ್ತದೆ.

ಪ್ರಧಾನವಾಗಿ, ಈ ನಿಯಮಾವಳಿಗಳ ಹಿಂದಿರುವುದು ರಾಜ್ಯಗಳ ಚುನಾಯಿತ ಸರಕಾರಗಳ ಹಕ್ಕುಗಳು ಮತ್ತು ಅಧಿಕಾರಗಳನ್ನು ಕೇಂದ್ರ ಸರಕಾರದ ನಿಯಂತ್ರಣಕ್ಕೆ ಒಳಪಟ್ಟ ರಾಜ್ಯಪಾಲರಿಗೆ ವಹಿಸುವ ಯೋಜಿತ ಪ್ರಯತ್ನ ಉಪಕುಲಪತಿಗಳ ಶೋಧ ಸಮಿತಿಯಲ್ಲಿ ಯುಜಿಸಿ ಪ್ರತಿನಿಧಿಯೊಬ್ಬರನ್ನು ಸೇರಿಸುವುದು ಅಧಿಕಾರ ಕೇಂದ್ರೀಕರಣದ ಕ್ರಮವಾಗಿದೆ. ಇದು ಶೈಕ್ಷಣಿಕ ಸ್ವಾಯತ್ತೆಯಲ್ಲಿ ಹಸ್ತಕ್ಷೇಪ ಮಾಡುವ ಮತ್ತು ಅದನ್ನು ದುರ್ಬಲಗೊಳಿಸುವ ಕ್ರಮವಾಗಿದೆ. ಅದೂ ಅಲ್ಲದೆ, ಈ ಮಾರ್ಗಸೂತ್ರಗಳು ಕುಲಪತಿಗಳೂ ಆಗಿರುವ ರಾಜ್ಯಪಾಲರು ಉಪಕುಲಪತಿಗಳ ನೇಮಕಾತಿಯಲ್ಲಿ ನಿರ್ಣಾಯಕ ಪಾತ್ರ ವಹಿಸುವ ಅಧಿಕಾರವನ್ನು ನೀಡುತ್ತವೆ.

ಅಂಥ ರಾಜ್ಯಾಭಿಷೇಕಕ್ಕೆ ಯೋಗ್ಯನಾದ ನೀನು ಮನಸ್ಸಿನಲ್ಲಿ ರಾಜ್ಯಭಾರವನ್ನು ವಹಿಸಬಾರದೆಂದೇಣಿಸಿದರೆ ನಿನ್ನ ರಾಜ್ಯವನ್ನು ನಿನ್ನ ಅಪ್ಪಣೆಯಿಂದ ನಾನು ಪರಿಪಾಲಿಸಿಕೊಂಡು ನಿನಗೆರಡೆಣಿಸದೆ ಸಮುದ್ರವು ದಡವನ್ನು ಮೀರದಂತಿರುವೆನು. ನೀನು ನಿನ್ನ ಮನಸ್ಸಿನಲ್ಲಿ ಸಂಶಯವನ್ನು ಬಿಟ್ಟು ಗಂಗಾಧಿನದಿಗಳಿಂದ ನಿನ್ನ ಪಟ್ಟಾಭಿಷೇಕಾರ್ಥವಾಗಿ ಸುವರ್ಣಕಲಶಗಳಲ್ಲಿ ತರಲ್ಪಟ್ಟ ಮಂಗಲ ತೀರ್ಥಗಳಿಂದ ಪಟ್ಟಾಭಿಷೇಕವನ್ನು ಮಾಡಿಸಿಕೊ. ನಿನ್ನ ಅಪ್ಪಣೆಯಿಂದ ನಾನೊಬ್ಬನೇ ಸಮಸ್ತ ಶತ್ರುಗಳನ್ನೂ ಜಯಿಸುವೆನು. ನಯವಾಗಿ ಉರುಟಾಗಿ ಉದ್ದವಾದ ನನ್ನ ಈ ತೋಳುಗಳು

ಭೂಷಣಾರ್ಥವಾಗಿರುವವಲ್ಲ, ನಾನು ಶೃಂಗಾರಾರ್ಥವಾಗಿ ಬಿಲ್ಲು ಬಾಣಗಳನ್ನು ಧರಿಸಿಕೊಂಡಿರುವವನಲ್ಲ. ಎರಡು ಭುಜಗಳು, ಬಿಲ್ಲು ಬಾಣಗಳು–ಈ ನಾಲ್ಕರಿಂದ ಕೂಡಿ ಶತ್ರುಸಂಹಾರಕ್ಕೆ ಸನ್ನದ್ಧನಾಗಿದ್ದೇನೆ. ಲೋಕದಲ್ಲಿ ನನಗೆ ಶತ್ರುವೇ ಇಲ್ಲ. ಮಿಂಚಿನಂತೆ ಹೊಳೆಯುತ್ತಿರುವ ನನ್ನ ಖಡ್ಗಧಾರೆಯಿಂದ ರಣದಲ್ಲಿ ದೇವೇಂದ್ರನನ್ನಾದರೂ ಸಂಹರಿಸುವೆನು. ಯಾರನ್ನೂ ಲೆಕ್ಕಿಸುವವನಲ್ಲ, ನನ್ನ ಭುಜಬಲದಿಂದಲೂ ಹೊಳೆಯುವ ಖಡ್ಗಗಳಿಂದಲೂ ಕತ್ತರಿಸಲ್ಪಡುವ ಆನೆ ಕುದುರೆ ಕಾಲಾಳುಗಳ ಶಿರಸ್ಸುಗಳಿಂದ ಭೂಮಿಯೆಲ್ಲವನ್ನೂ ತುಂಬುವೆನು. ಯುದ್ಧದಲ್ಲಿ ನನ್ನ ಹೊಯ್ದುಗಳಿಂದ ಕತ್ತರಿಸಲ್ಪಟ್ಟ ಆನೆಗಳು ಪರ್ವತಗಳಂತೆಯೂ ಮಿಂಚಿನೊಡಗೂಡಿದ ಮೋಡಗಳಂತೆಯೂ ಭೂಮಿಯಲ್ಲಿ ಬೀಳುವುವು. ನಾನು ಬೆರಳುಚೀಲವನ್ನು ಧರಿಸಿ ಹೊಡೆದನಾದರೆ ಮನುಷ್ಯರಲ್ಲಿ ನನ್ನ ಮುಂದೆ ನಿಲ್ಲುವವರಾರು ನನ್ನ ಯುದ್ಧ ಚಾತುರವನ್ನು ನೀನು ನೋಡಬೇಕು. ಅನೇಕ ಶರಗಳಿಂದ ಒಬ್ಬನನ್ನು ಹೊಡೆಯಬೇಕಾದರೂ ಒಂದು ಶರದಿಂದ ಅನೇಕ ಮಂದಿಯನ್ನು ಹೊಡೆಯಬೇಕಾದರೂ ಶಕ್ತನು. ನಾನು ಬಿಲ್ಲಿನಲ್ಲಿ ಅಂಬನ್ನು ಹೂಡಿ ಮರ್ಮಸ್ಥಾನಗಳಿಗೆ ಗುರಿಯಿಟ್ಟು ಹೊಡೆದರೆ ಆ ಕ್ಷಣದಲ್ಲೇ ಅನೇಕ ಗಜತುರಗಗಳು ಸತ್ತು ಬೀಳುವುವು.

ಮುಂದುವರಿಯುವುದು...



• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ನಮ್ಮ ತಂದೆಯಾದ ದಶರಥರಾಯನು ನಿನ್ನನ್ನು ವನವಾಸಕ್ಕೆ ಕಳುಹಿಸಿ ಭರತನಿಗೆ ಪಟ್ಟಾಭಿಷೇಕವನ್ನು ಮಾಡುವುದಕ್ಕೆ ಸಮರ್ಥನಾಗಲಾರನೆಂದು ಹೇಳುವುದೇನು ! ಹದಿನಾಲ್ಕು ವರುಷಗಳವರೆಗೆ ನಿನ್ನನ್ನು ವನವಾಸಕ್ಕೆ ಕಳುಹಿಸಬೇಕೆಂದು ಹೇಳುವವರಿಗೇ ಹದಿನಾಲ್ಕು ವರುಷಗಳವರೆಗೆ ವನವಾಸವಾಗುವಂತೆ ಮಾಡುವನು. ದಶರಥರಾಯನು ಭರತನಿಗೆ ಪಟ್ಟಾಭಿಷೇಕವನ್ನು ಮಾಡುವುದಾಗಿ ಹೇಳುವ ಮಾತನ್ನೇ ನಿಲ್ಲಿಸುವೆನು. ನನ್ನ ಪೌರುಷವು ಉಗ್ರವಾದದ್ದು. ದೈವಗತಿಯನ್ನು ಬಿಟ್ಟು ಅಂಥ ಉಗ್ರಗತಿಯಿಂದ ಅನೇಕ ಸಾವಿರ ವರುಷಗಳವರೆಗೆ ರಾಜ್ಯ ಪರಿಪಾಲನಮಾಡಿ ಕಡೆಯಲ್ಲಿ ವಾನಪ್ರಸ್ಥಾಶ್ರಮಕ್ಕೆ ತೆರಳು. ಆಮೇಲೆ ನಿನ್ನ ಮಕ್ಕಳೇ ರಾಜ್ಯ ಪರಿಪಾಲನವನ್ನು ಮಾಡಬೇಕಲ್ಲದೆ ಮತ್ತೊಬ್ಬರಿಗೆ ಸಲ್ಲದು. ನಮ್ಮ ವಂಶದ ರಾಜರ್ಷಿಗಳೆಲ್ಲರೂ ಮಕ್ಕಳು ಪ್ರಬುದ್ಧರಾದಮೇಲೆ ರಾಜ್ಯಭಾರವನ್ನು ಅವರ ವಶಮಾಡಿ ವನಕ್ಕೆ ಹೋಗಿ ವಾನಪ್ರಸ್ಥಾಶ್ರಮವನ್ನು ಕೈಗೊಂಡರೆಂಬುದು ನಮ್ಮ ಕುಲದ ಬಿರುದು.

ಅಂಥ ರಾಜ್ಯಾಭಿಷೇಕಕ್ಕೆ ಯೋಗ್ಯನಾದ ನೀನು ಮನಸ್ಸಿನಲ್ಲಿ ರಾಜ್ಯಭಾರವನ್ನು ವಹಿಸಬಾರದೆಂದೇಣಿಸಿದರೆ ನಿನ್ನ ರಾಜ್ಯವನ್ನು ನಿನ್ನ ಅಪ್ಪಣೆಯಿಂದ ನಾನು ಪರಿಪಾಲಿಸಿಕೊಂಡು ನಿನಗೆರಡೆಣಿಸದೆ ಸಮುದ್ರವು ದಡವನ್ನು ಮೀರದಂತಿರುವೆನು. ನೀನು ನಿನ್ನ ಮನಸ್ಸಿನಲ್ಲಿ ಸಂಶಯವನ್ನು ಬಿಟ್ಟು ಗಂಗಾಧಿನದಿಗಳಿಂದ ನಿನ್ನ ಪಟ್ಟಾಭಿಷೇಕಾರ್ಥವಾಗಿ ಸುವರ್ಣಕಲಶಗಳಲ್ಲಿ ತರಲ್ಪಟ್ಟ ಮಂಗಲ ತೀರ್ಥಗಳಿಂದ ಪಟ್ಟಾಭಿಷೇಕವನ್ನು ಮಾಡಿಸಿಕೊ. ನಿನ್ನ ಅಪ್ಪಣೆಯಿಂದ ನಾನೊಬ್ಬನೇ ಸಮಸ್ತ ಶತ್ರುಗಳನ್ನೂ ಜಯಿಸುವೆನು. ನಯವಾಗಿ ಉರುಟಾಗಿ ಉದ್ದವಾದ ನನ್ನ ಈ ತೋಳುಗಳು

ಭೂಷಣಾರ್ಥವಾಗಿರುವವಲ್ಲ, ನಾನು ಶೃಂಗಾರಾರ್ಥವಾಗಿ ಬಿಲ್ಲು ಬಾಣಗಳನ್ನು ಧರಿಸಿಕೊಂಡಿರುವವನಲ್ಲ. ಎರಡು ಭುಜಗಳು, ಬಿಲ್ಲು ಬಾಣಗಳು–ಈ ನಾಲ್ಕರಿಂದ ಕೂಡಿ ಶತ್ರುಸಂಹಾರಕ್ಕೆ ಸನ್ನದ್ಧನಾಗಿದ್ದೇನೆ. ಲೋಕದಲ್ಲಿ ನನಗೆ ಶತ್ರುವೇ ಇಲ್ಲ. ಮಿಂಚಿನಂತೆ ಹೊಳೆಯುತ್ತಿರುವ ನನ್ನ ಖಡ್ಗಧಾರೆಯಿಂದ ರಣದಲ್ಲಿ ದೇವೇಂದ್ರನನ್ನಾದರೂ ಸಂಹರಿಸುವೆನು. ಯಾರನ್ನೂ ಲೆಕ್ಕಿಸುವವನಲ್ಲ, ನನ್ನ ಭುಜಬಲದಿಂದಲೂ ಹೊಳೆಯುವ ಖಡ್ಗಗಳಿಂದಲೂ ಕತ್ತರಿಸಲ್ಪಡುವ ಆನೆ ಕುದುರೆ ಕಾಲಾಳುಗಳ ಶಿರಸ್ಸುಗಳಿಂದ ಭೂಮಿಯೆಲ್ಲವನ್ನೂ ತುಂಬುವೆನು. ಯುದ್ಧದಲ್ಲಿ ನನ್ನ ಹೊಯ್ದುಗಳಿಂದ ಕತ್ತರಿಸಲ್ಪಟ್ಟ ಆನೆಗಳು ಪರ್ವತಗಳಂತೆಯೂ ಮಿಂಚಿನೊಡಗೂಡಿದ ಮೋಡಗಳಂತೆಯೂ ಭೂಮಿಯಲ್ಲಿ ಬೀಳುವುವು. ನಾನು ಬೆರಳುಚೀಲವನ್ನು ಧರಿಸಿ ಹೊಡೆದನಾದರೆ ಮನುಷ್ಯರಲ್ಲಿ ನನ್ನ ಮುಂದೆ ನಿಲ್ಲುವವರಾರು ನನ್ನ ಯುದ್ಧ ಚಾತುರವನ್ನು ನೀನು ನೋಡಬೇಕು. ಅನೇಕ ಶರಗಳಿಂದ ಒಬ್ಬನನ್ನು ಹೊಡೆಯಬೇಕಾದರೂ ಒಂದು ಶರದಿಂದ ಅನೇಕ ಮಂದಿಯನ್ನು ಹೊಡೆಯಬೇಕಾದರೂ ಶಕ್ತನು. ನಾನು ಬಿಲ್ಲಿನಲ್ಲಿ ಅಂಬನ್ನು ಹೂಡಿ ಮರ್ಮಸ್ಥಾನಗಳಿಗೆ ಗುರಿಯಿಟ್ಟು ಹೊಡೆದರೆ ಆ ಕ್ಷಣದಲ್ಲೇ ಅನೇಕ ಗಜತುರಗಗಳು ಸತ್ತು ಬೀಳುವುವು.

ಮುಂದುವರಿಯುವುದು...

ಕಾನನದ ಕುಸುಮ





ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಕಾನನದ ಕುಸುಮ ಇದು ಶ್ರೀಮತಿ ಎಂ.ಗೀತಕುಮಾರಿ ಐಗೂರು ಅವರ ಕೃತಿ. ಈ ಕೃತಿಗೆ ದಾವಣಗೆರೆಯ ಲೇಖಕಿಯಾದ ಸಂಧ್ಯಾ ಸುರೇಶ್ ರವರು ಮೊದಲ ಮಾತನ್ನು ಬರೆದಿದ್ದಾರೆ. ಈ ಕವನ ಸಂಕಲನವು ದಾವಣಗೆರೆಯ ಪೃಥ್ವಿ ಪ್ರಕಾಶನ ಪ್ರಕಟಿಸಿದೆ.

ಕೃತಿಯಲ್ಲಿರುವ ಮಾಹಿತಿ:- ಈ ಕವನ ಸಂಕಲನದಲ್ಲಿ ಸುಮಾರು 50ಕ್ಕೂ ಹೆಚ್ಚಿನ ಕವನಗಳು ಇವೆ. ಶ್ರೀಮತಿ ಗೀತಕುಮಾರಿ ಅವರು ಈ ಕೃತಿಯಲ್ಲಿ ಭಾಷೆ, ನಾಡು, ನುಡಿ, ಜಲದ ಬಗ್ಗೆ ತಮ್ಮ ಮನದಾಳದ ಮಾತುಗಳನ್ನು ಕವನಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಈ ಕವನ ಸಂಕಲನದಲ್ಲಿರುವ ನನ್ನ ಅವ್ವ ಕವನವು ಓದುಗರ ಮನ ಮಿಡಿಯುತ್ತದೆ. ಈ ಕೃತಿಯಲ್ಲಿ ಲೇಖಕಿಯೂ ತನ್ನ ಸುತ್ತಮುತ್ತಲಿನ ಪರಿಸರವನ್ನು ವರ್ಣಿಸುತ್ತಾ ತಮ್ಮ ಮನದಲ್ಲಿ ಬಂದರುಗಳನ್ನು ಕವನದ ಮೂಲಕ ಬರೆದಿದ್ದಾರೆ. ಸಹಬಾಳ್ವೆಗಾಗಿ ಪ್ರಾರ್ಥಿಸುವ ಕವಯತ್ರಿ 'ಆಕಾಶಕ್ಕೆ ಏಣಿ ಹಾಕಿ' ನಕ್ಷತ್ರಗಳನ್ನು ಕೈಯಲ್ಲಿ ಹಿಡಿದು ಸೂರ್ಯಚಂದ್ರರನ್ನು ಆಸೆಯನ್ನು ವ್ಯಕ್ತಪಡಿಸುತ್ತಾರೆ. ವರದಕ್ಷಣೆ ಪಿಡುಗಿನ ಬಗ್ಗೆ ಕಳಕಳಿ ವ್ಯಕ್ತಪಡಿಸುತ್ತಾ ಸಂಬಂಧಗಳ, ಬಾಂಧವ್ಯಗಳನ್ನು ಬೆಸೆಯುತ್ತ ಸಾಗುತ್ತಾರೆ. ಪರಿಸರ ಮಾಲಿನ್ಯ ಎಂಬ ಕವನದಲ್ಲಿ ನಮ್ಮ ಸುತ್ತಮುತ್ತಲಿನ ಸುಂದರ ಪ್ರಕೃತಿಯು ಹೇಗೆ ಕಾರ್ಖಾನೆಗಳ ಹೊಗೆಯಿಂದ ನಾಶವಾಗುತ್ತಿದೆ ಎಂದನು ಕವಯತ್ರಿಯ ತಿಳಿಸಿಕೊಟ್ಟಿದ್ದಾರೆ. ಯುಗಾದಿ ಎಂಬ ಕವನದಲ್ಲಿ ಯುಗಾದಿ ಹಬ್ಬದ ಆಚರಣೆ ಮತ್ತು ನವ ವರುಷ ಕುರಿತು ಸುಂದರವಾಗಿ ಕವನವನ್ನು ಬರೆದಿದ್ದಾರೆ. ಗುರಿ ಎಂಬ ಕವನದಲ್ಲಿ ಆತ್ಮವಿಶ್ವಾಸದಲ್ಲಿ ಬದುಕಿ ತೋರಿಸಬೇಕು ಸಾಧನೆಯ ಹಾದಿಯನ್ನು ನಾವು ಹಿಡಿಯಬೇಕು ಎಂದು ಕವಯತ್ರಿ, ತಮ್ಮ ಕವನದಲ್ಲಿ ಹೇಳಿದ್ದ

ಕರವೇಯಿಂದ ಉಚಿತ ಶುದ್ಧ ಕುಡಿಯುವ ನೀರಿನ ಕೇಂದ್ರಕ್ಕೆ ಚಾಲನೆ

• ಉದಯವಾಹಿನಿ, ಅಥಣಿ

ಜಗತ್ತಿನಲ್ಲಿ ಅನ್ನದಾನ, ರಕ್ತದಾನ, ಅಂಗಾಂಗಗಳ ದಾನ ಸೇರಿದಂತೆ ಇನ್ನಿತರ ದಾನಗಳಂತೆ ಜೀವಜಲವೂ ಕೂಡ ಅತ್ಯಂತ ಶ್ರೇಷ್ಠವಾದ ದಾನವಾಗಿದೆ. ಉಚಿತ ತಂಪು ನೀರಿನ ಅರವಟ್ಟಿಗೆ ಅಥಣಿ ಪಟ್ಟಣಕ್ಕೆ ಆಗಮಿಸುವ ಸಾರ್ವಜನಿಕರಿಗೆ, ಶಾಲಾ, ಕಾಲೇಜಿನ ವಿದ್ಯಾರ್ಥಿಗಳಿಗೆ ಬಿಸಿಲಿನ ದಾಹ ನೀಗಿಸಲು ನೆರವಾಗಲಿದೆ ಎಂದು ಕರವೇ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಣ್ಣಾಸಾಹೇಬ ತೆಲಸಂಗ ಹೇಳಿದರು.

ಅವರು ಪಟ್ಟಣದ ಶಿವಯೋಗಿ ವೃತ್ತದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ (ಎಚ್ ಶಿವರಾಮೇಗೌಡ ಬಣ), ಅಥಣಿ ತಾಲ್ಲೂಕ ಘಟಕದ ವತಿಯಿಂದ ಆರಂಭಿಸಲಾದ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು. ಮಧ್ಯಾಹ್ನದ ಬಿಸಿಲಲ್ಲಿ ನಾಲ್ಕೈದು ಹೆಜ್ಜೆ ನಡೆಯುವಷ್ಟರಲ್ಲಿ ಜನ ದಾಹದಿಂದ ಬಸವಳಿಯುತ್ತಿದ್ದಾರೆ. ಕರವೇ ಘಟಕದಿಂದ ಆರಂಭಿಸಲಾದ ಈ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆ ಕೇಂದ್ರದಿಂದ ಅಥಣಿ ಪಟ್ಟಣಕ್ಕೆ ದಿನನಿತ್ಯ ಬರುವ ಗ್ರಾಮೀಣ ಪ್ರದೇಶದ ಜನರಿಗೆ, ಪರೀಕ್ಷಾ ಸಂದರ್ಭದಲ್ಲಿ ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ಬಿಸಿಲಿನ ದಾಹವನ್ನು ನಿಗಿಸಲು ನೆರವಾಗುತ್ತದೆ ಎಂದು ಹೇಳಿದರು. ಚಿಕ್ಕೋಡಿ ವಿಭಾಗೀಯ ಕರವೇ ಅಧ್ಯಕ್ಷ

ಉದಯವಾಹಿನಿ ಚಿತ್ರ

, ನ್ಯಾಯವಾದಿ ವಿನಯ ಪಾಟೀಲ ಮಾತನಾಡಿ ಜೀವ ಜಲ ಅಮೂಲ್ಯವಾದದ್ದು, ಪ್ರತಿಯೊಂದು ಪ್ರಾಣಿ-ಪಕ್ಷಿಗಳ ಬದುಕಿಗೆ ಆಧಾರವಾಗಿರುವ ಜೀವ ಜಲವನ್ನು ನಾವು ಹಿತಮಿತವಾಗಿ ಬಳಸಬೇಕು. ಕರ್ನಾಟಕ ರಕ್ಷಣಾ ವೇದಿಕೆ ಶಿವರಾಮೇಗೌಡ ಬಣದ ಅಥಣಿ ಕಾರ್ಯಕರ್ತರು ಅರವಟ್ಟಿಗೆ ಕೇಂದ್ರವನ್ನು ಆರಂಭಿಸುವ ಮೂಲಕ ಉತ್ತಮವಾದ ಕಾರ್ಯ ಮಾಡಿದ್ದಾರೆ.

ಕುಡಿಯುವ ನೀರು ಕೂಡ ಮಾರಾಟವಾಗುತ್ತಿರುವ ಇಂದಿನ ದಿನಗಳಲ್ಲಿ ಕರವೇ ಕಾರ್ಯಕರ್ತರು ಅನೇಕ ಕನ್ನಡ ಸೇವೆಯೊಂದಿಗೆ ಉಚಿತವಾಗಿ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆ ಸೇವೆ ಮಾಡುತ್ತಿರುವುದು ಕಾರ್ಯ ಶ್ಲಾಘನೀಯ ಎಂದರು.

ಬದುಕಿನ ಉದ್ದಕ್ಕೂ ಅನೇಕ ಪವಾಡಗಳನ್ನು ಮಾಡಿದ ಯೋಗಿ ನಾರೇಯಣರು: ಬಿ.ಟಿ.ಕುಮಾರಸ್ವಾಮಿ

ಮನುಷ್ಯರಾಗಿ ಹುಟ್ಟಿ ದೈವತ್ವಕ್ಕೆ ಏರಿದವರು ಶ್ರೀಯೋಗಿ ನಾರೇಯಣ ಯತೀಂದ್ರರು

• ಉದಯವಾಹಿನಿ, ಚಿತ್ರದುರ್ಗ

ಸಾಮಾನ್ಯ ಮನುಷ್ಯರಾಗಿ ಹುಟ್ಟಿ, ದೈವತ್ವಕ್ಕೆ ಏರಿದ ಮಹಾನ್ ಪುರುಷ ಶ್ರೀ ಯೋಗಿ ನಾರೇಯಣ ಯಂತೀದ್ರರು, ಕೈವಾರ ತಾತಯ್ಯ ಎಂದೇ ಪ್ರಸಿದ್ಧರಾಗಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಸಹಯೋಗದಲ್ಲಿ ನಗರದ ತ.ರಾ.ಸು ರಂಗಮಂದಿರದಲ್ಲಿ ಆಯೋಜಿಸಲಾದ ಶ್ರೀ ಯೋಗಿ ನಾರೇಯಣ ಯತೀಂದ್ರ (ಕೈವಾರ ತಾತಯ್ಯ) ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಕೈವಾರ ತಾತಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಮನುಷ್ಯನಾಗಿ ಹುಟ್ಟಿ ದೇವಮಾನವರಾದ ಪ್ರಸಂಗ ಬಹಳ ವಿರಳವಾದುದ್ದು. 1726 ರಲ್ಲಿ ಮುದ್ದಮ್ಮ ಹಾಗೂ ಕೊಂಡಪ್ಪ ದಂಪತಿಗಳ ಮಗನಾಗಿ, ಈ ಹಿಂದಿನ ಕೋಲಾರ ಜಿಲ್ಲೆಯ ಕೈವಾರದಲ್ಲಿ ಯೋಗಿ ನಾರೇಯಣರು ಜನ್ಮಿಸುತ್ತಾರೆ. ಇವರು ಮೂಲ ಹೆಸರು ನಾರಾಯಣಪ್ಪ, ಬಲಿಜ ಸಮುದಾಯಕ್ಕೆ ಸೇರಿದ ಇವರು, ಕುಲ ಕಸುಬು ಬಳೆ ಮಾರುವ ವೃತ್ತಿ ಮಾಡುತ್ತಿದ್ದರು.

ವ್ಯಾಪಾರದಲ್ಲಿ ದೇವರನ್ನು ಕಂಡು ಲೌಕಿಕ ಜಗತ್ತಿನಿಂದ ಅಲೌಕಿಕದೆಡೆಗೆ ನಾರಾಯಣಪ್ಪ ಸಾಗುತ್ತಾರೆ. ಬದುಕಿನ ಉದ್ದಕ್ಕೂ ಅನೇಕ ಪವಾಡಗಳನ್ನು ಮಾಡಿದ ಯೋಗಿ ನಾರೇಯಣರು ಸಮಾಜದಲ್ಲಿನ ಅಂಕು ಡೊಂಕುಗಳನ್ನು ತಿದ್ದಿದರು. ದಿವ್ಯ ಜ್ಞಾನದಿಂದ ಕಾಲಜ್ಞಾನ ರಚಿಸಿದರು. ಬಲಿಜ ಜನಾಂಗ ಸಂಖ್ಯೆಯಲ್ಲಿ

ಉದಯವಾಹಿನಿ ಚಿತ್ರ

ಇಂದು ನಾಡಿನ ಸಂಸ್ಕೃತಿ ಅಳಿದು ಹೋಗುವ ಅಂಚಿನಲ್ಲಿದೆ. ಇದನ್ನು ಮತ್ತೆ ಕಟ್ಟಿಕೊಡಬೇಕಾದ ಸಾಮಾಜಿಕ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ. ಮಕ್ಕಳಿಗೆ ಉತ್ತಮ ಸಂಸ್ಕಾರಯುತ ಶಿಕ್ಷಣ ನೀಡಿ ಅವರನ್ನು ಉತ್ತಮ ನಾಗರಿಕರನ್ನಾಗಿ ಸಬೇಕು -ಬಿ.ಟಿ.ಕುಮಾರಸ್ವಾಮಿ
ಅಪರ ಜಿಲ್ಲಾಧಿಕಾರಿ

ಕೈವಾರ, ತುಂಬಾ ಐತಿಹ್ಯಗಳು ಇರುವ ಸ್ಥಳವಾಗಿದೆ. ರಾಮಾಯಣ, ಮಹಾಭಾರತ ನಂಟು ಕೈವಾರ ಪಟ್ಟಣಕ್ಕಿದೆ. ಮಹಿಷಾಸುರನನ್ನು ಕೊಂದು ದೇವಿ ತನ್ನ ಉಗ್ರರೂಪವನ್ನು ತೊರೆದು ಶಾಂತವಾದ ಸ್ಥಳ ಕೈವಾರ ಎಂದು ಪುರಾಣಗಳಲ್ಲಿ ಹೇಳಲಾಗಿದೆ. ಇಂತಹ ಸ್ಥಳದಲ್ಲಿ ಜನಿಸಿದ ನಾರಾಯಣಪ್ಪ ಮುಂದೆ ಶ್ರೀಯೋಗಿ ನಾರೇಯಣ ಯತೀಂದ್ರರಾಗಿ ಕೈವಾರವನ್ನು ಕಾರ್ಯಕ್ಷೇತ್ರವನ್ನಾಗಿಸಿಕೊಂಡರು
-ಹುರುಳಿ ಬಸವರಾಜ್

ಕಡಿಮೆ ಇದ್ದರೂ, ಅತ್ಯಂತ ಸ್ವಾಭಿಮಾನಿ ಸಮಾಜವಾಗಿದೆ. ವ್ಯಾಪಾರ ಹಾಗೂ ಶಿಕ್ಷಣ ಪಡೆದು ಸಮಾಜದ ಮುಖ್ಯವಾಹಿನಿಗೆ ಬಂದಿದ್ದಾರೆ. ರಾಜಕೀಯವಾಗಿಯೂ ಜಾಗೃತರಾಗಿದ್ದಾರೆ. ಆದರೂ ಮಕ್ಕಳಿಗೆ ಉನ್ನತ ಶಿಕ್ಷಣ ನೀಡುವ ಮೂಲಕ ಇನ್ನೂ ಹೆಚ್ಚಿನ ಸ್ಥಾನಮಾನ ಗಳಿಸುವಂತೆ ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಕರೆ ನೀಡಿದರು.

ಸಾಹಿತಿ ಹುರುಳಿ ಬಸವರಾಜ್ ಉಪನ್ಯಾಸ ನೀಡಿ, ಶ್ರೀ ಯೋಗಿ ನಾರೇಯಣ ಯತೀಂದ್ರರು ರಚಿಸಿದ ಕಾಲಜ್ಞಾನ ಆಧುನಿಕ ಯುಗದಲ್ಲಿ ಸಾಮಾಜಿಕ ಅವ್ಯವಸ್ಥೆ, ಭವಿಷ್ಯದಲ್ಲಿನ ಪ್ರಳಯದ ಮುನ್ಸೂಚನೆಗಳನ್ನು ನೀಡಿದೆ. ಎಲ್ಲ ಆಧುನಿಕ ಸವಲತ್ತುಗಳನ್ನು ಜೀವ ನದಲ್ಲಿ ಅಳವಡಿಸಿಕೊಂಡಿರುವ ಮನುಷ್ಯನ ಬದುಕು ಅಧಃಪತನಕ್ಕೆ ಜಾರಿದೆ. ಸಂಬಂಧಗಳು ಸಡಿಲವಾಗುತ್ತಿವೆ. ಸಂಕೋಚ ಬದುಕುತ್ತಿರುವ, ಮುನ್ನಡೆಯೇ ಕಾಣದೇ ಆತ್ಮಹತ್ಯೆ ಅಂತಹ ಪ್ರಯತ್ನಗಳಿಗೆ ಯುವ ಜನರು ತುತ್ತಾಗುತ್ತಿದ್ದಾರೆ.

ಈ ಎಲ್ಲಾ ಅಂಶಗಳು ಸಹ ನಾರೇಯಣ ರಚಿಸಿದ ಕಾಲಜ್ಞಾನದಲ್ಲಿ ಅಡಗಿವೆ. ಇವುಗಳನ್ನು ತಿಳಿದುಕೊಳ್ಳುವ ಮೂಲಕ, ತಪ್ಪುಗಳನ್ನು ಸರಿಪಡಿಸಿಕೊಂಡು ಜೀವನವನ್ನು ನಡೆಸಿದರೆ, ಸಮಾಜ ಉನ್ನತಿ ಸಾಧಿಸಲಿದೆ ಎಂದು ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಗುರುನಾಥ್ ಸ್ವಾಗತಿಸಿದರು. ವಿಕಲಚೇತನ

ಅದ್ದೂರಿ ಮೆರವಣಿಗೆ

ಕೈವಾರ ತಾತಯ್ಯ ಜಯಂತಿ ಅಂಗವಾಗಿ ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ನಗರದ ಹೊಳಲ್ಕೆರೆ ರಸ್ತೆಯ ನೀಲಕಂಠೇಶ್ವರ ದೇವಸ್ಥಾನ ಬಳಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಅದ್ದೂರಿ ಮೆರವಣಿಗೆ ಚಾಲನೆ ನೀಡಿದರು. ಶ್ರೀ ಯೋಗಿನಾರೇಯಣ ಯತೀಂದ್ರ, ಬಲಿಚಕ್ರವರ್ತಿ, ಶ್ರೀಕೃಷ್ಣದೇವರಾಯ, ಜ್ಯೋತಿಬಾಪುಲೆ, ಸಾವಿತ್ರಿಬಾಯಿ ಪುಲೆ ಅವರ ಭಾವಚಿತ್ರಗಳನ್ನು ಮೆರವಣಿಗೆಯಲ್ಲಿದ್ದವು. ಸಾಂಸ್ಕೃತಿಕ ಕಲಾ ತಂಡಗಳು, ಬಲಿಜ ಮಹಿಳಾ ಸಂಘಗಳ ಸದಸ್ಯರು ಪಾಲ್ಗೊಂಡಿದ್ದರು. ಮೆರವಣಿಗೆ ಗಾಂಧಿ ವೃತ್ತ, ಎಸ್.ಬಿ.ಐ, ಅಂಬೇಡ್ಕರ್ ವೃತ್ತದ ಮೂಲಕ ತರಾಸು ರಂಗಮಂದಿರ ತಲುಪಿತು.

ವಿದ್ಯಾರ್ಥಿಗಳಿಗೆ ಸನ್ಮಾನ

ಜಯಂತಿ ಅಂಗವಾಗಿ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.85 ಕ್ಕಿಂತ ಹೆಚ್ಚು ಅಂಕ ಪಡೆದ ಬಲಿಜ ಸಮುದಾಯ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಪ್ರತಿಭೆ ರಕ್ಷಾ ಕುರುಬರಹಳ್ಳಿ ಪ್ರಾರ್ಥಿಸಿದರು. ಗಾಯಕ ಮುತ್ತುರಾಜ ಅವರ ತಂಡ ನಾಡಗೀತೆ ಪ್ರಸ್ತುತ ಪಡಿಸುವುದರೊಂದಿಗೆ ಗೀತಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ನವೀನ್ ಮಸ್ಕಲ್ ನಿರೂಪಿಸಿದರು. ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ತಾಜ್ವೀರ್, ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಆರ್.ಶಿವಣ್ಣ, ನಗರಸಭೆ ಆಯುಕ್ತೆ ಎಂ.ರೇಣುಕಾ, ಜಿಲ್ಲಾ ಶ್ರೀ ಯೋಗಿ ನಾರೇಯಣ ಯಂತೀದ್ರ ಬಲಿಜ ಸಂಘದ ಅಧ್ಯಕ್ಷ ಎಂ.ಎ.ಸೇತುರಾಮ್, ಕಾರ್ಯದರ್ಶಿ ಎಂ.ಗಂಗಣ್ಣ, ತಾಲ್ಲೂಕು ಸಂಘದ ಅಧ್ಯಕ್ಷ ಎಂ.ಜಿ. ಸೂರ್ಯನಾರಾಯಣ, ಶ್ರೀ ಯೋಗಿ ನಾರೇಯಣ ಸೌಹಾರ್ದ ಪತ್ತಿನ ಸಹಕಾರ ಬ್ಯಾಂಕ್ ಅಧ್ಯಕ್ಷ ಎಂ.ಕೆ.ಪ್ರಹ್ಲಾದ್, ಬೋಮೇನಹಳ್ಳಿ ಶ್ರೀ ಯೋಗಿನಾರೇಯಣ ಯತೀಂದ್ರ ವಿದ್ಯಾಸಂಸ್ಥೆ ಅಧ್ಯಕ್ಷ ಎಂ.ವಿ.ರಾಮದಾಸಪ್ಪ, ಬೋಮೇನಹಳ್ಳಿ ಶ್ರೀ ಯೋಗಿನಾರೇಯಣ ಯತೀಂದ್ರ ಸಂಘದ ಅಧ್ಯಕ್ಷ ವಿರೂಪಾಕ್ಷಪ್ಪ ಸೇರಿದಂತೆ ಬಲಿಜ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಮದ್ಯ ವಿರೋಧಿಸಿ ಜಾಗೃತಿ

• ಉದಯವಾಹಿನಿ, ಬಳ್ಳಾರಿ

ತಾಲ್ಲೂಕಿನ ಬಾದನಹಟ್ಟಿ ಗ್ರಾಮದಲ್ಲಿ ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಬಳ್ಳಾರಿ ಇವರ ಸಂಯುಕ್ತಾಶ್ರಯದಲ್ಲಿ ಮದ್ಯ ಮತ್ತು ಮಾದಕಗಳ ದುಷ್ಪರಿಣಾಮಗಳ ಕುರಿತು ಜಾಗೃತಿ ಗೀತೆಗಳ ಮೂಲಕ ಅಕ್ಷಯ ಕಾಲಾ ಟ್ರಸ್ಟ್ ವತಿಯಿಂದ ನೆರವೇರಿಸಿ ಕೊಟ್ಟರು ಈ ಕಾರ್ಯಕ್ರಮದಲ್ಲಿ, ಗ್ರಾಮ ಪಂಚಾಯತಿ ಸದಸ್ಯರಾದ ಹನುಮಂತಪ್ಪ. ಬಸವರಾಜ್ ಪಂಚಾಯತಿ ಸೆಕ್ರೆಟರಿ ಸ್ವಾಮಿ ತಮಟೆ ಬಾರಿಸುವ ಮೂಲಕ ಉದ್ಘಾಟನೆ ಮಾಡಿದರು.

ಜಯಂತಿ ಆಚರಿಸದೇ ಅವಮಾನ ಮಾಡಿದ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

• ಉದಯವಾಹಿನಿ, ಹುಮನಾಬಾದ್

ರೇಣುಕಾಚಾರ್ಯರು ಸೇರಿ ಅನೇಕ ಮಹಾತ್ಮರ ಭಾವಚಿತ್ರಕ್ಕೆ ಅಪಮಾನ ಹಾಗೂ ಸರಕಾರಿ ಕಚೇರಿಗಳಲ್ಲಿ ಜಯಂತಿ ಕಾರ್ಯಕ್ರಮ ಆಯೋಜನೆ ಮಾಡದ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿ ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ನಾನಾ ಸಂಘಟನೆಗಳ ಪದಾಧಿಕಾರಿಗಳು ತಹಶೀಲ್ದಾರ್ ಅಂಜುಮ್ ತಬಸುಮ್‌ಗೆ ಮನವಿ ಸಲ್ಲಿಸಿದರು. ಕನ್ನಡ ಸೈನ್ಯ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಶಕುಂತಲಾ ಬಿರಾದಾರ ಮಾತನಾಡಿ ಆವರಣದಲ್ಲಿ ರೇಣುಕಾಚಾರ್ಯರ ಭಾವಚಿತ್ರ ಎಲ್ಲೆಂದರಲ್ಲಿ ಬಿಸಾಡಿ ಅದರ ಮೇಲೆ ಚಹಾ ಕಡಿದು ಪೇಪರ್ ಕಪ್ ಎಸೆದು ಅಪಮಾನ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಣ್ಣದಲ್ಲಿ ಮಿಂದೆದ್ದ ಯುವಕರು, ಮಕ್ಕಳು,ಮಹಿಳೆಯರು,ಹಿರಿಯರು

ತಾಲ್ಲೂಕಿನಲ್ಲಿ ಎರಡು ದಿನ ಹೋಳಿ ಹಬ್ಬದ ಸಂಭ್ರಮ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನಾದ್ಯಂತ ಜನರು ಗೊಂದಲದಲ್ಲಿ ಎರಡು ದಿನಗಳಿಂದ ಹೋಳಿ ಹಬ್ಬವನ್ನು ಅತ್ಯಂತ ಸಡಗರ ಸಂಭ್ರಮದಿಂದ ಆಚರಣೆ ಮಾಡುವುದು ಕಂಡುಬಂತ್ತು.

ತಾಲ್ಲೂಕಿನ ಕೆಲವಡೆ ಗುರುವಾರ ಕಾಮದಹನ ಸುಟ್ಟು ಹೋಳಿ ಹಬ್ಬದ ನಿಮಿತ್ತ ಪರಸ್ಪರ ಬಣ್ಣ ಎರಚಿ ಸಂಭ್ರಮಿಸಿದರೆ, ಮತ್ತೊಂದೆಡೆ ಕಾಮದಹನ ಸುಟ್ಟು ಶನಿವಾರ ಹೋಳಿ ಹಬ್ಬದ ಬಣ್ಣವನ್ನು ಪರಸ್ಪರ ಹಚ್ಚಿ ಸಂಭ್ರಮಿಸಿದರು, ಒಟ್ಟಾರೆ ಎರಡು ದಿನಗಳಿಂದ ಗ್ರಾಮೀಣ ಭಾಗದಲ್ಲಿ ಒಂದುದಿನ ಆಚರಿಸಿದರೆ ಅವಳಿ ನಗರಗಳಾದ ಚಿಂಚೋಳಿ-ಚಂದಾಪೂರದಲ್ಲಿ ಶನಿವಾರ ಹೋಳಿ ಹಬ್ಬವು ಅತ್ಯಂತ ಸಂಭ್ರಮದಿಂದ ಪರಸ್ಪರ ಬಣ್ಣ ಹಚ್ಚಿ ಎರಚಿ ಬಣ್ಣದ ಮಡಿಕೆ ಒಡೆದು ಬೊಬ್ಬೆ ಹಾಕುತ್ತಾ ಖುಷಿಪಟ್ಟು ಪರಸ್ಪರ ಬಣ್ಣ ಸಿಡಿಸಿದರೆ ಮತ್ತೊಂದೆಡೆ ಹಿಂದಿ ಕನ್ನಡ ಹಾಡುಗಳಿಗೆ ನೃತ್ಯ ಪ್ರದರ್ಶನ ಮಾಡಿ ಬಣ್ಣ ಹಚ್ಚುವ ಮೂಲಕ ಸಂಭ್ರಮಿಸಿದರು.

ತಾಲ್ಲೂಕಿನ ಚಿಮ್ಮಾಯಿದ್ಗಾಲಿಯ, ಐನೋಳ್ಳಿ, ದೇಗಲಮಡಿ, ಅಣವಾರ, ಪೋಲಕಪಳ್ಳಿ, ಸುಲೇಪೇಟ, ಚಿಮ್ಮಾನಚೋಡ, ಸಾಲೆಬೀರನಳ್ಳಿ, ತುಮಕುಂಟಾ, ಹಸರಗುಂಡಗಿ, ಕನಕಪುರ, ದೋಟಿಕೋಳ, ಎಂಪಳ್ಳಿ,

ಉದಯವಾಹಿನಿ ಚಿತ್ರ

ಗಾರಂಪಳ್ಳಿ, ಕೊಲ್ಲೂರ, ಮಿರಿಯಾಣ, ಕುಂಚಾವರಂ, ಐನಾಪೂರ, ಸೇರಿದಂತೆ ವಿವಿಧ ಗ್ರಾಮ ತಾಂಡಾಗಳಲ್ಲಿ ಎರಡು ದಿನಗಳಿಂದ ಅತ್ಯಂತ ಸಡಗರ ಸಂಭ್ರಮದಿಂದ ಹೋಳಿ ಹಬ್ಬವನ್ನು ಪರಸ್ಪರ ಬಣ್ಣ ಹಚ್ಚಿ ಸಂಭ್ರಮಿಸಿದರೆ ಕೆಲಕಡೆ ಬಣ್ಣದ ಜೋತೆ ಹಿಂದಿ ಕನ್ನಡ ತೆಲಗು ಹಾಡುಗಳಿಗೆ ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು, ಕೆಲಕಡೆ ಬಣ್ಣದ ಮಡಕೆ ಒಡೆದು ಬೊಬ್ಬೆ ಹಾಕಿದರೆ ಮತ್ತೊಂದು ಕಡೆ ಮೋಸರಿನ ಮಡಕೆ ಒಡೆದು ಪರಸ್ಪರ ಬಣ್ಣ ಹಚ್ಚುವ ಮೂಲಕ ಯುವಕರು, ಹಿರಿಯರು, ಮಹಿಳೆಯರು, ಮಕ್ಕಳು ಸಂಭ್ರಮಿಸಿದರು. ಹೋಳಿ ಹಬ್ಬದ ನಿಮಿತ್ತ ಗಲ್ಲಿಗಲ್ಲಿಗಳಲ್ಲಿ ಬಣ್ಣದ ಬ್ಯಾರೆಲ್ ತುಂಬಿಟ್ಟು ಪರಸ್ಪರ ಬಣ್ಣ ಹಚ್ಚಿದರೆ ಮಕ್ಕಳು ಸಹ ಬಾಟಲಿಯಲ್ಲಿ ಬಣ್ಣದ ನೀರು ತುಂಬಿಕೊಂಡು ಗುಂಪು ಗುಂಪಾಗಿ ಪರಸ್ಪರ ಪಿಚಕಾರಿ ಬಣ್ಣ ಹಾಕುವುದರ ಮೂಲಕ ಸಂಭ್ರಮಿಸಿದರು.

ಮಡಿಕೆ ಒಡೆಯುವ ಪ್ರದರ್ಶನ:- ಪಟ್ಟಣದ ಚಂದಾಪೂರದ ರಾಮನಗರದಲ್ಲಿ ಯುವಕರು, ಮಕ್ಕಳು, ಮಹಿಳೆಯರು ಎತ್ತರಮಟ್ಟಕ್ಕೆ ಬಣ್ಣದ ಮಡಿಕೆ ಕಟ್ಟಿ ಒಡೆಯುವ ಸ್ಪರ್ಧೆ ಏರ್ಪಡಿಸಲಾಗಿತ್ತು, ಆದರೆ ಯುವಕರು ಪರಸ್ಪರ ಒಬ್ಬರ ಮೇಲೆ ಒಬ್ಬರಂತೆ ಗೋಪುರ ನಿರ್ಮಿಸಿ ಅತ್ಯಂತ ಸಡಗರ ಸಂಭ್ರಮದಿಂದ ಬಣ್ಣದ ಮಡಿಕೆ ಒಡೆದು ಪರಸ್ಪರ ಬಣ್ಣ ಎರಚಿ ಬೊಬ್ಬೆ ಹಾಕಿ ಕನ್ನಡ ಹಿಂದಿ ಸಿನಿಮಾ ಹಾಡುಗಳಿಗೆ ಕುಣಿದು ಕುಪ್ಪಳಿಸಿ ಹೋಳಿ ಹಬ್ಬವನ್ನು ಆಚರಿಸಿದರು.

ಪಟ್ಟಣದ್ಯಂತ ಬಿಕೋ:- ಹೋಳಿ ಹಬ್ಬವನ್ನು ಶನಿವಾರ ಆಚರಣೆ ಮಾಡುತ್ತಾರೆವೆಂಬ ಸುದ್ದಿ ತಿಳಿದ ವ್ಯಾಪಾರಸ್ಥರು ಹಲವಾರು ಜನ ಸ್ವಯಂಘೋಷಿತವಾಗಿ ಪ್ರತಿಶತಃ 80ರಷ್ಟು ಅಂಗಡಿ ಮುಂಗಟ್ಟುಗಳು ಬಂದ್ ಮಾಡಲಾಗಿತ್ತು, ಅವಳಿಪಟ್ಟಣವು ಬಿಕೋ ಅನ್ನುತ್ತಿತ್ತು, ಕೆಲವರು ಬಟ್ಟೆ ಅಂಗಡಿ, ಚಹಾ ಅಂಗಡಿ, ಟೇಲರ್ ಅಂಗಡಿ, ಹಣ್ಣುಹಂಪಲು ಅಂಗಡಿ ಸೇರಿದಂತೆ ಕೆಲವರು ಮಾತ್ರ ಅಂಗಡಿಗಳು ತೆರೆದು ವ್ಯಾಪಾರ ಮಾಡುವುದು ಕಂಡಿದರೆ, ಸಾಯಂಕಾಲ ಸಮಯ ಎಲ್ಲಾ ಅಂಗಡಿಗಳು ಪ್ರಾರಂಭಿಸಿ ಯಥಾವತ್ತಾಗಿ ವ್ಯಾಪಾರ ಮಾಡುವುದು ಕಂಡುಬಂತ್ತು.

ಹೋಳಿ ಹಬ್ಬದ ಸಡಗರ

• ಉದಯವಾಹಿನಿ, ಚಿಂಚೋಳಿ

ಅವಳಿ ಪಟ್ಟಣದ ಚಿಂಚೋಳಿ-ಚಂದಾಪೂರದಲ್ಲಿ ಅತ್ಯಂತ ಸಡಗರ ಸಂಭ್ರಮದಿಂದ ಮುದ್ದುಮಕ್ಕಳು ಮಹಿಳೆಯರು ಹಿರಿಯರು ಹೋಳಿ ಹಬ್ಬದ ಅಂಗವಾಗಿ ಬ್ಯಾರೆಲ್‌ನಲ್ಲಿ ಬಣ್ಣ ತುಂಬಿ ಹಿರಿಯರು ಮಹಿಳೆಯರು ಬಕೆಟ್‌ಗಳಿಂದ ಎತ್ತಿ ಪರಸ್ಪರ ಸುರಿದುಕೊಂಡು ಸಂಭ್ರಮಿಸಿದರೆ ಮುದ್ದುಮಕ್ಕಳು ಬಾಟಲ್ ನಲ್ಲಿ ಬಣ್ಣದ ನೀರು ತುಂಬಿಕೊಂಡು ಪರಸ್ಪರ ಬಣ್ಣ ಎರಚಿ ರಂಗಿನಾಟದಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

ಶ್ರೀನಿವಾಸ ಚಿಂಚೋಳಿಕರ್, ವೀರಭದ್ರಪ್ಪ ಮರಪಳ್ಳಿ, ಮಲ್ಲಿಕಾರ್ಜುನ, ಚನ್ನು ಸ್ವಾಮಿ, ಅಂಬರೀಶ ಒಲಗೇರಿ, ಪ್ರಭು ಕಂದಿ, ಚೇತನ, ಮೆಡಿಕಲ್ ಚಂದನ, ವಿಜಯಲಕ್ಷ್ಮಿ ದೇಸಾಯಿ, ಆಶಾ ಚಿಂಚೋಳಿಕರ್, ರೂಪಾ ಮಿರಿಯಾಣ, ಗಂಗಾಬೀಕಾ, ರತ್ನಮ್ಮ ಯಂಪಳಿ, ಶೋಭಾ, ವಿದ್ಯಾ ಶ್ರೀ, ವಿಜಯಮ್ಮ, ಸುಮಿತ್ರ, ಸಂಗನಬಸಮ್ಮ, ಮುದ್ದುಮಕ್ಕಳು ಅಂಜಲಿ ಯಂಪಳ್ಳಿ, ಪ್ರಜ್ವಲ್, ಸಾನ್ವೀ, ವೈಷ್ಣವೀ,

ದಿನ ಭವಿಷ್ಯ

ರಾಹುಕಾಲ	ಸಾಯಂಕಾಲ	04:30 ರಿಂದ 06:00
ಗುಳಿಕ ಕಾಲ	ಮಧ್ಯಾಹ್ನ	03:00 ರಿಂದ 04:30
ಯಮಗಂಡ ಕಾಲ	ಮಧ್ಯಾಹ್ನ	12:00 ರಿಂದ 01:30

ಮೇಷ ನೀವು ಅವರನ್ನು ಸಂತೋಷಗೊಳಿಸಲು ಏನೇ ಮಾಡಿದರೂ ಕೂಡ. ಪ್ರಣಯ ಮತ್ತು ಸಾಮಾಜಿಕವಾಗಿ ಬೆರೆಯುವುದು ಬಾಕಿಯಿರುವ ಕೆಲಸಗಳ ಹೊರತಾಗಿಯೂ ನಿಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರುತ್ತವೆ.

ವೃಷಭ ಮೌಲ್ಯ ಹೆಚ್ಚಾಗುವ ವಸ್ತುಗಳನ್ನು ಖರೀದಿಸಲು ಪರಿಪೂರ್ಣ ದಿನ. ಪ್ರತಿಯೊಬ್ಬರೂ ಇಂದು ನಿಮ್ಮ ಸ್ನೇಹಿತರಾಗಯಸುತ್ತಾರೆ ಮತ್ತು ನಿಮಗೆ ಇದರಿಂದ ಸಂತೋಷವೆನಿಸುತ್ತದೆ.

ಮಿಥುನ ಚಂದ್ರನ ಸ್ಥಾನದಿಂದಾಗಿ, ಇಂದು ನಿಮ್ಮ ಹಣವನ್ನು ಅನಗತ್ಯ ಕೆಲಸಗಳಿಗೆ ಖರ್ಚು ಮಾಡಬಹುದು. ನೀವು ಹಣವನ್ನು ಸಂಗ್ರಹಿಸಲು ಬಯಸಿದರೆ ನಿಮ್ಮ ಸಂಗಾತಿಯೊಂದಿಗೆ ಅಥವಾ ಪೋಷಕರೊಂದಿಗೆ ಮಾತನಾಡಿ.

ಕರ್ಕಾಟಕ ಹೆಚ್ಚುವರಿ ಹಣ ಮಾಡಲು ಯೋಜಿಸುತ್ತದ್ದಲ್ಲಿ ಸುಭದ್ರ ಆರ್ಥಿಕ ಯೋಜನೆಗಳಲ್ಲಿ ಹೂಡಿಕೆ ಮಾಡಿ. ನೀವು ಕಾಳಜಿ ವಹಿಸುವ ಯಾರಾದರ ಜೊತೆಗಿನ ಸಂವಹನದ ಕೊರತೆ ನಿಮಗೆ ಖಿನ್ನತೆಯನ್ನು ಉಂಟುಮಾಡುತ್ತದೆ.

ಸಿಂಹ ನಿಮ್ಮ ತೂಕದ ಮೇಲೆ ಒಂದು ಕಣ್ಣಿಟ್ಟಿರಿ ಮತ್ತು ಅತಿಯಾಗಿ ತಿನ್ನಬೇಡಿ. ಇಂದು ಈ ರಾಶಿಚಕ್ರದ ಕೆಲವು ನಿರುದ್ಯೋಗಿಗಳಿಗೆ ಉದ್ಯೋಗ ಸಿಗಬಹುದು. ಇದು ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುತ್ತದೆ.

ಕನ್ಯಾ ನೀವು ಜೀವನವನ್ನು ಸಂತೋಷದಿಂದ ಅನುಭವಿಸಲು ಸಿದ್ಧವಾಗುತ್ತಿದ್ದ ಹಾಗೆ ನಿಮಗೆ ಸಂತೋಷ ಹಾಗೂ ಆನಂದ. ನಿಮ್ಮ ಯಾವುದೇ ಹಳೆಯ ಸ್ನೇಹಿತ ಇಂದು ವ್ಯಾಪಾರದಲ್ಲಿ ಲಾಭ ಗಳಿಸಲು ನಿಮಗೆ ಸಲಹೆ ನೀಡಬಹುದು.

ತುಲಾ ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ನಿಮ್ಮ ಹಳೆಯ ಯಾವುದೇ ರೋಗ ಇಂದು ನಿಮ್ಮನ್ನು ಕಾಡಬಹುದು. ಇದರ ಕಾರಣದಿಂದ ನೀವು ಆಸ್ಪತ್ರೆಗೂ ಹೋಗಬೇಕಾಗಬಹುದು.

ವೃಶ್ಚಿಕ ನಿಮ್ಮ ಅನುಮಾನದ ಪ್ರಕೃತಿ ನಿಮಗೆ ಸೋಲಿನ ಮುಖ ತೋರಿಸಬಹುದು. ತೀರಾ ಖರ್ಚು ಮಾಡುವ ಮತ್ತು ಮನರಂಜನೆಗೆ ತುಂಬಾ ಖರ್ಚ ಮಾಡುವ ನಿಮ್ಮ ಪ್ರವೃತ್ತಿಗೆ ಕಡಿವಾಣ ಹಾಕಿ.

ಧನಸ್ಸು ನಿಮ್ಮ ಸಹೋದರರು ನಿಮ್ಮ ಅಗತ್ಯಗಳಿಗೆ ಬೆಂಬಲ ನೀಡುತ್ತಾರೆ. ಇಂದು ನೈಸರ್ಗಿಕ ಸೌಂದರ್ಯದಿಂದ ವಿಸ್ಮಯಗೊಳ್ಳುವ ಸಾಧ್ಯತೆಯಿದೆ. ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ನಿಮ್ಮ ಸಾಮರ್ಥ್ಯ ನಿಮಗೆ ಗೌರವ ತರುತ್ತದೆ.

ಮಕರ ನಿಮ್ಮ ಸಂಗಾತಿಯ ಜೊತೆಗಿನ ಊಟ ನಿಮ್ಮನ್ನು ಒಂದು ಶಾಂತವಾದ ಮತ್ತು ಅದ್ಭುತ ಲಹರಿಯಲ್ಲಿರಿಸುವಂತೆ ತೋರುತ್ತದೆ. ಇಂದು ನೀವು ನಿಮ್ಮ ಸ್ನೇಹಿತನ ಅನುಪಸ್ಥಿತಿಯಲ್ಲಿ ಅವರ ಸುಗಂಧವನ್ನು ಅನುಭವಿಸುತ್ತೀರಿ.

ಕುಂಭ ಇಂದು ಧಾರ್ಮಿಕ ಮತ್ತು ಆಧ್ಯಾತ್ಮಿಕ ಆಸಕ್ತಿಗಳನ್ನು ಅನುಸರಿಸಲೂ ಒಂದು ಒಳ್ಳೆಯ ದಿನ. ನೀವು ಸ್ವಲ್ಪ ಹೆಚ್ಚುವರಿ ಹಣ ಮಾಡಲು ಯೋಜಿಸುತ್ತದ್ದಲ್ಲಿ ಸುಭದ್ರ ಆರ್ಥಿಕ ಯೋಜನೆಗಳಲ್ಲಿ ಹೂಡಿಕೆ ಮಾಡಿ.

ಮೀನ ನೀವು ಪರಿಸ್ಥಿತಿಯ ನಿಯಂತ್ರಣ ಹೊಂದುತ್ತಿದ್ದಂತೆ ನಿಮ್ಮ ಆತಂಕ ಕಣ್ಮರೆಯಾಗುತ್ತದೆ. ಇದು ಧೈರ್ಯದ ಮೊದಲ ಸ್ಪರ್ಶದಲ್ಲಿ ಕುಸಿದುಹೋಗುವ ಸಾಬೂನಿನ ಗುಳ್ಳೆಯಷ್ಟೇ ಗಟ್ಟಿಯೆಂದು ನೀವು ಅರ್ಥ ಮಾಡಿಕೊಳ್ಳುತ್ತೀರಿ.

47 ಸಾವಿರ ರೂ.ಮೌಲ್ಯದ ಆಹಾರ ಧಾನ್ಯ ಕಳವು

• ಉದಯವಾಹಿನಿ ಕಲಬುರಗಿ

ತಾಲ್ಲೂಕಿನ ಖಣದಾಳ ಸೀಮಾಂತರದಲ್ಲಿರುವ ಜಮೀನಿನಲ್ಲಿರುವ ಮನೆಯೊಂದರ ಬೀಗ ಮುರಿದು 47,500 ರೂ.ಮೌಲ್ಯದ ಆಹಾರ ಧಾನ್ಯ ಕಳವು ಮಾಡಿರುವ ಘಟನೆ ನಡೆದಿದೆ. ತುಕಾರಾಮ ಚವ್ಹಾಣ್ ಎಂಬುವವರ ಜಮೀನಿನಲ್ಲಿರುವ ಮನೆಯ ಬೀಗ ಮುರಿದು 25 ಸಾವಿರ ರೂ.ಮೌಲ್ಯದ 5 ಚೀಲ ಬಿಳಿ ಜೋಳ, 20 ಸಾವಿರ ರೂ.ಮೌಲ್ಯದ 4 ಚೀಲ ಗೋಧಿ,2500 ರೂ.ಮೌಲ್ಯದ 25 ಕೆಜಿ ಸಕ್ಕರೆ ಸೇರಿ 47500 ರೂ.ಮೌಲ್ಯದ ಆಹಾರ ಧಾನ್ಯ ಕಳವು ಮಾಡಲಾಗಿದೆ.

ಬಿಳಿ ಜೋಳ, ಗೋಧಿ ರಾಶಿ ಮಾಡಿ ಹೊಲದಲ್ಲಿರುವ ಮನೆಯಲ್ಲಿ ಇಡಲಾಗಿತ್ತು ಎಂದು ತಿಳಿದುಬಂದಿದೆ. ಈ ಸಂಬಂಧ ತುಕಾರಾಮ ಚವ್ಹಾಣ್ ಅವರು ಫರಹತಾಬಾದ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.

ಕೈವಾರ ತಾತಯ್ಯ ಜಯಂತಿ ಆಚರಣೆ

• ಉದಯವಾಹಿನಿ ನವಲಗುಂದ

ಕೈವಾರ ತಾತಯ್ಯನವರು ಸಮಾಜ ಸುಧಾರಕರಾಗಿದ್ದು, ಅವರು ತೋರಿದ ಮಾರ್ಗದಲ್ಲಿ ಪ್ರತಿಯೊಬ್ಬರೂ ಸಾಗಬೇಕಿದೆ. ಅವರು ರಚಿಸಿದ ಕಾಲಜ್ಞಾನದಲ್ಲಿ ಜಗತ್ತು ಅರಿಯಬೇಕಾದ ಅನೇಕ ಅಂಶಗಳಿವೆ. ಅವರ ತತ್ವ, ತೋರಿದ ಮಾರ್ಗದರ್ಶನ ಪಾಲಿಸಿದರೆ ಎಲ್ಲೆಡೆ ಶಾಂತಿ ನೆಲೆಸುವುದರಲ್ಲಿ ಸಂಶಯವಿಲ್ಲ ಎಂದು ತಹಶೀಲ್ದಾರ ಸುಧೀರ ಸಾಹುಕಾರ ಹೇಳಿದರು.

ಉದಯವಾಹಿನಿ ಚಿತ್ರ

ತಹಶೀಲ್ದಾರ ಕಚೇರಿ ಸಭಾಂಗಣದಲ್ಲಿ ತಾಲ್ಲೂಕಾ ಆಡಳಿತದಿಂದ ಶ್ರೀ ಯೋಗಿ ನಾರೇಯಣ ಯತೀಂದ್ರ ಜಯಂತಿ ಅಂಗವಾಗಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು ಎಲ್ಲರು ಕೈವಾರ ತಾತಯ್ಯನವರ ಸನ್ಮಾರ್ಗದಲ್ಲಿ ಸಾಗಬೇಕು' ಎಂದರು.

• ಉದಯವಾಹಿನಿ ಅರಸೀಕೆರೆ

ಅಭಿವೃದ್ಧಿಯಿಂದ ವಾರ್ಡ್‌ಗಳ ಸೌಂದರ್ಯ ಹೆಚ್ಚಾಗುವ ಜೊತೆಗೆ ಆರೋಗ್ಯಕರ ವಾತಾವರಣ ನಿರ್ಮಾಣವಾಗುತ್ತದೆ

ಉದ್ಯಾನವನ ಅಭಿವೃದ್ಧಿಗೆ ನಗರಸಭೆ ಅಧ್ಯಕ್ಷ ಎಂ ಸಮಿವುಲ್ಲಾ ಚಾಲನೆ

ಅರಸೀಕೆರೆ ಉದ್ಯಾನವನಗಳ ಅಭಿವೃದ್ಧಿಯಿಂದ ವಾರ್ಡ್‌ಗಳ ಸೌಂದರ್ಯ ಹೆಚ್ಚಾಗುವ ಜೊತೆಗೆ ಆರೋಗ್ಯಕರ ವಾತಾವರಣ ನಿರ್ಮಾಣವಾಗುತ್ತದೆ ಎಂದು ನಗರಸಭೆ ಅಧ್ಯಕ್ಷ ಎಂ ಸಮಿವುಲ್ಲಾ ಚಾಲನೆ ನೀಡಿ ಮಾತನಾಡಿ ಕೇಂದ್ರ ಸರ್ಕಾರದ ಪ್ರಸ್ತುತ ಅಮೃತ ಮಿತ್ರ ಯೋಜನೆ 2.0 ಎಂಬ ಯೋಜನೆಯಲ್ಲಿ ಸುಮಾರು 10 ಲಕ್ಷ ರೂಪಾಯಿಗಳು ನೀಡ ಲಾಗಿದ್ದು ಇದರ ಉದ್ದೇಶ ನಗರ ಪ್ರದೇಶಗಳಲ್ಲಿ ಉದ್ಯಾನಗಳನ್ನು ಅಭಿವೃದ್ಧಿಪಡಿಸುವುದು ಅದರಿಂದ ನಮ್ಮ ನಗರಸಭೆ ವತಿಯಿಂದ ಮಹಿಳೆಯರ ಎರಡು ಸ್ತ್ರೀ ಶಕ್ತಿ ಸಂಘಗಳನ್ನು ಗುರುತಿಸಿ ಮಾರುತಿ ನಗರ ಪ್ರದೇಶದ ಪಂಚಮುಖಿಗಳ ಗಣಪತಿ ಉದ್ಯಾನವನ ಹಾಗೂ ಸುಭಾಷ್ ನಗರದ ಕೆಂಗಲ್ ಸ್ವಾಮಿ ದೇವಸ್ಥಾನ ಉದ್ಯಾನವನ ಅವರಿಗೆ ಅಭಿವೃದ್ಧಿ ಮಾಡೋದಕ್ಕೆ ನೀಡಲಾಗಿದ್ದು ಇದು ಒಂದು ವರ್ಷದ ಅವಧಿಯಾಗಿದ್ದು ಇದರಲ್ಲಿ ಒಂದು ಉದ್ಯಾನವನ ಅಭಿವೃದ್ಧಿಗೆ 5 ಲಕ್ಷ ರೂಪಾಯಿಗಳು ನೀಡಲಾಗುವುದು ಇದರಲ್ಲಿ 3,75,000 ಗಳು ವೇತನವಾಗಿ ಪಡೆದುಕೊಂಡು ಉಳಿದ ರೂ. 1,25,000 ರೂಪಾಯಿಗಳಲ್ಲಿ ಇದಕ್ಕೆ ಬೇಕಾಗುವ ಸಾಮಗ್ರಿಗಳನ್ನು ತೆಗೆದುಕೊಂಡು ಅಭಿವೃದ್ಧಿ ಮಾಡುವಂತೆ ತಿಳಿಸಿ ಇದರ ಜೊತೆಗೆ ಸಾರ್ವಜನಿಕರು ಸ್ವಚ್ಛತೆ ಕಾಪಾಡಿಕೊಳ್ಳಬೇಕು ಇದರಿಂದ ಆರೋಗ್ಯಕರ ವಾತಾವರಣ ನಿರ್ಮಾ ಣವಾಗುತ್ತದೆ ಎಂದು ತಿಳಿಸಿದರು

ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ನಗರಸಭೆ ಆಯುಕ್ತರಾದ ಕೃಷ್ಣಮೂರ್ತಿ ಪರಿಸರ ಅಭಿಯಂತರು ರವಿಕುಮಾರ್ ಇಂಜಿನಿಯರ್ ಸುನಿಲ್, ಸಂಘಟನಾ ಅಧಿಕಾರಿ ರಾಜಶೇಖರ್,, ಆರೋಗ್ಯ ಅಧಿಕಾರಿ ಲಿಂಗರಾಜು, ನಗರ ಸಭೆ ಸದಸ್ಯ ರಾಜಶೇಖರ್,, ದರ್ಶನ,, ಮುಖಂಡರಾದ ವಿಭು,, ಮಾರುತಿ,, ಸ್ತ್ರೀ ಸಂಘದ ಮಹಿಳೆಯರು ಉಪಸ್ಥಿತರಿದ್ದರು.

ಅಮೃತಕೇಂದ್ರ ಪುರಸ್ಕೃತ ಯೋಜನೆ 2.0 ಉದ್ದೇಶದಲ್ಲಿ ನಗರ ಪ್ರದೇಶಗಳಲ್ಲಿರುವ ಉದ್ಯಾನವನಗಳ ಸೌಂದರ್ಯೀಕರಣ ವಾರ್ಷಿಕ ನಿರ್ವಹಣೆ ಯೋಜನೆ ಅಡಿಯಲ್ಲಿ ಅರಸೀಕೆರೆ ನಗರದ ಕೆಂಗಲ್ ಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿರುವ ಉದ್ಯಾನವನ ಮತ್ತು ಮಾರುತಿ ನಗರದಲ್ಲಿರುವ ಶ್ರೀ ಪಂಚಮುಖಿ ಆಂಜನೇಯ ಸ್ವಾಮಿ ದೇವಾಲಯದ ಆವರಣದಲ್ಲಿರುವ ಉದ್ಯಾನವನ ವಾರ್ಷಿಕ ನಿರ್ವಹಣೆಗಾಗಿ ಎರಡು ಮಹಿಳಾ ಸ್ವಸಹಾಯ ಗುಂಪುಗಳನ್ನು ಆಯ್ಕೆ ಮಾಡಿದ್ದು ಈ ಗುಂಪುಗಳಿಗೆ ಸರ್ಕಾರದಿಂದ 10 ಲಕ್ಷ ರೂಗಳು ಮಂಜುರಾಗಿದ್ದು ಇದರಿಂದ ಮಹಿಳೆಯರು ಸಹ ತಮ್ಮ ಸ್ವ ಸಹಾಯ ಗುಂಪುಗಳ ಮುಖಾಂತರ ಸರ್ಕಾರದ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಬಹುದಾಗಿದ್ದು ಪ್ರಪ್ರಥಮವಾಗಿ ನಗರದಲ್ಲಿ ಇಂದು ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ -ಎಮ್ ಶಮಿವುಲ್ಲಾ, ನಗರಸಭೆ ಅಧ್ಯಕ್ಷ

ಸರ್ಕಾರಿ ಸೇವೆಗಳಿಗೆ ಜನಸಾಮಾನರನ್ನು ಅಲೆದಾಡಿಸದಿರಲು ಅಧಿಕಾರಿಗಳಿಗೆ ಸಲಹೆ

ಸ್ಥಳೀಯ ಸಂಸ್ಥೆಗಳು ಜನಸ್ನೇಹಿ ಕಚೇರಿಗಳಾಗಿರಬೇಕು

• ಉದಯವಾಹಿನಿ ಹೊಸಪೇಟೆ

ಸರ್ಕಾರಿ ಸೇವೆಗಳಿಗೆ ಜನಸಾಮಾನ್ಯರನ್ನು ಅಲೆದಾಡಿಸಬೇಡಿ ತ್ವರಿತ ಸೇವೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಉಪಲೋಕಾಯುಕ್ತ ಬಿ.ವೀರಪ್ಪ ಹೇಳಿದರು.

ಹೊಸಪೇಟೆ ನಗರಸಭೆ ಕಚೇರಿಗೆ ಅವರು ಭೇಟಿ ನೀಡಿ ಬಳಿಕ ಅವರು ಮಾತನಾಡಿದರು. ಸರ್ಕಾರಿ ಸೇವೆಗಳ ಪಡೆಯಲು ಜನ ಸಾಮಾನ್ಯರು ರೋಸಿಹೋಗಿ ಸರ್ಕಾರದ ಅನೇಕ ಯೋಜನೆಗಳನ್ನು ಬಳಸಿಕೊಳ್ಳುವಲ್ಲಿ ನಿರಾಸಕ್ತಿ ವಹಿಸಿದ್ದಾರೆ.

ಸರ್ಕಾರಗಳಿಂದ ಅನೇಕ ಯೋಜನೆಗಳನ್ನು ರೂಪಿಸಿದರೂ ಅರ್ಹ ಫಲಾನುಭವಿಗಳಿಗೆ ತಲುಪುವಲ್ಲಿ ವಿಫಲವಾಗಿದೆ. ಬಹುತೇಕ ಯೋಜನೆಗಳ ಅರ್ಹಫಲಾನುಭವಿಗಳು ಅಸಹಾಯಕರಾಗಿರುತ್ತಾರೆ. ಇನ್ನೂ ಸರ್ಕಾರಿ ಕಚೇರಿಗಳಲ್ಲಿ ಒಂದೊಂದು ನಮೂನೆಗಳನ್ನು ಪಡೆಯಲು ಅಲೆದು ಸುಸ್ತಾಗಿ ಈ ಕಚೇರಿ ಸಹವಾಸವೇ ಬೇಡವೆಂದು ನಿರಾಸಕ್ತಿ ಮೂಡುತ್ತದೆ. ಹಾಗಾಗೀ ಸ್ಥಳೀಯ ಸಂಸ್ಥೆಗಳು ಜನಸ್ನೇಹಿ ಕಚೇರಿಗಳಾಗಿರಬೇಕು. ಜನರ ಬೇಡಿಕೆಗಳಿಗೆ ಸ್ಪಂದಿಸುವಂತಿರಬೇಕು ಎಂದರು.

ಸ್ಲಂ ಬೋರ್ಡ್ ಕಚೇರಿ ಭೇಟಿ : ನಗರಸಭೆ ಆವರಣದಲ್ಲಿರುವ ಸ್ಲಂಬೋರ್ಡ್ ಕಚೇರಿಗೆ ಭೇಟಿ ನೀಡಿದ ಅವರು ಅಲ್ಲಿನ ಸಿಬ್ಬಂದಿಗಳಿಗಿರುವ ಮಾಹಿತಿ ಕೊರತೆ ಕಂಡು ಕಿಡಿಕಾರಿದರು.

ಉದಯವಾಹಿನಿ ಚಿತ್ರ

ಹೊರಗುತ್ತಿಗೆ ಸಿಬ್ಬಂದಿಗಳಾದ ಡಾಟಾ ಎಂಟ್ರಿ ಆಪರೇಟರ್ ಮತ್ತು ಸೆಕ್ಷನ್ ಆಫೀಸರ್ ಇಬ್ಬರು ಸಿಬ್ಬಂದಿಗಳ ನೇಮಕಾತಿ ಆದೇಶ ಪತ್ರ ಕೇಳಿದರು ದಾಖಲೆ ನೀಡಲು ಎಇಇ ತಿಮ್ಮಣ್ಣ ತಡವರಿಸಿದರು. ಕನಿಷ್ಟ ಹಾಜರಾತಿ ಪುಸ್ತಕ, ದಿನವಹಿ ಮತ್ತು ಚಲನವಲನ ಪುಸ್ತಕ ನಿರ್ವಹಣೆ ಮಾಡದಿರುವುದನ್ನು ಕಂಡು ಸರ್ಕಾರಿ ಕೆಲಸ ಮಾಡೋಕೆ ಬಂದಿದ್ದೀರೋ ಯಾವುದಾದರೂ ಏಜೆನ್ಸಿ ಕೆಲಸ ಮಾಡುತ್ತಿದ್ದಿರೋ, ನಿಮಗೆ ಯಾರು ಸಂಬಳ ಕೊಡುತ್ತಾರೆ. ಕಚೇರಿಯಲ್ಲಿನ ದಾಖಲೆಗಳ ನಿರ್ವಹಣೆ ಜ್ಞಾನ ಇಲ್ಲದಿದ್ದರೇ ಹೇಗೆ ಎಂದು ತರಾಟೆ ತೆಗೆದುಕೊಂಡರು. ಕೂಡಲೇ ವಿಜಯನಗರ ಜಿಲ್ಲೆಯಲ್ಲಿ ಕೊಳಗೇರಿ ಅಭಿವೃದ್ಧಿ ಮಂಡಳಿ ಕಚೇರಿ ಆದಾಗಿನಿಂದ ಇಲ್ಲಿಯವರೆಗೆ ಸ್ಲಂಜನಗಳಿಗೆ ಎಷ್ಟು ಹಕ್ಕು ಪತ್ರ ನೀಡಿದ್ದೀರಿ? ಎಷ್ಟು ಜನಕ್ಕೆ ನೋಂದಾವಣೆ ಮಾಡಿಸಿದ್ದೀರಿ? ಎಷ್ಟು ಜನಕ್ಕೆ ನಗರಸಭೆಯಿಂದ ನಮೂನೆ 3 ನೀಡಿದ್ದೀರಿ ವರದಿ ನೀಡಬೇಕು ಇಲ್ಲವಾದರೇ ಪ್ರಕರಣ ದಾಖಲಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ನಗರಸಭೆ ಕಚೇರಿ ಭೇಟಿ

ನಗರಸಭೆಯ ಆರೋಗ್ಯ ವಿಭಾಗ, ಆಡಳಿತ ವಿಭಾಗ, ಅಭಿಯಂತರರ ವಿಭಾಗಗಳಲ್ಲಿ ದಾಖಲೆ ಪರಿಶೀಲನೆ ನಡೆಸಲಾಯಿತು. ಪರಿಸರ ಅಭಿಯಂತರ ಜಿ.ಆರತಿರಿಗೆ ನಗರದಲ್ಲಿ ಅನೇಕ ವ್ಯಾಪಾರಸ್ಥರಿಗೆ ಟ್ರೇಡ್ ಲೈಸನ್ಸ್ ನೀಡದಿರುವ ಬಗ್ಗೆ ಮಾಹಿತಿ ಪಡೆದರು. ರಸ್ತೆ ಬದಿಯಲ್ಲಿ ಚರಂಡಿಗಳ ಮೇಲೆ ಹೋಟೆಲ್‌ಗಳನ್ನು ತೆರೆದಿದ್ದಾರೆ. ಹೋಟೆಲ್ ತಾಜ್ಯವನ್ನು ಅದೇ ಚರಂಡಿಯಲ್ಲಿ ಬಿಸಾಡುತ್ತಾರೆ. ಇದನ್ನು ಇಂದೇ ಸ್ಥಳ ಪರಿಶೀಲಿಸಿ ಜಾಗೃತಿ ಮೂಡಿಸಿ ಇಲ್ಲದಿದ್ದರೇ ಅಮಾನತುಗೊಳಿಸಲು ಕ್ರಮವಹಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ನಗರಸಭೆ ಎಲ್ಲಾ ವಾಹನಗಳ ವಿಮೆ ಮತ್ತು ಅರ್ಹತಾ ಪ್ರಮಾಣ ಪತ್ರಗಳನ್ನು ಪರಿಶೀಲಿಸಲಾಯಿತು. ಅದರಲ್ಲಿ ಬಹುತೇಕ ವಾಹನಗಳ ಅರ್ಹತಾ ಪ್ರಮಾಣ ಪತ್ರ ಇಲ್ಲದಿರುವುದು ಕಂಡು ಆಶ್ಚರ್ಯಗೊಂಡರು. ಸರ್ಕಾರಿ ವಾಹನಗಳೆಂದು ವಿನಾಯಿತಿ ಇದೆಯೇನ್ರಿ ಅರ್ಹತಾವಿಲ್ಲದೇ ವಾಹನಗಳಿಗೆ ಅದ್ಹೇಗೆ ವಿಮೆ ಪಾವತಿಸಿದಿರಿ ಎಂದು ನಗರಸಭೆ ಆಯುಕ್ತ ಮನೋಹರರಿಗೆ ಪ್ರಶ್ನಿಸಿದರು. ಪ್ರತಿಕ್ರಿಯಿಸಿದ ಆಯುಕ್ತರು ಮಾಹಿತಿ ತಪ್ಪಾಗಿರಬಹುದು ಇನ್ನೋಮ್ಮೆ ಪರಿಶೀಲಿಸುವೆ ಅರ್ಹತಾ ಪ್ರಮಾಣ ಪತ್ರ ಇರಬೇಕು ಎಂದು ಸಮರ್ಥಿಸಿಕೊಂಡರು. ಆರ್‌ಟಿಓ ಅಧಿಕಾರಿಗಳಿಗೆ ಪರಿಶೀಲಿಸಲು ಕ್ರಮವಹಿಸಲಾಗುವುದು ತಪ್ಪು ಕಂಡರೇ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಅಂಗನವಾಡಿ ಸಹಾಯಕ ಕಾರ್ಯಕರ್ತರಿಗೆ ಯೋಗ ತರಬೇತಿ

ಉದಯವಾಹಿನಿ ಚಿತ್ರ

• ಉದಯವಾಹಿನಿ ಚಿತ್ರದುರ್ಗ

ಅಂಗನವಾಡಿ ಕಾರ್ಯಕರ್ತರು ಯೋಗವನ್ನು ಕಲಿಯುವುದು ಮತ್ತು ಅದನ್ನು ಮಕ್ಕಳಿಗೆ ಕಲಿಸುವುದು ಬಹಳ ಮುಖ್ಯ. ಅಂಗನವಾಡಿ ಕಾರ್ಯಕರ್ತರು ಯೋಗವನ್ನು ಕಲಿತರೆ, ಅವರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಇದು ಅವರಿಗೆ ದೈಹಿಕ ಮತ್ತು ಮಾನಸಿಕ ಶಕ್ತಿಯನ್ನು ನೀಡುತ್ತದೆ, ಇದರಿಂದ ಅವರು ಮಕ್ಕಳಿಗೆ ಉತ್ತಮವಾಗಿ ಸೇವೆ ಸಲ್ಲಿಸಬಹುದು ಎಂದು ಭರಮಸಾಗರ ಶಿಶು ಅಭಿವೃದ್ಧಿ ಯೋಜನಾ ಘಟಕದ ಅಂಗನವಾಡಿ ಕಾರ್ಯಕರ್ತೆಯರ ಮೇಲ್ವಿಚಾರಕಿ ಶ್ರೀಮತಿ ವಿನೋದಮ್ಮ ಆರ್. ಅಭಿಪ್ರಾಯ ಪಟ್ಟಿದ್ದಾರೆ.

ಚಿತ್ರದುರ್ಗ ತಾಲ್ಲೂಕು ಹಿರೇಗುಂಟನೂರು ಗ್ರಾಮದಲ್ಲಿ ನಡೆದ ಅಂಗನವಾಡಿ ಸಹಾಯಕ ಕಾರ್ಯಕರ್ತೆಯರ ಸಭೆ ಮತ್ತು ಯೋಗ ತರಬೇತಿ ಕುರಿತು ಅವರು ಮಾತನಾಡುತ್ತಾ ಮಕ್ಕಳು ಮತ್ತು ಅಂಗನವಾಡಿ ಕಾರ್ಯಕರ್ತೆಯರ ನಡುವೆ ಯೋಗವು ಭಾವನಾತ್ಮಕ ಬೆಳವಣಿಗೆಗೆ ಸಹಾಯ ಮಾಡುತ್ತದೆ. ಇದು ಅವರಿಗೆ ಶಾಂತ ಮತ್ತು ಸಂಯಮದಿಂದ ಇರಲು ಕಲಿಸುತ್ತದೆ ಮತ್ತು ಇತರರೊಂದಿಗೆ ಉತ್ತಮವಾಗಿ ಬೆರೆಯಲು ಸಹಾಯ ಮಾಡುತ್ತದೆ ತಿಳಿಸಿದರು. ಇದೇ ಸಭೆಯಲ್ಲಿ ಹಿರೇಗುಂಟನೂರು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಯೋಗ ತರಬೇತುದಾರ ರವಿ ಕೆ.ಅಂಬೇಕರ್ ಅಂಗನವಾಡಿ ಸಹಾಯಕಿಯರಿಗೆ ಪ್ರಮುಖ ಯೋಗ ಪ್ರಕಾರಗಳನ್ನು ಅಭ್ಯಾಸ ಮಾಡಿಸಿದರು. ಸಭೆಯಲ್ಲಿ ಭರಮಸಾಗರ ಕಾರ್ಯವ್ಯಾಪ್ತಿಯ 50ಕ್ಕೂ ಹೆಚ್ಚು ಮಹಿಳೆಯರು ಯೋಗ ತರಬೇತಿ ಪಡೆದರು.

ಡಿ ಎನ್ ಅಕ್ಕಿಯವರ ಉಪನ್ಯಾಸ ಹಾಗೂ ಅಭಾಸಾಪ ಪದಾಧಿಕಾರಿಗಳ ಪುಸ್ತಕ ಬಿಡುಗಡೆ

• ಉದಯವಾಹಿನಿ ವಿಜಯಪುರ



ನಗರದ ಉಪಲಿ ಬುರ್ಜ್ ಸಮೀಪವಿರುವ ಬಿಡಿಇ ಸೂಸೈಟಿಯ ಸಭಾಭವನದಲ್ಲಿ ಬೆಳಿಗ್ಗೆ 10.30 ಕ್ಕೆ ಉಪನ್ಯಾಸ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮ ಜರುಗಲಿದೆ. ಅಖಿಲ ಭಾರತೀಯ ಸಾಹಿತ್ಯ ಪರಿಷದ್(ರಿ) ವಿಜಯಪುರ ಆಯೋಜನೆಯ ಈ ಕಾರ್ಯಕ್ರಮದಲ್ಲಿ 'ರಾಜ್ಯೋತ್ಸವ ಪ್ರಶಸ್ತಿ' ಪುರಸ್ಕೃತ ಸಂಶೋಧಕರು , ಇತಿಹಾಸಕಾರರು , ಸಾಹಿತಿಗಳಾದ ಡಿ ಎನ್ ಅಕ್ಕಿ' ಅವರ ಉಪನ್ಯಾಸವನ್ನು ಏರ್ಪಸಿಡಲಾಗಿದೆ. ಇದೇ ಸಂದರ್ಭದಲ್ಲಿ ಸಾಹಿತಿಗಳು, ಅಭಾಸಾಪ ಜಿಲ್ಲಾಧ್ಯಕ್ಷರಾದ ನಾರಾಯಣ ಬಾಬಾನಗರ ಅವರ 'ಕಾಖಂಡಕಿ ಶ್ರೀ ಮಹಿಪತಿ ದಾಸರ ಮುಂಡಿ

ನಾಲ್ಕನೇ ತ್ರೈಮಾಸಿಕದಲ್ಲಿ ಭಾರತ-ಚೀನಾ ವ್ಯಾಪಾರ ವೃದ್ಧಿ

ವಿಶ್ವಸಂಸ್ಥೆ: ಅಭಿವೃದ್ಧಿಶೀಲ ರಾಷ್ಟ್ರಗಳು, ವಿಶೇಷವಾಗಿ ಭಾರತ, ಚೀನಾ 2024 ರ ನಾಲ್ಕನೇ ತ್ರೈಮಾಸಿಕದಲ್ಲಿ ಸರಾಸರಿಗಿಂತ ಉತ್ತಮ ವ್ಯಾಪಾರ ವಿಸ್ತರಣೆಯನ್ನು ಕಂಡಿವೆ ಎಂದು ವಿಶ್ವಸಂಸ್ಥೆಯ ವರದಿಯೊಂದು ಹೇಳಿದೆ. ಆದರೆ ಮುಂಬರುವ ತ್ರೈಮಾಸಿಕಗಳಲ್ಲಿ ಜಾಗತಿಕವಾಗಿ ಆರ್ಥಿಕ ಕುಸಿತದ ಸಾಧ್ಯತೆಯ ಬಗ್ಗೆಯೂ ವರದಿ ಎಚ್ಚರಿಸಿದೆ.

ಮಾರ್ಚ್ ಆರಂಭದವರೆಗಿನ ದತ್ತಾಂಶವನ್ನು ಒಳಗೊಂಡ ಯುಎನ್ ಟ್ರೇಡ್ ಅಂಡ್ ಡೆವಲಪ್ಮೆಂಟ್‌ನ ಇತ್ತೀಚಿನ ಜಾಗತಿಕ ವ್ಯಾಪಾರ ನವೀಕರಣವು 2024 ರಲ್ಲಿ ಜಾಗತಿಕ ವ್ಯಾಪಾರವು ಸುಮಾರು 1.2 ಟ್ರಿಲಿಯನ್ ಯುಎಸ್‌ಡಿಗೆ ವಿಸ್ತರಿಸಿದೆ, 33 ಟ್ರಿಲಿಯನ್ ಡಾಲರ್ ತಲುಪಿದೆ ಇದು ಸೇವೆಗಳ ವ್ಯಾಪಾರದಲ್ಲಿ ಶೇ. 9 ರಷ್ಟು ಏರಿಕೆ ಮತ್ತು ಸರಕು ವ್ಯಾಪಾರದಲ್ಲಿ ಶೇ. 2 ರಷ್ಟು ಹೆಚ್ಚಳದ ಪರಿಣಾಮವಾಗಿದೆ.

ಅಭಿವೃದ್ಧಿಶೀಲ ರಾಷ್ಟ್ರಗಳು, ವಿಶೇಷವಾಗಿ ಚೀನಾ, ಭಾರತವು ಸರಾಸರಿ ವ್ಯಾಪಾರ ವಿಸ್ತರಣೆಗಿಂತ ಉತ್ತಮವಾಗಿ ಕಂಡರೆ, ಅನೇಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ವ್ಯಾಪಾರ ಸಂಕೋಚನಗಳನ್ನು ಅನುಭವಿಸಿವೆ ಎಂದು ಅದು ಹೇಳಿದೆ. ಚೀನಾ ಮತ್ತು ಭಾರತ 2024 ರ ನಾಲ್ಕನೇ ತ್ರೈಮಾಸಿಕದಲ್ಲಿ ಬಲವಾದ ವ್ಯಾಪಾರ ವೇಗವನ್ನು ಕಂಡರೆ, ಯುಎಸ್ ಪ್ರಮುಖ ಚಾಲಕರಾಗಿ ಉಳಿದಿದೆ ಎಂದು ಅದು ಹೇಳಿದೆ.

ಸರಕು ವ್ಯಾಪಾರವು 2024 ರ ನಾಲ್ಕನೇ ತ್ರೈಮಾಸಿಕದಲ್ಲಿ ಪ್ರಮುಖ ಆರ್ಥಿಕತೆಗಳಲ್ಲಿ ಮಿಶ್ರ ಪ್ರವೃತ್ತಿಗಳನ್ನು ತೋರಿಸಿದೆ. ಚೀನಾ ಮತ್ತು ಭಾರತದ ವ್ಯಾಪಾರವು ವಿಶೇಷವಾಗಿ ರಫ್ತುಗಳಲ್ಲಿ ಹೆಚ್ಚುತ್ತಲೇ ಹೋಯಿತು. ಇದಕ್ಕೆ ವ್ಯತಿರಿಕ್ತವಾಗಿ, ದಕ್ಷಿಣ ಕೊರಿಯಾದಲ್ಲಿ ರಫ್ತು ಬೆಳವಣಿಗೆ ಕುಸಿಯುತ್ತಿದೆ ಎನ್ನುವುದನ್ನು ವರದಿ ಉಲ್ಲೇಖಿಸಿದೆ.

ಚೀನಾ ಮಕ್ಕಳಿಗೆ ನಿರ್ಬಂಧ ವಿಧಿಸುವ ಮಸೂದೆ ಮಂಡನೆ

ವಾಷಿಂಗ್ಟನ್: ಅಮೆರಿಕದ ಶಾಲೆಗಳಲ್ಲಿ ಚೀನಾದ ವಿದ್ಯಾರ್ಥಿಗಳು ಅಧ್ಯಯನ ಮಾಡುವುದನ್ನು ತಡೆಯುವ ಮಸೂದೆಯನ್ನು ಹೌಸ್ ರಿಪಬ್ಲಿಕನ್ನರ ಗುಂಪೊಂದು ಮಂಡಿಸಿದೆ. ವಿನಿಮಯ ಸಂದರ್ಶಕರ ಕಾರ್ಯಕ್ರಮಗಳಲ್ಲಿ ಅಧ್ಯಯನ ಮಾಡಲು ಅಥವಾ ಭಾಗವಹಿಸಲು ವಿದೇಶಿಯರಿಗೆ ಅಮೆರಿಕಕ್ಕೆ ಪ್ರಯಾಣಿಸಲು ಅನುವು ಮಾಡಿಕೊಡುವ ವೀಸಾಗಳನ್ನು ಸ್ವೀಕರಿಸುವುದನ್ನು ನಿರ್ಬಂಧಿಸುವ ಮಸೂದೆಯನ್ನು ರಿಲೆ ಮೂರ್ ಮಂಡಿಸಿದರು. ಇತರ ಐದು ರಿಪಬ್ಲಿಕನ್ನರು ಈ ಕ್ರಮವನ್ನು ಸಹ-ಪ್ರಾಯೋಜಿಸಿದರು.

ನಾವು ಸ್ಪಿಗೊಟ್ ಅನ್ನು ಆಫ್ ಮಾಡುವ ಸಮಯ ಬಂದಿದೆ ಮತ್ತು ಚೀನಾದ ಪ್ರಜೆಗಳಿಗೆ ಹೋಗುವ ಎಲ್ಲಾ ವಿದ್ಯಾರ್ಥಿ ವೀಸಾಗಳನ್ನು ತಕ್ಷಣ ನಿಷೇಧಿಸುತ್ತೇವೆ. ಈ ಕ್ರಮವು ಅಂಗೀಕಾರಗೊಳ್ಳುವ ಸಾಧ್ಯತೆಯಿಲ್ಲ, ಮತ್ತು ಚೀನಾದ ವಿದ್ಯಾರ್ಥಿಗಳ ವಿರುದ್ಧ ಪ್ರತಿಕೂಲ ನೀತಿಗಳು ಮತ್ತು ವಾಕ್ಚಾತುರ್ಯವು ಯುಎಸ್ ಹಿತಾಸಕ್ತಿಗಳಿಗೆ ಧಕ್ಕೆ ತರಬಹುದು ಎಂಬ ಕಳವಳಗಳ ಬಗ್ಗೆ ಇದು ಸಂಸ್ಥೆಗಳು ಮತ್ತು ವಿದ್ವಾಂಸರಿಂದ ಟೀಕೆಗೆ ಗುರಿಯಾಗಿದೆ.

ಚೀನಾದ ಪ್ರಜೆಗಳಿಗೆ ಅಂತಹ ವೀಸಾಗಳನ್ನು ನೀಡುವ ಮೂಲಕ, ಯುಎಸ್ ಚೀನಾದ ಕಮ್ಯುನಿಸ್ಟ್ ಪಕ್ಷವನ್ನು ನಮ್ಮ ಮಿಲಿಟರಿಯ ಮೇಲೆ ಬೇಹುಗಾರಿಕೆ ಮಾಡಲು, ನಮ್ಮ ಬೌದ್ಧಿಕ ಆಸ್ತಿಯನ್ನು ಕದಿಯಲು ಮತ್ತು ರಾಷ್ಟ್ರೀಯ ಭದ್ರತೆಗೆ ಬೆದರಿಕೆ ಹಾಕಲು ಆಹ್ವಾನಿಸಿದೆ ಎಂದು ಮೂರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನೀವ್ಯಾಕೆ ನಿಮ್ಮ ತಮಿಳು ಸಿನಿಮಾಗಳನ್ನು ಹಿಂದಿಗೆ ಡಬ್ ಮಾಡ್ತೀರಿ – ತಮಿಳುನಾಡು ಮುಖ್ಯಮಂತ್ರಿಗೆ ಪವನ್ ಕಲ್ಯಾಣ್ ಪ್ರಶ್ನೆ

ತಮಿಳುನಾಡಿನ ದ್ವಿಭಾಷಾ ಸೂತ್ರಕ್ಕೆ ಆಂಧ್ರಪ್ರದೇಶದ ಡಿಸಿಎಂ ವಿರೋಧ

ನವದೆಹಲಿ: ನೀವ್ಯಾಕೆ ನಿಮ್ಮ ತಮಿಳು ಸಿನಿಮಾಗಳನ್ನು ಹಿಂದಿಗೆ ಡಬ್ ಮಾಡ್ತೀರಿ? ಹಣ ಮಾಡೋ ವಿಚಾರಕ್ಕೆ ಬಂದಾಗ ನಿಮಗೆ ಹಿಂದಿ ಭಾಷಿಗರು ವಾಸಿರುವ ಪ್ರಾಂತ್ಯಗಳಿಗೆ ನಿಮ್ಮ ಸಿನಿಮಾಗಳನ್ನು ಹಿಂದಿಗೆ ಡಬ್ ಮಾಡಿ ಕೊಂಡೊಯ್ದು ಅವರಿಗೆ ತೋರಿಸಿ ಹಣಗಳಿಸುತ್ತೀರಿ. ಆದರೆ, ಶಿಕ್ಷಣದ ವಿಚಾರಕ್ಕೆ ಬಂದ ಕೂಡಲೇ ಹಿಂದಿಯನ್ನೇಕೆ ವಿರೋಧಿಸುತ್ತೀರಿ? ಎಂದು ಅವರು ಹೇಳಿದ್ದಾರೆ.

ಕಾಕಿನಾಡ ಜಿಲ್ಲಾ ಕೇಂದ್ರದಲ್ಲಿ ಮಾ. 14ರಂದು ರಾತ್ರಿ ನಡೆದ ಪವನ್ ಕಲ್ಯಾಣ್ ರವರ ಜನಸೇನಾ ಪಾರ್ಟಿಯ 12ನೇ ಸಂಸ್ಥಾಪನಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಭಾರತ ಅನೇಕ ಭಾಷೆಗಳ ತವರೂರು. ಭಾರತದ ಅಭಿವೃದ್ಧಿಗೆ ಭಾರತದ ಎಲ್ಲಾ ಭಾಷೆಗಳೂ ಅವಶ್ಯಕ. ಕೇವಲ ಎರಡು ಭಾಷೆಗಳಿದ್ದರೆ ಸಾಕು ಎಂಬ ಧೋರಣೆ ಸರಿಯಲ್ಲ'' ಎಂದು ಅವರು ತಿಳಿಸಿದರು.

ಅಣ್ಣಾಮಲೈ ಕೂಡ ಕಿಡಿ

ತಮಿಳುನಾಡಿನ ದ್ವಿಭಾಷಾ ಶಿಕ್ಷಣ ನೀತಿಯನ್ನು ಟೀಕಿಸಿರುವ ತಮಿಳುನಾಡು ಬಿಜೆಪಿ ಅಧ್ಯಕ್ಷ ಅಣ್ಣಾಮಲೈ, ''ನೀವೀಗ ತ್ರಿಭಾಷಾ ಸೂತ್ರ ಬೇಡ ಎಂದು ಹೇಳುತ್ತಿದ್ದೀರಿ. ಕೇಂದ್ರ ಸರ್ಕಾರದ ತ್ರಿಭಾಷಾ ಶಿಕ್ಷಣ ಸೂತ್ರವನ್ನು ನೀವು ನಿರಾಕರಿಸುತ್ತೀರಿ. ಆದರೆ, ಇದನ್ನು ಬಿಜೆಪಿ ಮಾಡಿದ್ದಲ್ಲ. 1968ರಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಮತ್ತು ಈಗ ನೀವು ಸಖ್ಯ ಹೊಂದಿರುವ ಕಾಂಗ್ರೇಸ್ ಸರ್ಕಾರವೇ ಆ ತ್ರಿಭಾಷಾ ಸೂತ್ರವನ್ನು ಮಾಡಿದ್ದು ಎಂದು ಹೇಳಿದ್ದಾರೆ.

ಅವರ ಈ ಹೇಳಿಕೆ, ಕೇಂದ್ರ ಸರ್ಕಾರದ ತ್ರಿಭಾಷಾ ಶಿಕ್ಷಣ ಸೂತ್ರಕ್ಕೆ ವಿರುದ್ಧವಾಗಿ ತಮಿಳುನಾಡು ಮುಖ್ಯಮಂತ್ರಿ ಸೆಡ್ಡು ಹೊಡೆದಿರುವದೇ ಕಾರಣ. ತ್ರಿಭಾಷಾ ಸೂತ್ರದಡಿ ಹಿಂದಿಯನ್ನು ಕಡ್ಡಾಯವಾಗಿ ಕಲಿಸುವುದನ್ನು ನಮ್ಮ ಸರ್ಕಾರ ವಿರೋಧಿಸುತ್ತದೆ ಎಂದು ಹೇಳಿರುವ ಅಲ್ಲಿನ ಮುಖ್ಯಮಂತ್ರಿ ಎಂಕೆ ಸ್ಟ್ಯಾಲಿನ್, ಭಾರತದ ರಾಜ್ಯಗಳಿಗೆ ದ್ವಿಭಾಷಾ ಸೂತ್ರವೇ ಸಾಕು ಎಂದು ಹೇಳಿದ್ದಾರೆ. ಇದು ರಾಷ್ಟ್ರಮಟ್ಟದಲ್ಲಿ ದೊಡ್ಡ ಚರ್ಚೆಗೆ ಗ್ರಾಸವಾಗಿದೆ. ತಮಿಳುನಾಡಿನಲ್ಲಿ ಹಿಂದಿ ಹೇರಿಕೆಗೆ ಅವಕಾಶ ಕೊಡೋದಿಲ್ಲ ಎಂದಿರುವ ತಮಿಳುನಾಡಿನ ಸರ್ಕಾರ, ಅಲ್ಲಿ ಇತ್ತೀಚೆಗೆ ಬಜೆಟ್ ಮಂಡಿಸುವಾಗ ಹಿಂದಿಯ ರೂಪಾಯಿ ಚಿಹ್ನೆಯ ಬದಲಿಗೆ ರುಪಾಯಿ ಎಂದು ಸೂಚಿಸುವ ತಮಿಳು ಅಕ್ಷರವನ್ನು ಬಳಸಿದೆ. ಇದನ್ನು ತಮ್ಮ ಭಾಷಣದಲ್ಲಿ ಪ್ರಬಲವಾಗಿ ವಿರೋಧಿಸಿರುವ ಪವನ್ ಕಲ್ಯಾಣ್, ದ್ವಿಭಾಷಾ ಸೂತ್ರದ ಮೂಲಕ ನಾವು ದೇಶವನ್ನು ಮುಂದುವರಿಸಲು ಸಾಧ್ಯವಿಲ್ಲ, ನಮಗೆ ನಮ್ಮ ನಿತ್ಯದ ವ್ಯವಹಾರಕ್ಕೆ ಎಲ್ಲಾ ಭಾಷೆಗಳೂ ಬೇಕು. ಅದು ಕೇವಲ ಭಾರತದ ಏಕತೆಗಾಗಿ ಅಲ್ಲ, ಒಬ್ಬರು ಮತ್ತೊಂದು ಭಾಷೆಯನ್ನು ಪ್ರೀತಿಸಲು ಸಹ ಅದು ದಾರಿ ಮಾಡುಕೊಡುತ್ತದೆ ಎಂದು ಹೇಳಿದರು.

ಇದೇ ವೇಳೆ, ಸಂಸ್ಕೃತ ಹಾಗೂ ಹಿಂದಿ ಭಾಷೆಗಳನ್ನು ದ್ವೇಷಿಸುವವರ ಬಗ್ಗೆಯೂ ಕಿಡಿಕಾರಿದ ಅವರು, ಯಾಕೆ ಕೆಲವರು ಕೆಲವು ಭಾಷೆಗಳನ್ನು ದ್ವೇಷಿಸುತ್ತಾರೋ ನನಗೆ ಅರ್ಥವಾಗುತ್ತಿಲ್ಲ ಎಂದು ಹೇಳಿದರು. ಕೆಲವರು ಸಂಸ್ಕೃತ ಭಾಷೆಯನ್ನು ಕಟುವಾಗಿ ದ್ವೇಷಿಸುತ್ತಾರೆ. ತಮಿಳುನಾಡಿನ ರಾಜಕಾರಣಿಗಳು ಹಿಂದಿ ಭಾಷೆಯನ್ನು ದ್ವೇಷಿಸುತ್ತಾರೆ. ಶಿಕ್ಷಣದಲ್ಲಿ ತ್ರಿಭಾಷಾ ಸೂತ್ರದಡಿ ಹಿಂದಿಯನ್ನು ಕಡ್ಡಾಯವಾಗಿ ಕಲಿಸಲು ಸಿದ್ಧವಿಲ್ಲ ಎನ್ನುವುದು ಬೇಡ. ಯಾರಾದರೂ ತಮಿಳು ಮಕ್ಕಳು ಹಿಂದಿ ಕಲಿಯಲು ಆಸಕ್ತಿ ಹೊಂದಿದ್ದರೆ ಅವರು ಅದನ್ನು ಕಲಿಯಲು ಅವಕಾಶ ಕೊಡಿ. ಅದನ್ನೇಕೆ ನೀವು ನಿರಾಕರಿಸುತ್ತೀರಿ?'' ಎಂದು ಹೇಳಿದರು.

ಡಿಎಂಕೆಯ ದ್ವಿಭಾಷಾ ನೀತಿಯನ್ನು ಖಂಡನೆ

ಕೇಂದ್ರ ಸರ್ಕಾರ ಮತ್ತು ತಮಿಳುನಾಡಿನ ನಡುವೆ ನಡೆಯುತ್ತಿರುವ ಭಾಷಾ ವಿವಾದದ ಮಧ್ಯೆ, ಜನಸೇನಾ ಪಕ್ಷದ ಮುಖ್ಯಸ್ಥ ಮತ್ತು ಆಂಧ್ರಪ್ರದೇಶದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಭಾರತದ ಭಾಷಾ ವೈವಿಧ್ಯತೆಯನ್ನು ಸಂರಕ್ಷಿಸುವ ಅಗತ್ಯವನ್ನು ಒತ್ತಿಹೇಳಿದ್ದಾರೆ. ಭಾರತಕ್ಕೆ ಕೇವಲ ಎರಡು ಭಾಷೆಗಳಲ್ಲ, ತಮಿಳು ಸೇರಿದಂತೆ ಅನೇಕ ಭಾಷೆಗಳ ಅಗತ್ಯವಿದೆ. ನಮ್ಮ ರಾಷ್ಟ್ರದ ಸಮಗ್ರತೆಯನ್ನು ಕಾಪಾಡಿಕೊಳ್ಳಲು ಮಾತ್ರವಲ್ಲದೆ ಅದರ ಜನರಲ್ಲಿ ಪ್ರೀತಿ ಮತ್ತು ಏಕತೆಯನ್ನು ಬೆಳೆಸಲು ನಾವು ಭಾಷಾ ವೈವಿಧ್ಯತೆಯನ್ನು ಅಳವಡಿಸಿಕೊಳ್ಳಬೇಕು ಎಂದು ಕಲ್ಯಾಣ್ ಕಾಕಿನಾಡ ಜಿಲ್ಲೆಯಲ್ಲಿ ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುತ್ತಾ ಹೇಳಿದರು. ಜಿಲ್ಲೆಯ ಪಿತಾಪುರಂ ಪಟ್ಟಣದಲ್ಲಿ ನಡೆದ ಜನಸೇನಾ ಪಕ್ಷದ 12ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಕಲ್ಯಾಣ್ ಮಾತನಾಡುತ್ತಿದ್ದರು. ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಕೇಂದ್ರ ಸರ್ಕಾರದ ವಿರುದ್ಧ ಹಿಂದಿ ಹೇರಿಕೆ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ತ್ರಿಭಾಷಾ ಸೂತ್ರವನ್ನು ಜಾರಿಗೆ ತರಲು ನಿರಾಕರಿಸಿದ ಮಧ್ಯೆ ಕಲ್ಯಾಣ್ ಅವರ ಹೇಳಿಕೆ ಬಂದಿದೆ. ಈ ಮೂಲಕ ಅವರು ದ್ರಾವಿಡ ಮುನ್ನೇತ್ರದ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದ್ದು ಮಾತ್ರವಲ್ಲದೆ ಕೇಂದ್ರ ಸರ್ಕಾರದ ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡಿದ್ದಾರೆ.

100 ಯುವ ನಾಯಕರನ್ನು ಬೆಳೆಸಲು ಪವನ್ ಕಲ್ಯಾಣ್ ಪಣ

ಜನಸೇನಾ ಸಂಸ್ಥಾಪಕ ಪವನ್ ಕಲ್ಯಾಣ್ ಅವರು ತಮ್ಮ ಪಕ್ಷದ 11ನೇ ಸಂಸ್ಥಾಪನಾ ದಿನವನ್ನು ಆಚರಿಸಿದ್ದಾರೆ ಮತ್ತು ಸನಾತನ ಚಾಂಪಿಯನ್ ಆಗಿ ತಮ್ಮ ರುಜುವಾತುಗಳನ್ನು ಮತ್ತು ಹಲವಾರು ಅಡೆತಡೆಗಳ ನಡುವೆಯೂ ತಮ್ಮ ಪಕ್ಷದ ಯಶಸ್ಸನ್ನು ಪ್ರತಿಪಾದಿಸಿದ್ದಾರೆ. 2014 ರಲ್ಲಿ ಏಕಾಂಗಿಯಾಗಿ ಪಕ್ಷವನ್ನು ಪ್ರಾರಂಭಿಸಿದ್ದೇನೆ ಮತ್ತು ದೇಶದ ಮೇಲೆ ಪ್ರಭಾವ ಬೀರಬಲ್ಲ ಆಂಧ್ರಪ್ರದೇಶ ಮತ್ತು ತೆಲಂಗಾಣದಿಂದ 100 ನಾಯಕರನ್ನು ಬೆಳೆಸಲು ಎದುರು ನೋಡುತ್ತಿದ್ದೇನೆ ಎಂದು ಆಂಧ್ರಪ್ರದೇಶದ ಉಪಮುಖ್ಯಮಂತ್ರಿ ಹೇಳಿದ್ದಾರೆ. ನಮಗೆ ಸೋಲುವ ಭಯವಿಲ್ಲದ ಕಾರಣ. ನಾವು 2019ರಲ್ಲಿ ಸ್ಪರ್ಧಿಸಿದ್ದೇವೆ. ಸೋತ ನಂತರವೂ ನಾವು ಒಂದು ಹೆಜ್ಜೆ ಮುಂದೆ ಹೋದೆವು. ನಾವು ನಮ್ಮ ನೆಲದಲ್ಲಿ ನಿಂತು ಪಕ್ಷವನ್ನು ಎತ್ತಿಹಿಡಿದಿದ್ದೇವೆ. ನಾವು ನಮ್ಮ ಪರವಾಗಿ ನಿಂತಿದ್ದು ಮಾತ್ರವಲ್ಲ, ನಾಲ್ಕು ದಶಕಗಳಷ್ಟು ಹಳೆಯದಾದ ಟಿಡಿಪಿಯನ್ನು ಎತ್ತಿಹಿಡಿದಿದ್ದೇವೆ ಎಂದು ಪೂರ್ವ ಗೋದಾವರಿ ಜಿಲ್ಲೆಯಲ್ಲಿ ಬೃಹತ್ ಸಭೆಯನ್ನುದ್ದೇಶಿಸಿ ಮಾತನಾಡಿದ ಕಲ್ಯಾಣ್ ಹೇಳಿದರು. 2024ರ ಚುನಾವಣೆಯಲ್ಲಿ ಸ್ಪರ್ಧಿಸಿದ ಎಲ್ಲಾ 21 ಸ್ಥಾನಗಳನ್ನು ಗೆಲ್ಲುವ ಮೂಲಕ ಪಕ್ಷವು ಶೇ. 100 ರಷ್ಟು ಯಶಸ್ಸಿನ ಪ್ರಮಾಣದೊಂದಿಗೆ ವಿಧಾನಸಭೆಯನ್ನು ಪ್ರವೇಶಿಸಿದೆ ಎಂದು ಅವರು ಹೇಳಿದರು. ಟಿಡಿಪಿ ಮುಖ್ಯಸ್ಥ ಮತ್ತು ಮುಖ್ಯಮಂತ್ರಿ ಎನ್ ಚಂದ್ರಬಾಬು ನಾಯ್ಡು ಮತ್ತು ಐಟಿ ಸಚಿವ ನಾರಾ ಲೋಕೇಶ್ ಅವರೊಂದಿಗಿನ ತಮ್ಮ ಒಡನಾಟವನ್ನು ಜನರು ಗೌರವಿಸುತ್ತಾರೆ ಎಂದು ಅವರು ಇದೇ ಸಂದರ್ಭದಲ್ಲಿ ಹೇಳಿದರು.

ಮುಂದಿನ ತಿಂಗಳು ಶ್ರೀಲಂಕಾಕ್ಕೆ ಪ್ರಧಾನಿ ಮೋದಿ ಭೇಟಿ

ಕೊಲಂಬೊ: ಕಳೆದ ವರ್ಷ ಅಧ್ಯಕ್ಷ ಅನುರಾ ಕುಮಾರ ದಿಸ್ತನಾಯಕೆ ಅವರು ದೆಹಲಿಗೆ ಭೇಟಿ ನೀಡಿದ ಸಂದರ್ಭಮಾಡಿಕೊಂಡ ಒಪ್ಪಂದಗಳನ್ನು ಅಂತಿಮಗೊಳಿಸಲು ಭಾರತ ಪ್ರಧಾನಿ ನರೇಂದ್ರ ಮೋದಿ ಅವರು ಮುಂದಿನ ತಿಂಗಳ ಆರಂಭದಲ್ಲಿ ಶ್ರೀಲಂಕಾಕ್ಕೆ ಭೇಟಿ ನೀಡಲಿದ್ದಾರೆ' ಎಂದು ಶ್ರೀಲಂಕಾ ವಿದೇಶಾಂಗ ಸಚಿವೆ ವಿಜಿತಾ ಹೆರಾತ್ ಶನಿವಾರ ತಿಳಿಸಿದ್ದಾರೆ.

ಬಜೆಟ್ ಮೇಲಿನ ಚರ್ಚೆ ವೇಳೆ ಮಾತನಾಡಿದ ಸಚಿವೆ ಹೆರಾತ್, ನಮ್ಮ ನೆರೆಯ ರಾಷ್ಟ್ರ ಭಾರತದೊಂದಿಗೆ ನಾವು ನಿಕಟ ಸಂಪರ್ಕವನ್ನು ಹೊಂದಿದ್ದೇವೆ. ಭಾರತಕ್ಕೆ ನಮ್ಮ ಮೊದಲ ರಾಜತಾಂತ್ರಿಕ ಭೇಟಿ ಅದಾಗಿದ್ದು, ಈ ವೇಳೆ ದ್ವಿಪಕ್ಷೀಯ ಸಹಕಾರಕ್ಕೆ ಸಂಬಂಧಪಟ್ಟಂತೆ ಹಲವಾರು ಒಪ್ಪಂದಗಳನ್ನು ಮಾಡಿಕೊಂಡಿದ್ದೆವು' ಎಂದು ಹೇಳಿದ್ದಾರೆ.

ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಏಪ್ರಿಲ್ ತಿಂಗಳ ಆರಂಭದಲ್ಲಿ ಶ್ರೀಲಂಕಾಕ್ಕೆ ಭೇಟಿ ನೀಡಲಿದ್ದಾರೆ. ಭೇಟಿಯ ವೇಳೆ ಸೌರ ವಿದ್ಯುತ್ ಕೇಂದ್ರ ಉದ್ಘಾಟನೆ ಜೊತೆಗೆ ಹಲವಾರು ಯೋಜನೆಗಳಿಗೆ ಅವರು ಸಹಿ ಮಾಡಲಿದ್ದಾರೆ ಎಂದು ತಿಳಿಸಿದ್ದಾರೆ.

2015ರಿಂದ ದ್ವೀಪ ರಾಷ್ಟ್ರಕ್ಕೆ ಪ್ರಧಾನಿ ಮೋದಿ ಅವರ ನಾಲ್ಕನೇ ಭೇಟಿ ಇದಾಗಿದೆ.

ಸ್ಕೂಲ್ ಫೀಸ್ ಕಟ್ಟಲು ಆಗದೇ ಮಕ್ಕಳನ್ನೇ ಕೊಂದ ತಂದೆ

ಕಾಕಿನಾಡ: ಮಕ್ಕಳ ಶಾಲೆಯ ದುಬಾರಿ ಫೀಸ್ ಕಟ್ಟಲಾಗದ ತಂದೆಯೊಬ್ಬ ಬೇಸರಗೊಂಡು ತನ್ನಿಬ್ಬರು ಪುಟಾಣಿ ಮಕ್ಕಳನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಂಡ ಹೃದಯ ವಿದ್ರಾವಕ ಘಟನೆ ಆಂಧ್ರಪ್ರದೇಶದ ಕಾಕಿನಾಡದ ಸುಬ್ಬಾರಾವ್ ನಗರದಲ್ಲಿ ನಡೆದಿದೆ. ಮೃತ ಮಕ್ಕಳನ್ನು ಜೋಶಿಲ್ (7 ವರ್ಷ), ನಿಖಿಲ್ (6) ಎಂದು ಗುರುತಿಸಲಾಗಿದೆ. ಜೋಶಿಲ್ ಎಂಬಾತ ಒಂದನೇ ತರಗತಿಯಲ್ಲಿ ಓದುತ್ತಿದ್ದು, ನಿಖಿಲ್ ಯುಕೆಜಿಯಲ್ಲಿ ಓದುತ್ತಿದ್ದ. ಇವರಿಬ್ಬರನ್ನು ಕೊಂದ ತಂದೆಯ ಹೆಸರು ವಾನಪಳ್ಳಿ ಚಂದ್ರಕಿಶೋರ್. ಇವರು ಕಾಕಿನಾಡದ ವಕಲಪುಡಿ ಎಂಬಲ್ಲಿರುವ ಕೇಂದ್ರ ಸರ್ಕಾರದ ಒಎನ್‌ಜಿಸಿ ಕಚೇರಿಯಲ್ಲಿ ಅಸಿಸ್ಟಂಟ್ ಅಕೌಂಟೆಂಟ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಕಾಕಿನಾಡ ನಗರದ ಸುಬ್ಬಾ ರಾವ್ ನಗರದಲ್ಲಿರುವ ಅಪಾರ್ಟ್‌ಮೆಂಟ್ ಒಂದರಲ್ಲಿ ವಾಸವಾಗಿದ್ದರು.

ಕಳೆದ ವರ್ಷ, ಇಬ್ಬರೂ ಮಕ್ಕಳಿಗೂ 2 ಲಕ್ಷ ರೂ. ಶುಲ್ಕ ಕಟ್ಟಿದ್ದ ಚಂದ್ರಕಿಶೋರ್ ಅವರು, ಈ ವರ್ಷ ಫೀಸ್ ಕಟ್ಟಲಾಗದೇ ಒದ್ದಾಡುತ್ತಿದ್ದರು.

ಆರ್ಥಿಕ ತೊಂದರೆಗೆ ಸಿಲುಕಿದ್ದ ಚಂದ್ರಕಿಶೋರ್ ಅವರು, ಫೀಸ್ ಕಟ್ಟಲಾಗದೇ ಒದ್ದಾಡುತ್ತಿದ್ದರು. ಇದರು ಚಂದ್ರಕಿಶೋರ್ ಹಾಗೂ ಅವರ ಪತ್ನಿ ತನುಜಾ ಅವರೊಂದಿಗೆ ನಿತ್ಯವೂ ಜಗಳವಾಗುತ್ತಿತ್ತು. ಇದರಿಂದ ರೊಚ್ಚಿಗೆದ್ದ ಆತ, ತನ್ನ ಮಕ್ಕಳನ್ನು ಕೊಂದಿದ್ದಾನೆ ಎಂದು ಹೇಳಲಾಗಿದೆ. ಮಕ್ಕಳ ಕೊಲೆ ಹಾಗೂ ಚಂದ್ರಕಿಶೋರ್ ಅವರ ಆತ್ಮಹತ್ಯೆ ನಡೆದಾಗ ಪತ್ನಿ ತನಜು ಮನೆಯಲ್ಲಿರಲಿಲ್ಲ. ಅವರು ಆಚೆ ಹೋಗಿದ್ದರು. ಅವರು ಮನೆಗೆಬರುವಷ್ಟರಲ್ಲಿ ಹಗ್ಗದಿಂದ ಮಕ್ಕಳ ಕೈಕಾಲು ಕಟ್ಟಿದ ಚಂದ್ರಕಿಶೋರ್ ಇಬ್ಬರೂ ಮಕ್ಕಳನ್ನು ಬಕೆಟ್ ನೀರಿನಲ್ಲಿ ಮುಳುಗಿಸಿ ಅವರನ್ನು ಕೊಂದಿದ್ದಾರೆ. ಆನಂತರ ಬೇಸರಗೊಂಡು ತಾನೂ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹೊರಗಡೆಯಿಂದ ಬಂದ ಪತ್ನಿ ತನುಜಾ ಅವರು, ಬಾಗಿಲು ಬಡಿದಿದ್ದು ಬಾಗಿಲು ಯಾರೂ ತಗೆದಿಲ್ಲ, ಬಾಗಿಲು ತಟ್ಟಿ ಸಾಕಾಗಿ ಬೆಡ್ ರೂಂ ಕಿಟಕಿಯಿಂದ ಬಂದು ಇಣುಕಿ ನೋಡಿದಾಗ ಅಲ್ಲಿ ಪತಿ ನೇಣು ಹಾಕಿಕೊಂಡಿರುವುದು ಕಂಡುಬಂದಿದೆ. ಆಗ, ಅಕ್ಕಪಕ್ಕದ ಮನೆಯವರನ್ನು ಕೂಗಿ ಕರೆದ ತನುಜಾ, ಅವರ ನೆರವಿನಿಂದ ಬಾಗಿಲು

ಹಿಂದಿ ಬೇಡ ಅನ್ನೋರು ಯಾಕೆ ಡಬ್ಬಿಂಗ್ ಮಾಡ್ತೀರಿ

ತ್ರಿಭಾಷಾ ಸೂತ್ರದ ಮೂಲಕ ಕೇಂದ್ರ ಸರ್ಕಾರ ಹಿಂದಿ ಹೇರಿಕೆ ಮಾಡುತ್ತಿದೆ ಎಂದು ಆಕ್ಷೇಪಿಸಿರುವ ತಮಿಳುನಾಡು ಸಿಎಂ ಸ್ಟಾಲಿನ್‌ಗೆ ನಟ ಹಾಗೂ ಆಂಧ್ರಪ್ರದೇಶ ಡಿಸಿಎಂ ಪವನ್ ಕಲ್ಯಾಣ್ ತಿರುಗೇಟು ನೀಡಿದ್ದಾರೆ. ಹಿಂದಿ ಭಾಷೆ ವಿರೋಧಿಸುವವರು ತಮಿಳು ಸಿನಿಮಾವನ್ನು ಯಾಕೆ ಹಿಂದಿಗೆ ಡಬ್ಬಿಂಗ್ ಮಾಡ್ತೀರಾ ಎಂದು ಪವನ್ ಪ್ರಶ್ನಿಸಿದ್ದಾರೆ. ಕೇಂದ್ರ ಸರ್ಕಾರ ಮತ್ತು ತಮಿಳುನಾಡು ನಡುವೆ ನಡೆಯುತ್ತಿರುವ ತ್ರಿಭಾಷಾ ಫೈಟ್ ನಡುವೆ, ಜನಸೇನಾ ಪಕ್ಷದ ಮುಖ್ಯಸ್ಥ ಪವನ್ ಕಲ್ಯಾಣ್ ಈ ಹೇಳಿಕೆ ನೀಡಿದ್ದಾರೆ.

ಭಾರತದ ಭಾಷಾ ವೈವಿಧ್ಯತೆಯನ್ನು ಕಾಪಾಡುವ ಅಗತ್ಯವನ್ನು ಒತ್ತಿ ಹೇಳಿದ್ದಾರೆ.

ದೇಶಕ್ಕೆ ಎರಡಲ್ಲ, ತಮಿಳು ಸೇರಿದಂತೆ ಬಹು ಭಾಷೆಗಳು ಬೇಕು ಎಂದು ನಟ ಮಾತನಾಡಿದ್ದಾರೆ. ಭಾರತಕ್ಕೆ ತಮಿಳು ಸೇರಿದಂತೆ ಬಹು ಭಾಷೆಗಳ ಅಗತ್ಯವಿದೆ. ನಾವು ಭಾಷಾ ವೈವಿಧ್ಯತೆಯನ್ನು ಅಳವಡಿಸಿಕೊಳ್ಳಬೇಕು.

ನಮ್ಮ ರಾಷ್ಟ್ರದ ಸಮಗ್ರತೆಯನ್ನು ಕಾಪಾಡಿಕೊಳ್ಳುವುದು ಮಾತ್ರವಲ್ಲದೇ, ಜನರಲ್ಲಿ ಪ್ರೀತಿ ಮತ್ತು ಏಕತೆಯನ್ನು ಬೆಳೆಸಬೇಕು ಎಂದು ಕಾಕಿನಾಡ ಜಿಲ್ಲೆಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಆಶಯ ವ್ಯಕ್ತಪಡಿಸಿದ್ದಾರೆ. ಕೆಲವರು ಸಂಸ್ಕೃತವನ್ನು ಏಕೆ ಟೀಕಿಸುತ್ತಾರೆಂದು ನನಗೆ ಅರ್ಥವಾಗುತ್ತಿಲ್ಲ. ಆರ್ಥಿಕ ಲಾಭಕ್ಕಾಗಿ ತಮ್ಮ ಸಿನಿಮಾಗಳನ್ನು ಹಿಂದಿಗೆ ಡಬ್ ಮಾಡಲು ಅವಕಾಶ ನೀಡುವ ತಮಿಳುನಾಡು ರಾಜಕಾರಣಿಗಳು ಹಿಂದಿಯನ್ನು ಏಕೆ ವಿರೋಧಿಸುತ್ತಾರೆ? ಅವರು ಬಾಲಿವುಡ್‌ನಿಂದ ಹಣವನ್ನು ಬಯಸುತ್ತಾರೆ. ಆದರೆ ಹಿಂದಿ ಸ್ವೀಕರಿಸಲು ನಿರಾಕರಿಸುತ್ತಾರೆ.

ಪ್ರಭಾಸ್ ಜೊತೆಗಿನ ನಾಲ್ಕನೇ ಸಿನಿಮಾಕ್ಕೆ ಅಡ್ವಾನ್ಸ್ ಕೊಟ್ಟ ಹೊಂಬಾಳೆ

ನಟ ಪ್ರಭಾಸ್ ಭಾರತದ ಬಲು ಬೇಡಿಕೆಯ ನಟ. ಹಲವು ನಿರ್ಮಾಣ ಸಂಸ್ಥೆಗಳು ಪ್ರಭಾಸ್ ಕಾಲ್‌ಶೀಟ್‌ಗಾಗಿ ಕಾದು ನಿಂತಿವೆ. ಆದರೆ ಪ್ರಭಾಸ್ ಈಗಾಗಲೇ ಹೊಂಬಾಳೆಗೆ ಮುಂಗಡವಾಗಿ ಮೂರು ಸಿನಿಮಾ ಮಾಡಿಕೊಡುವುದಾಗಿ ಒಪ್ಪಂದ ಮಾಡಿಕೊಂಡಿದ್ದಾರೆ. ಅದರಲ್ಲಿ ಒಂದು ಸಿನಿಮಾ 'ಸಲಾರ್ 2'. ಇನ್ನೆರಡು ಸಿನಿಮಾಗಳು ಯಾವುವು ಇಲ್ಲಿದೆ ಮಾಹಿತಿ...

ಪ್ರಭಾಸ್ ಜೊತೆಗೆ ಮೂರು ಸಿನಿಮಾ ಮಾಡುವುದಾಗಿ ಹೊಂಬಾಳೆ ನಿರ್ಮಾಣ ಸಂಸ್ಥೆ ಇದಾಗಲೆ ಘೋಷಣೆ ಮಾಡಿದೆ. ಈಗಾಗಲೇ ಒಂದು ಸಿನಿಮಾವನ್ನು ಪ್ರಭಾಸ್ ಜೊತೆ ಮಾಡಿದ್ದಾಗಿದೆ. ಪ್ರಭಾಸ್ ಸಹ, ಹೊಂಬಾಳೆ ಮೇಲಿನ ನಂಬಿಕೆಯಿಂದ ಕತೆ, ನಿರ್ದೇಶಕ ಏನನ್ನೂ ಪ್ರಶ್ನೆ ಮಾಡದೆ ಬರೋಬ್ಬರಿ ಮೂರು ಸಿನಿಮಾ ಮಾಡಿಕೊಡುವುದಾಗಿ ಒಪ್ಪಂದ ಮಾಡಿಕೊಂಡಿದ್ದಾರೆ. ಈ ಮೂರರಲ್ಲಿ ಒಂದು ಸಿನಿಮಾ 'ಸಲಾರ್ 2'. 'ಸಲಾರ್' ಸಿನಿಮಾದ ಸೀಕ್ವೆಲ್ ಇನ್ನೊಂದು ವರ್ಷದಲ್ಲಿ ಚಿತ್ರೀಕರಣ ಪ್ರಾರಂಭಿಸಲಿದೆ. ಪ್ರಭಾಸ್‌ರ ಇನ್ನೆರಡು ಸಿನಿಮಾಗಳ ಕತೆ ಮತ್ತು ನಿರ್ದೇಶಕರನ್ನು ಹೊಂಬಾಳೆ ಈಗಾಗಲೇ ಅಂತಿಮಗೊಳಿಸಿದೆ. ಇತ್ತೀಚೆಗಷ್ಟೆ ನಿರ್ದೇಶಕರೊಬ್ಬರಿಗೆ ಅಡ್ವಾನ್ಸ್ ಕೊಟ್ಟು ಒಪ್ಪಂದ ಮಾಡಿಕೊಂಡಿದೆ. ಪ್ರಭಾಸ್ ಪ್ರಸ್ತುತ ರಘು ಹನುಪುಡಿ ನಿರ್ದೇಶನದ 'ಫೌಜಿ' ಹೆಸರಿನ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ತೆಲುಗು ಚಿತ್ರರಂಗದ ಇತ್ತೀಚೆಗಿನ ಕ್ಲಾಸಿಕ್ ಸಿನಿಮಾ 'ಸೀತಾ ರಾಮಂ' ನಿರ್ದೇಶಕ ಇದೇ ರಘು ಹನುಪುಡಿ. ಇವರೊಟ್ಟಿಗೆ ಸಿನಿಮಾದಲ್ಲಿ ನಟಿಸುತ್ತಿರುವಾಗಲೇ ಪ್ರಭಾಸ್‌ಗೆ ರಘು ಹನುಪುಡಿಯ ಸಿನಿಮಾ ಮೇಕಿಂಗ್ ಬಹಳ ಇಷ್ಟವಾಗಿ ರಘು ಅವರೊಟ್ಟಿಗೆ ಇನ್ನೊಂದು ಸಿನಿಮಾದಲ್ಲಿ ಕೆಲಸ ಮಾಡಲು ಉತ್ಸಾಹ ವ್ಯಕ್ತಪಡಿಸಿದ್ದಾರೆ.

ಅಡ್ವಾನ್ಸ್ ಕೊಟ್ಟು ಒಪ್ಪಂದ

ಗೋಲ್ ಸ್ಮಗ್ಲಿಂಗ್ ಕೇಸ್: ರನ್ಯಾ ಆಪ್ತ ವಶಕ್ಕೆ



ಬೆನ್ನ ಕಳ್ಳಸಾಗಾಣಿಕೆ ಪ್ರ... ಕರ ನಿರ್ದೇಶನಾಲಯದಿ... ರಾವ್ ಆಪ್ತನೊಬ್ಬನನ್ನು ತನಿ... ರೆ. ಚಿಕ್ಕಮಗಳೂರು ನಗ... ರು ಕಾರು ಚಾಲಕ ದೀಪಕ್‌ನ... ರ ಸಂ... ತಿ ಪಡೆದುಕೊಂಡಿದ್ದಾರೆ. ಈ ಪ್ರಕರಣದಲ್ಲಿ ದೀಪಕ್ ಪಾತ್ರ ಇದೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಎಲ್ಲಾ ಆಯಾಮಗಳಲ್ಲೂ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಮಾ. 3 ರಂದು ದುಬೈನಿಂದ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದ ರನ್ಯಾಳನ್ನು ಡಿಆರ್‌ಐ ಅಧಿಕಾರಿಗಳು ವಶಕ್ಕೆ ಪಡೆದಿದ್ದರು. ಈ ವೇಳೆ ಅವರು ಡಿಜಿಪಿ ರಾಮಚಂದ್ರರಾವ್ ಅವರ ಮಗಳು ಎಂದು ಹೇಳಿಕೊಂಡಿದ್ದಳು. ಅಲ್ಲದೇ ರನ್ಯಾಳನ್ನು ತಪಾಸಣೆ ಇಲ್ಲದೇ ಹೊರಗೆ ಕರೆತರಲು ವಿಮಾನ ನಿಲ್ದಾಣ ಠಾಣೆ ಹೆಡ್ ಕಾನ್‌ಸ್ಟೇಬಲ್ ಬಸವರಾಜ್ ತೆರಳಿದ್ದರು. ಕೂಡಲೇ ರನ್ಯಾಳನ್ನು ಲೋಹ ಪರಿಶೋಧಕ ಕಚೇರಿಯಲ್ಲಿ ಪರೀಕ್ಷೆಗೆ ಒಳಪಡಿಸಿದಾಗ 1 ಕೆಜಿ ತೂಕದ 14 ಗೋಲ್ಡ್ ಬಿಸ್ಕೆಟ್ ತಂದಿರುವುದು ಪತ್ತೆಯಾಗಿತ್ತು. ತೊಡೆಯ ಭಾಗಕ್ಕೆ 14 ಬಿಸ್ಕೆಟ್‌ಗಳನ್ನು ಗಮ್ ಹಾಕಿ ಅಂಟಿಸಿಕೊಂಡು ಬಳಿಕ ಟೇಪ್‌ನಿಂದ ಸುತ್ತಿಕೊಂಡಿದ್ದಳು. ಯಾವುದೇ ಸ್ಕ್ಯಾನರ್‌ನಲ್ಲಿ ಅನುಮಾನ ಬಾರದಂತೆ ಕ್ಯಾಂಪ್ ಬ್ಯಾಂಡೇಜ್ ಹಾಕಿಕೊಂಡು ಬಂದಿದ್ದಳು. ಕೂಡಲೇ ಡಿಆರ್‌ಐ ಅಧಿಕಾರಿಗಳು ವಶಕ್ಕೆ ಪಡೆದು ವಿಚಾರಿಸಿದಾಗದೇ ಆಕೆ ಪೊಲೀಸ್ ಅಧಿಕಾರಿಯ ಮಗಳು ಎನ್ನುವುದು ಬಯಲಾಗಿತ್ತು.

ಮಗಳ ಫೋಟೋ ತೆಗೆದರೆ ಕಾನೂನು ಕ್ರಮ

ಆಲಿಯಾ ಭಟ್ ವಾರ್ನಿಂಗ್

ಬಾಲಿವುಡ್ ನಟ ರಣಬೀರ್ ಕಪೂರ್ ಮತ್ತು ಆಲಿಯಾ ಭಟ್ ದಂಪತಿ ಮಗಳು ರಾಹಾ ಸುರಕ್ಷತೆಗಾಗಿ ದಿಟ್ಟ ನಿರ್ಧಾರವೊಂದನ್ನು ಕೈಗೊಂಡಿದ್ದಾರೆ. ಮಗಳ ಫೋಟೋವನ್ನು ಕ್ಲಿಕ್ಕಿಸಬೇಡಿ, ಒಂದು ವೇಳೆ ತೆಗೆದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಆಲಿಯಾ ಪಾಪರಾಜಿಗಳಿಗೆ ಖಡಕ್ ಸೂಚನೆಯನ್ನು ಕೊಟ್ಟಿದ್ದಾರೆ. ಮಾ.15ರಂದು ಆಲಿಯಾ ಭಟ್ 32ನೇ ವಸಂತಕ್ಕೆ ಕಾಲಿಡಲಿದ್ದಾರೆ. ಈ ಹಿನ್ನೆಲೆ 2 ದಿನ ಮುಂಚಿತವಾಗಿ ಮಾಧ್ಯಮಗಳ ಜೊತೆ ಹುಟ್ಟುಹಬ್ಬವನ್ನು ನಟಿ ಆಚರಿಸಿಕೊಂಡಿದ್ದಾರೆ. ಈ ವೇಳೆ ಮಾತನಾಡಿದ ಆಲಿಯಾ, ಯಾರೂ ಕೂಡ ತಮ್ಮ ಮಗಳ ಫೋಟೋ ತೆಗೆಯ ಬಾರದು ಮತ್ತು ಅನಧಿಕೃತವಾಗಿ ಬಳಸಬಾರದು ಎಂದು ಮನವಿ ಮಾಡಿದ್ದಾರೆ. ಒಂದು ವೇಳೆ ಕೆಲವರು ಮಾತು ಕೇಳದೇ ಇದ್ದರೆ ಅಂಥವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳದೇ ಬೇರೆ ಯಾವುದೇ ಆಯ್ಕೆ ಇಲ್ಲ ಎಂದಿದ್ದಾರೆ. ಕೇರ್ ಮಾಡದೇ ಇರುವವರಿಗೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ನಟಿ ಎಚ್ಚರಿಕೆ ನೀಡಿದ್ದಾರೆ. ನಟಿಯ ಈ ನಿರ್ಧಾರಕ್ಕೆ ಅಭಿಮಾನಿಗಳು ಮೆಚ್ಚುಗೆ ಸೂಚಿಸಿದ್ದಾರೆ. ಇನ್ನೂ 2022ರಲ್ಲಿ ರಣಬೀರ್ ಕಪೂರ್ ಜೊತೆ ಆಲಿಯಾ ಮದುವೆ ನಡೆಯಿತು. ಇವರ ಸುಂದರ ದಾಂಪತ್ಯಕ್ಕೆ 2 ವರ್ಷದ ಮಗಳು ರಾಹಾ ಸಾಕ್ಷಿಯಾಗಿದ್ದಾಳೆ.

ಒಳ್ಳೆಯ ರೇಟಿಂಗ್, ಕಾಮಿಡಿ ಜೊತೆ ಸಸ್ಪೆನ್ಸ್



ಬಸಿಲ್ ಜೋಸೆಫ್ ಮತ್ತು ಸೌಬಿನ್ ಶಾಹಿರ್ ನಟಿಸಿರುವ ಮಲಯಾಳಂ ಥ್ರಿಲ್ಲರ್ ಚಿತ್ರ, ಏಪ್ರಿಲ್ 11 ರಿಂದ ಸೋನಿಲಿವ್ ನಲ್ಲಿ ಲಭ್ಯವಾಗಲಿದೆ. ಒಂದು ಅಪರಾಧ ಮಿಸ್ಟರಿಯಾಗಿ, ಈ ಚಿತ್ರವು ಶಾಪ್ ಮಾಲೀಕನ ಸಾವಿನ ರಹಸ್ಯವನ್ನು ಅನ್ವೇಷಿಸುತ್ತದೆ. ಅನ್ವರ್ ರಶೀದ್ ನಿರ್ದೇಶನದ ಈ ಚಿತ್ರವು ಡಾರ್ಕ್ ಹ್ಯೂಮರ್ ಮತ್ತು ಥ್ರಿಲ್ಲರ್ ಅಂಶಗಳನ್ನು ಒಳಗೊಂಡಿದೆ.

ಒಟಿಟಿಯಲ್ಲಿ ಹೊಸ ಹೊಸ ಸಿನಿಮಾಗಳು ಪ್ರತಿ ವಾರ ರಿಲೀಸ್ ಆಗುತ್ತಲೇ ಇರುತ್ತವೆ. ಈ ಪೈಕಿ ಕೆಲವು ಗಮನ ಸೆಳೆದರೆ ಇನ್ನೂ ಕೆಲವು ಗಮನ ಸೆಳೆಯಲು ವಿಫಲವಾಗುತ್ತವೆ. 'ಪ್ರಾವಿನ್‌ಕೂಡು ಶಾಪು' ಚಿತ್ರ ಜನವರಿ 16ರಂದು ಥಿಯೇಟರ್‌ನಲ್ಲಿ ರಿಲೀಸ್ ಆಗಿ ಮೆಚ್ಚುಗೆ ಪಡೆಯಿತು. ಈಗ ಚಿತ್ರ ಒಟಿಟಿಯಲ್ಲಿ ಬರಲು ರೆಡಿ ಆಗಿದೆ.

ಯಾವಾಗ ಸಿನಿಮಾ ಒಟಿಟಿಯಲ್ಲಿ ಲಭ್ಯ, ಯಾವ ರೀತಿಯ ಚಿತ್ರ ಇದು ಎಂಬಿತ್ಯಾದಿ ವಿಚಾರಗಳನ್ನು ಈ ಸ್ಟೋರಿಯಲ್ಲಿ ವಿವರಿಸುತ್ತಿದ್ದೇವೆ. 'ಪ್ರಾವಿನ್‌ಕೂಡು ಶಾಪು' ಚಿತ್ರದಲ್ಲಿ ಸೌಬಿನ್ ಶಾಹಿರ್, ಬಸಿಲ್ ಜೋಸೆಫ್ ಮೊದಲಾದವರು ನಟಿಸಿದ್ದಾರೆ. ಇದು ಮಲಯಾಳಂ ಭಾಷೆಯ ಸಿನಿಮಾ. ಇದರಲ್ಲಿ ಬಸಿಲ್ ಜೋಸೆಫ್ ಅವರು ಸಬ್ ಇನ್‌ಸ್ಪೆಕ್ಟರ್ ಪಾತ್ರ ಮಾಡಿದರೆ, ಸೌಬಿನ್ ಅವರು ಮಾಜಿ ಮ್ಯಾಜಿಶಿಯನ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಸಿನಿಮಾ ಡಾರ್ಕ್ ಮಾಮಿಡಿ ರೂಪದಲ್ಲಿ ಮೂಡಿ ಬಂದಿದೆ. ಜೊತೆಗೆ ಥ್ರಿಲ್ಲರ್ ಅಂಶ ಕೂಡ ಈ ಸಿನಿಮಾದಲ್ಲಿ ಇದೆ. ಸೋನಿ ಲಿವ್‌ನಲ್ಲಿ ಈ ಸಿನಿಮಾ ವೀಕ್ಷಣೆಗೆ ಲಭ್ಯವಿದೆ. ಏಪ್ರಿಲ್ 11ರಿಂದ ಈ ಚಿತ್ರ ಲಭ್ಯವಾಗಲಿದೆ. ಈ ಬಗ್ಗೆ ಸೋನಿಲಿವ್ ಕಡೆಯಿಂದ ಅಧಿಕೃತ ಘೋಷಣೆ ಆಗಿದೆ.

ಒಟಿಟಿಯಲ್ಲಿ ಮಿಸ್ ಮಾಡಿಕೊಳ್ಳಬೇಡಿ

ಡೆಲ್ಲಿ ಕ್ಯಾಪಿಟಲ್ಸ್‌ಗೆ ಕನ್ನಡಿಗನ ಎಂಟ್ರಿ

ಐಪಿಎಲ್ ಆರಂಭಕ್ಕೆ ದಿನಗಣನೆ ಶುರುವಾಗಿದೆ. ಮಾರ್ಚ್ 22 ರಿಂದ ಆರಂಭವಾಗಲಿರುವ ರಂಗೀನ್ ಕ್ರಿಕೆಟ್ ಟೂರ್ನಿಗಾಗಿ ಈಗಾಗಲೇ ಎಲ್ಲಾ ತಂಡಗಳು ಸಿದ್ಧತೆಗಳನ್ನು ಶುರು ಮಾಡಿಕೊಂಡಿದೆ. ಇದರ ನಡುವೆ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಕನ್ನಡಿಗ ಕೂಡ ಎಂಟ್ರಿ ಕೊಟ್ಟಿದ್ದಾನೆ. ಅದು ಸಹ ರಾಕಿ ಭಾಯ್ ಸ್ಟೈಲ್‌ನಲ್ಲಿ ಎಂಬುದು ವಿಶೇಷ. ಹೌದು, ಈ ಬಾರಿ ಡೆಲ್ಲಿ ಕ್ಯಾಪಿಟಲ್ಸ್ ಪರ ಮೂವರು ಕನ್ನಡಿಗರು ಕಾಣಿಸಿಕೊಳ್ಳಲಿದ್ದಾರೆ. ಕರ್ನಾಟಕದ ಕ್ರಿಕೆಟಿಗರಾದ ಕೆಎಲ್ ರಾಹುಲ್, ಕರುಣ್ ನಾಯರ್ ಹಾಗೂ ಮನ್ವಂತ್ ಕುಮಾರ್ ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿದ್ದಾರೆ.

ಇವರಲ್ಲಿ ಇದೀಗ ಕನ್ನಡಿಗ ಕರುಣ್ ನಾಯರ್ ಡೆಲ್ಲಿ ಕ್ಯಾಪಿಟಲ್ಸ್ ಕ್ಯಾಂಪ್ ಅನ್ನು ಸೇರಿಕೊಂಡಿದ್ದಾರೆ.

ಕರುಣ್ ನಾಯರ್ ಎಂಟ್ರಿಯನ್ನು ರಾಕಿ ಭಾಯ್ ಸ್ಟೈಲ್‌ನಲ್ಲಿ ಚಿತ್ರೀಕರಿಸಲಾಗಿದ್ದು, ಇದರ ವಿಡಿಯೋವನ್ನು ಡೆಲ್ಲಿ ಕ್ಯಾಪಿಟಲ್ಸ್ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದೆ. ಇದೀಗ ಈ ವಿಡಿಯೋ ಭಾರೀ ವೈರಲ್ ಆಗಿದ್ದು, ಅಭಿಮಾನಿಗಳಿಂದಲೂ ಮೆಚ್ಚುಗೆ ಪಡೆದುಕೊಳ್ಳುತ್ತಿದೆ. ಐಪಿಎಲ್ 2025 ಮಾರ್ಚ್ 22 ರಿಂದ ಆರಂಭವಾಗಲಿದೆ. ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆಯಲಿರುವ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕೊಲ್ಕತ್ತಾ ನೈಟ್ ರೈಡರ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಮುಖಾಮುಖಿಯಾಗಲಿದೆ.

ಟೆಸ್ಟ್ ಕ್ರಿಕೆಟ್‌ನಿಂದ ದೂರವಿರಲು ನಿರ್ಧರಿಸಿದ ವರುಣ್

ಟೀಂ ಇಂಡಿಯಾದ ಗೂಗ್ಲಿ ಸ್ಪಿನ್ನರ್ ವರುಣ್ ಚಕ್ರವರ್ತಿ ಅವರು ಟಿ20 ಮತ್ತು ಏಕದಿನ ಕ್ರಿಕೆಟ್‌ನಲ್ಲಿ ಅದ್ಭುತ ಪ್ರದರ್ಶನ ನೀಡು ತ್ತಿದ್ದಾರೆ. ಆದರೆ, ಅವರು ತಮ್ಮದೆ ಕಾರಣ ನೀಡಿ ಟೆಸ್ಟ್ ಕ್ರಿಕೆಟ್ ಆಡದಿರಲಿ ನಿರ್ಧರಿಸಿದ್ದಾರೆ. ಅವರ ಬೌಲಿಂಗ್ ಶೈಲಿ ಟೆಸ್ಟ್ ಕ್ರಿಕೆಟ್‌ಗೆ ಸೂಕ್ತವಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಆದರೆ, ಅವರ ಈ ನಿರ್ಧಾರ ಅಭಿಮಾನಿಗಳಿಗೆ ಆಶ್ಚರ್ಯವನ್ನುಂಟು ಮಾಡಿದೆ.

ವರುಣ್ ಚಕ್ರವರ್ತಿ... ಕಳೆದೊಂದು ತಿಂಗಳಿಂದ ಭಾರತ ಕ್ರಿಕೆಟ್ ಮಾತ್ರವಲ್ಲದೆ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸದ್ದು ಮಾಡುತ್ತಿರುವ ಟೀಂ ಇಂಡಿಯಾ ಸ್ಪಿನ್ನರ್. ತನ್ನ ಮ್ಯಾಜಿಕಲ್ ಎಸೆತಗಳಿಂದ ಎಂತಹಾ ಬ್ಯಾಟ್ಸ್‌ಮನ್ ಅನ್ನು ಕಟ್ಟಿಹಾಕುವ ಕಲೆ ಕಲಿತಿರುವ ವರುಣ್, ಪ್ರಸ್ತುತ ಟೀಂ ಇಂಡಿಯಾ ಸ್ಪಿನ್ ವಿಭಾಗದಲ್ಲಿ ಖಾಯಂ ಸ್ಥಾನ ಪಡೆದುಕೊಂಡಿದ್ದಾರೆ. ಗೌತಮ್ ಗಂಭೀರ್ ಟೀಂ ಇಂಡಿಯಾ ಕೋಚ್ ಆದ ಬಳಿಕ ವರುಣ್ ಚಕ್ರವರ್ತಿಯ ನಸೀಬು ಬದಲಾಗಿದ್ದು, ಕೆಲವೇ ದಿನಗಳ ಅಂತರದಲ್ಲಿ ವರುಣ್‌ಗೆ ಟಿ20 ಹಾಗೂ ಏಕದಿನ ತಂಡದಲ್ಲಿ ಆಡುವ ಅವಕಾಶ ಸಿಕ್ಕಿದೆ. ಇತ್ತ ಸಿಕ್ಕ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವಲ್ಲಿ ವರುಣ್ ಯಶಸ್ವಿಯಾಗಿದ್ದಾರೆ. ಈ ಎರಡೂ ಮಾದರಿಗಳಲ್ಲೂ ವರುಣ್‌ಗೆ ಕೆಲವು ವರ್ಷಗಳವರೆಗೆ ಸ್ಥಾನ ಫಿಕ್ಸ್ ಅಂತಲೇ ಹೇಳಬಹುದು. ಟಿ20 ಹಾಗೂ ಏಕದಿನ ಮಾದರಿಯಲ್ಲಿ ಟೀಂ ಇಂಡಿಯಾ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ವರುಣ್, ಟೆಸ್ಟ್ ಮಾದರಿಗೆ ಪದಾರ್ಪಣೆ ಮಾಡುವುದು ಯಾವಾಗ ಎಂಬುದು ಎಲ್ಲಾ ಅಭಿಮಾನಿಗಳ ಪ್ರಶ್ನೆಯಾಗಿದೆ. ಆದರೆ ಈ ಬಗ್ಗೆ ವರುಣ್ ಕಡೆಯಿಂದ ಬಂದಿರುವ ಉತ್ತರ ಅಭಿಮಾನಿಗಳಿಗೆ ಆಘಾತ ತಂದಿದೆ. ಏಕೆಂದರೆ ಟೆಸ್ಟ್ ಕ್ರಿಕೆಟ್‌ನಿಂದ ಉಳಿಯಲು ನಿರ್ಧರಿಸಿರುವುದಾಗಿ ಸ್ವತಃ ವರುಣ್ ಅವರೇ ಹೇಳಿಕೊಂಡಿದ್ದಾರೆ. ಚಾಂಪಿಯನ್ಸ್ ಟ್ರೋಫಿಯಲ್ಲಿ ತಮ್ಮ ಬೌಲಿಂಗ್ ಸಾಮರ್ಥ್ಯವನ್ನು ಸಾಬೀತುಪಡಿಸಿದ ವರುಣ್ ಚಕ್ರವರ್ತಿ ಪ್ರಸ್ತುತ ಚರ್ಚೆಯ ವಿಷಯವಾಗಿದ್ದಾರೆ. ಪ್ರಶಸ್ತಿಯನ್ನು ಗೆದ್ದ ನಂತರ ದುಬೈನಿಂದ ಹಿಂದಿರುಗಿರುವ ಅವರು ಯೂಟ್ಯೂಬ್ ಚಾನೆಲ್‌ವೊಂದಕ್ಕೆ ಸಂದರ್ಶನ ನೀಡಿದ್ದರು. ಈ ಸಂದರ್ಭದಲ್ಲಿ ಅವರನ್ನು ಟೆಸ್ಟ್ ಕ್ರಿಕೆಟ್ ಆಡುವ ಬಗ್ಗೆ ಪ್ರಶ್ನಿಸಲಾಯಿತು. ಇದಕ್ಕೆ ಪ್ರತಿಕ್ರಿಯಿಸಿದ ಅವರು, ಪ್ರಸ್ತುತ 20 ಮತ್ತು 50 ಓವರ್‌ಗಳ ಕ್ರಿಕೆಟ್‌ನತ್ತ ಮಾತ್ರ ಗಮನ ಹರಿಸುತ್ತಿದ್ದೇನೆ. ನನಗೆ ಟೆಸ್ಟ್ ಕ್ರಿಕೆಟ್ ಆಡಲು ಆಸಕ್ತಿ ಇದೆ, ಆದರೆ ನನ್ನ ಬೌಲಿಂಗ್ ಶೈಲಿ ಟೆಸ್ಟ್‌ಗೆ ಹೊಂದಿಕೆಯಾಗುವುದಿಲ್ಲ. ನಿಜ ಹೇಳಬೇಕೆಂದರೆ, ನನ್ನ ಆಕ್ಷನ್ ಮತ್ತು ಬೌಲಿಂಗ್ ಶೈಲಿಯನ್ನು ನೋಡಿದರೆ, ಟೆಸ್ಟ್‌ನಲ್ಲಿ ದೀರ್ಘ ಸ್ಪೆಲ್‌ಗಳನ್ನು ಬೌಲ್ ಮಾಡಲು ನನಗೆ ಸಾಧ್ಯವಿಲ್ಲ ಎಂದಿದ್ದಾರೆ.

ವರುಣ್ ಅವರ ಈ ಹೇಳಿಕೆಯನ್ನು ಕೆಲವು ಅಭಿಮಾನಿಗಳು ಮೆಚ್ಚಿಕೊಂಡಿದ್ದಾರೆ. ಕನಿಷ್ಠ ಪಕ್ಷ ವರುಣ್‌ಗೆ ತನ್ನ ಬೌಲಿಂಗ್ ಬಗ್ಗೆ ಒಂದು ಕಲ್ಪನೆ ಇದೆ ಎಂದು ಹೇಳುತ್ತಿದ್ದಾರೆ. ಇನ್ನು ಚಾಂಪಿಯನ್ಸ್ ಟ್ರೋಫಿಯಲ್ಲಿ ವರುಣ್ ಪ್ರದರ್ಶನದ ಬಗ್ಗೆ ಹೇಳುವುದಾದರೆ.. ಆಡಿದ 3 ಪಂದ್ಯಗಳಲ್ಲಿ ಅವರು 9 ವಿಕೆಟ್‌ಗಳನ್ನು ಕಬಳಿಸಿದ್ದರು ಮತ್ತು ಪಂದ್ಯಾವಳಿಯಲ್ಲಿ ಎರಡನೇ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಆಗಿದ್ದರು

50 ಓವರ್ ಕ್ರಿಕೆಟ್‌ನತ್ತ ಗಮನ

ಆರ್‌ಸಿಬಿ ಕ್ಯಾಂಪ್ ಸೇರಿಕೊಂಡ ಕೊಹ್ಲಿ

ಐಪಿಎಲ್ 2025 ಟೂರ್ನಮೆಂಟ್ ಮಾರ್ಚ್ 22 ರಂದು ಆರಂಭವಾಗಲಿದೆ. ಚಾಂಪಿಯನ್ಸ್ ಟ್ರೋಫಿಯಲ್ಲಿ ಅದ್ಭುತ ಪ್ರದರ್ಶನ ನೀಡಿದ ವಿರಾಟ್ ಕೊಹ್ಲಿ ಇತ್ತೀಚೆಗೆ ಆರ್‌ಸಿ